
ದುಡಿವ ಜನದ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 22 ಮೇ 29, 2005 ಬೆಲೆ ರೂ. 3.00



ಯುಪಿಎ ಸರ್ಕಾರ ಒಂದು ವರುಷ



ಹಣಾಹಣಿಯ ಉಪಚುನಾವಣೆಗಳು

ಬಿಜೆಪಿ ಸೋಲಿಸಲು ಮತ್ತೊಂದು ಅವಕಾಶ



ಗ್ರಾಮೀಣ ಸಾಲದ ಬವಣೆ




ಅಂಜಲಿಗುಪ್ತಾ

ಕೋರ್ಟ್ ಮಾರ್ಷಲ್ ಪ್ರಕರಣ

ಫ್ಯಾಸಿಸಂ ವಿರೋಧಿ ವಿಜಯ ವಾರ್ಷಿಕೋತ್ಸವ





ಪುಸ್ತಕ ಬಿಡುಗಡೆ

ಅಂಜಲಿ ಗುಪ್ತ: ಕೋರ್ಟ್ ಮಾರ್ಷಲ್ ಪ್ರಕರಣ

ಭಾರತೀಯ ವಾಯುಪಡೆಯ ಪ್ರಥಮ ಮಹಿಳೈ ಫ್ಲೈಯಿಂಗ್ ಆಫೀಸರ್ ಅಂಜಲಿ ಗುಪ್ತಾ ಈಗ ಮಿಲಿಟರಿ ಕೋರ್ಟ್ ಮಾರ್ಷಲ್ ಎದುರಿಸುತ್ತಿದ್ದಾರೆ. ಅವರ ಮೇಲಿರುವ ಆರೋಪಗಳೇನು?

ಅಂತರಿಕ್ಷಕ್ಕೆ ಹಾರಿದ ಪ್ರಥಮ ಭಾರತೀಯ ಸಂಜಾತೆ ಕಲ್ಪನಾ ಚಾವ್ಲಾ ಎಂಬ ಹೆಗ್ಗಳಿಕೆಗೆ ಹಿರಿ ಹಿರಿ ಹಿಗ್ಗುವ ನಾವು ಕೋರ್ಟ್ ಮಾರ್ಷಲ್‌ಗೆ ಒಳಗಾದ ಪ್ರಥಮ (ವಿಶ್ವದಲ್ಲಿ) ಮಹಿಳೆ ಅಂಜಲಿ ಗುಪ್ತಾರನ್ನು ಗುರುತಿಸಬೇಕಾಗಿದೆ.

ಅಂಜಲಿಗುಪ್ತಾ - 29 ವರ್ಷದ ಅವಿವಾಹಿತ ವಾಯುಸೇನೆಯ ಫ್ಲೈಯಿಂಗ್ ಆಫೀಸರ್ ಜುಲೈ 2001ರಲ್ಲಿ ವಾಯುಸೇನೆಗೆ ನೇಮಕಗೊಂಡ ಅಂಜಲಿಗುಪ್ತಾ ಶಿಕ್ಷಣಾಧಿಕಾರಿಯಾಗಿ ಬೆಳಗಾಂ ನ ಏರ್‌ಫೋರ್ಸ್ ಸ್ಟೇಷನ್‌ಗೆ ನಿಯುಕ್ತಿ ಹೊಂದಿದರು. ನವೆಂಬರ್ 2003ರಲ್ಲಿ ಬೆಂಗಳೂರಿನ ಎ.ಎಸ್.ಟಿ.ಎ.ಗೆ ವರ್ಗಾವಣೆ ಗೊಂಡರು. ಇಲ್ಲಿ ಆಕೆಯ ಪದ ನಿಮಿತ್ತ ಜವಾಬ್ದಾರಿ ಶಿಕ್ಷಣ ವಿಭಾಗದ ಜೊತೆಯೇ ವಿವಿಧ ಹಣಕಾಸಿನ ಜವಾಬ್ದಾರಿಗಳನ್ನು ವಹಿಸಲಾಯಿತು.

ವೈದ್ಯಕೀಯ ವಿಭಾಗದಿಂದಾಚೆ ಮಹಿಳೆಯರನ್ನು ನೇಮಿಸಿಕೊಂಡ ಮೊದಲ ಸೇನಾವಲಯ ವಾಯುಸೇನೆ 1990ರಿಂದೀಚೆಗೆ ಅಂಜಲಿಗುಪ್ತಾರೂ ಸೇರಿದಂತೆ 600 ಮಹಿಳಾ ಆಫೀಸರುಗಳು ವಿವಿಧ ರ‍್ಯಾಂಕ್‌ಗಳ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕಳೆದ ಫೆಬ್ರುವರಿ ತಿಂಗಳಿನಲ್ಲಿ ಅಂಜಲಿ ಗುಪ್ತಾ ಮೇಲಾಧಿಕಾರಿಗಳಿಂದ ಲೈಂಗಿಕ ಕಿರುಕುಳ ನಡೆದಿದೆ ಎಂಬ ದೂರನ್ನು ವಿಮಾನಪುರ ಪೋಲಿಸ್ ಠಾಣೆಗೆ ನೀಡಿದ್ದಾರೆ. ಪ್ರಕರಣ ದಾಖಲಾಗುವ ಬದಲು - ಉನ್ನತ ಅಧಿಕಾರಿಗಳಿಗೆ ವರದಿ ಮಾಡಿ ಬಗೆಹರಿಸಿಕೊಳ್ಳುವಂತೆ ಪೊಲೀಸರು ಸಲಹೆ ಮಾಡುತ್ತಾರೆ. ನಂತರ ಏಪ್ರಿಲ್ 14ರಂದು ಆಕೆ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಮಹಾನಾತ್ರೆ

ಈ ಮಂತ್ರಿ ಮಂದಿಗಳು ವೇದಿಕೆಯನೇರಿ
ಮಹನಾತ್ರೆ ಅನ್ನುವರು ಭಾರತದ ನಾರಿ
ಕಂಪನಿಯ ಮಾಲಿಕರು ಇವಳಂಗವೆಲ್ಲ
ಜಾಹೀರಿಗಿಟ್ಟರೂ ಕೇಳುವವರಿಲ್ಲ

- ವಿಡಂಬಾರಿ



ಈಗ ಪ್ರಸಕ್ತ ವಾಯುಸೇನಾ ಕಾಯ್ದೆ 1950 ರ ಪ್ರಕಾರ - 7 ದೋಷಾರೋಪಗಳ ಪಟ್ಟಿ ಹೊತ್ತು ಕೋರ್ಟ್ ಮಾರ್ಷಲ್ ಎದುರಿಸುತ್ತಿದ್ದಾರೆ.

ಆಕೆಯ ಮೇಲಿರುವ ಆರೋಪಗಳು

1 ವಾಯುಸೇನೆಯ ಅಧಿಕಾರಿಗಳಿಗೆ ಲಭ್ಯವಿರುವ ಓಡಾಟದ ಖರ್ಚು (Conveyance Allowance) 1080/- ರೂ.ಗಳನ್ನು 5 ದಿನದ ಓಡಾಟಕ್ಕೆ ಜೂನ್ 2004 ರಲ್ಲಿ ಪಡೆದಿಕೊಂಡಿದ್ದಾರೆ. ಮುದ್ರಿತ ಕ್ಲೈಮ್ ಫಾರಂ ನಲ್ಲಿ ಕಾರ್ ನಂಬರ್ ಎಂದಿರುವ ಕಡೆ ತನ್ನ ದ್ವಿಚಕ್ರ ವಾಹನದ ಸಂಖ್ಯೆಯನ್ನು ನಮೂದಿಸಿದ್ದು ಆಕೆ ಎಸಗಿರುವ ಅಪರಾಧ.

2. ತಾನು ದೆಹಲಿಗೆ ಹೊರಟ ದಿನವನ್ನು ಬೆಂಗಳೂರಿನಲ್ಲಿ ಇದ್ದೆ ಎಂದು ಸುಳ್ಳು ವರದಿ ಮಾಡಿದ್ದು.

3. ಮೇ 19.2004 ರಂದು ತಾನು ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಿದ್ದೇನೆಂದು ನಮೂದಿಸಿ, ಒಂದು ಸೇವಾ ವಿಮಾನದಲ್ಲಿ ಪ್ರಯಾಣಿಸಿದ್ದಾರೆ.

4. ವಾಯುಸೇನೆಯ ಅಧಿಕಾರಿಗಳಿಗೆ ಒಪ್ಪದ ರೀತಿಯಲ್ಲಿ ದುರ್ವರ್ತನೆ ಮಾಡಿದ್ದಾರೆ. ಅದೆಂದರೆ ಒಬ್ಬ ಮೇಲಾಧಿಕಾರಿಯ ಕೈಯಿಂದ ಉಪಹಾರದ ಪೊಟ್ಟಣ ತೆಗೆದುಕೊಂಡು ನೆಲಕ್ಕೆ ಬಿಸಾಡಿದ್ದಾರೆ.

5. ಒಂದು ಮುಂಜಾನೆಯ ಕವಾಯಿತಿಗೆ ಹಾಜರಾಗಿಲ್ಲ.

6. 7ನೇ ಅಪರಾಧಗಳೆಂದರೆ - ಐದು ದಿನಗಳ ಸಂಕ್ಷಿಪ್ತ ವರದಿಗೆ ಹಾಜರಾಗಿಲ್ಲ.

ಮಾರ್ಚ್ 31,2005 ರಂದು AOC in C-S ಭೋಜ್ವಾನಿಯವರಿಂದ ಅವರಿಗೆ ಕೋರ್ಟ್ ಮಾರ್ಷಲ್ ನೋಟೀಸ್ ಜಾರಿಯಾಗಿದೆ. ಏಪ್ರಿಲ್ 11,05 ರಂದು ಅವರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ. 12.04.05 ರಿಂದ ಅವರನ್ನು ವಿಮಾನಪುರದ ಅವರ ವಸತಿಗೃಹದಲ್ಲಿ ಇಬ್ಬರು ಸೇನಾ ಮಹಿಳಾ ಆರಕ್ಷಕರ ಕಣ್ಗಾವಲಿನಲ್ಲಿ ಗೃಹಬಂಧನದಲ್ಲಿರಿಸಲಾಗಿದೆ. ಯಾರೊಂದಿಗೂ ಭೇಟಿಗೆ ಅವಕಾಶವಿಲ್ಲ, ನಾಗರಿಕ ಸಮಾಜದೊಡನೆ ಸಂಪರ್ಕ ದುಸ್ತರವೆನ್ನುವ ಸ್ಥಿತಿಯಲ್ಲಿರುವ ಅಂಜಲಿಗುಪ್ತಾ ಮಾನಸಿಕವಾಗಿ ಅತ್ಯಂತ ಪ್ರಕ್ಷುಬ್ಧರಾಗಿದ್ದಾರೆ. ಅವರ ಅನಾರೋಗ್ಯದಿಂದಾಗಿ ಆಸ್ಪತ್ರೆಗೂ ದಾಖಲಾಗಬೇಕಾಗಿ ಬಂದಿದೆ. ಈ ಎಲ್ಲ ಕಾರಣಗಳಿಂದ ಕೆಲವು ದಿನ ತಡೆಹಿಡಿಯಲ್ಪಟ್ಟ ಕೋರ್ಟ್ ಮಾರ್ಷಲ್ ಮೇ 9,2005 ರಿಂದ ಮತ್ತೆ ಪ್ರಾರಂಭವಾಗಿದೆ. ಪ್ರಥಮವಾಗಿ ಮಹಿಳಾ ಅಧಿಕಾರಿಯ ಮೇಲೆ ನಡೆಯುತ್ತಿರುವ ಕೋರ್ಟ್ ಮಾರ್ಷಲ್‌ಗೆ ಪ್ರಥಮ ಬಾರಿಗೆ ಮಾಧ್ಯಮ ಮತ್ತು ಸಾರ್ವಜನಿಕರಿಗೆ ಅವಕಾಶ ನೀಡಲಾಗಿದೆ.

ಅನಾರೋಗ್ಯದ ಕಾರಣದಿಂದ ಕೋರ್ಟ್ ಮಾರ್ಷಲ್‌ಗೆ ಬರಲು ತಡಮಾಡುವ ಅಂಜಲಿ, ಜಡ್ಜ್ ಅಡ್ವೋಕೇಟ್‌ರ ಅಸಮಾಧಾನ ಎದುರಿಸುತ್ತಾರೆ. ತನ್ನ ಬೇಡಿಕೆಗಳನ್ನು ಲಿಖಿತ ಕೊಡುವ ಆದೇಶ ಪಡೆಯುವ ಅಂಜಲಿ ಅದರಲ್ಲಿ ಬಳಸುವ ಶಬ್ದಗಳು ಸೇನೆಯ ಶಿಸ್ತಿಗೆ ಅನುಗುಣವಾಗಿಲ್ಲವೆಂಬ ಗದರಿಕೆಯ ಮೂಲಕ ಎಸೆಯಲ್ಪಟ್ಟದ್ದನ್ನು ಹೆಕ್ಕಿಕೊಳ್ಳಲು ನಿರಾಕರಿಸುತ್ತಾರೆ. ನಂತರ ಕೋರ್ಟಿನ ಆದೇಶದ ಮೇರೆಗೆ ಅದನ್ನವರಿಗೆ ಅದಕ್ಕೆಂದೇ ಮೀಸಲಾದ ಸಿಬ್ಬಂದಿಯ ಮೂಲಕ ಕೊಡಿಸಲ್ಪಡುತ್ತದೆ.

ಜನರಲ್ ಕೋರ್ಟ್ ಮಾರ್ಷಲ್ (ಜಿ.ಸಿ.ಎಮ್) ಒಬ್ಬ ಸಿವಿಲ್ ಡಿಫೆನ್ಸ್ ಕೌನ್ಸಿಲ್‌ರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡುತ್ತದೆ. ಆದರೆ ಆಕೆಯ ಗೃಹಬಂಧನ (Close arrest)ದಿಂದ ಮುಕ್ತಗೊಳಿಸಲು ತನ್ನ ವ್ಯಾಪ್ತಿಯಲ್ಲಿಲ್ಲ ಎಂಬ ಮಾತಿನೊಂದಿಗೆ ನಿರಾಕರಿಸುತ್ತದೆ. ಸೇನೆ ಒದಗಿಸಿದ ಡಿಫೆನ್ಸ್ ಕೌನ್ಸಿಲ್ ಬಗ್ಗೆ ಅಂಜಲಿಯವರಿಗೆ ನಂಬಿಕೆ ಇಲ್ಲ. ಈ ಹಂತದಲ್ಲಿ - ಆರ್ಥಿಕ ಮುಗ್ಗಟ್ಟನ್ನು ವ್ಯಕ್ತಪಡಿಸಿದ ಅಂಜಲಿಗೆ ಕೊಡಬೇಕಾದ ಸಂಬಳ ಬಾಕಿಯನ್ನು ಕೊಡಿಸುವ ಕೋರ್ಟ್ - 20 ದಿನಗಳ ಮುಂದೂಡಿಕೆಯನ್ನು ನಿರಾಕರಿಸುತ್ತದೆ. ಇಷ್ಟೆಲ್ಲ ಶಿಸ್ತು ಕಾಯ್ದೆಗಳ ಕುರಿತು ಹೇಳುವ ವಾಯುಸೇನಾ ಅಧಿಕಾರ - ಅಂಜಲಿಗುಪ್ತಾ ಮಾಡಿದ ಲೈಂಗಿಕ ಕಿರುಕುಳದ ಆರೋಪಕ್ಕೆ ಪ್ರತಿಯಾಗಿ - ಒಂದು ದೂರು ವಿಚಾರಣಾ ಸಮಿತಿಯನ್ನು ಮಹಿಳಾ ಆಯೋಗದ ಮಧ್ಯಪ್ರವೇಶದ ನಂತರ ರಚಿಸುತ್ತದೆ. ಆದರೆ ವಿಶಾಖ V/s ರಾಜಸ್ತಾನ ಸರ್ಕಾರದ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ನೀಡಿದ ಆದೇಶಗಳಾದ

1. ಮಹಿಳೆಯ ನೇತೃತ್ವದ ಸಮಿತಿ
2. ಕನಿಷ್ಟ ಒಬ್ಬ ಹೊರಗಿನ ವ್ಯಕ್ತಿ......
3. ಪ್ರಕರಣ ದಾಖಲಾದ ತಕ್ಷಣ ಆರೋಪಿಯನ್ನು ಸ್ಥಳದಿಂದ ವರ್ಗಾವಣೆ ಮಾಡುವುದು.... ಮುಂತಾದ ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಒಟ್ಟಾರೆಯಾಗಿ ಈ ಪ್ರಕರಣವನ್ನು ನೋಡುವಾಗ ರಕ್ಷಣಾ ವಲಯದಲ್ಲಿರಬೇಕಾದ ಶಿಸ್ತು, ನಿಯಮಗಳನ್ನು ಒಪ್ಪಿಕೊಳ್ಳುತ್ತಲೇ ಮಹಿಳಾ ಅಧಿಕಾರಿಗಳನ್ನು ನಿಯೋಜಿಸಿಕೊಂಡ ನಂತರದಲ್ಲಿ ಅಲ್ಲಿಯ ಕಾನೂನು, ರೀತಿ- ನಡವಳಿಕೆಗಳಲ್ಲಿ ಲಿಂಗ ಸಂವೇದನಾಶೀಲತೆಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಈ ಪ್ರಕರಣವನ್ನು ಬಹುಶಃ ಮೌನದಲ್ಲಿ - ಇತರ 599 ಮಹಿಳಾ ಅಧಿಕಾರಿಗಳು ವೀಕ್ಷಿಸುತ್ತಿದ್ದು ಮುಂದಿನ ದಿನಗಳಲ್ಲಿ ಹೊರ ಬರಲಿರುವ ತೀರ್ಪು ಎಲ್ಲರಿಗೂ ಮಾದರಿಯಾಗಬೇಕಿದೆ.

ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳಿಗೆ ಹೋರಾಡುವ ಜೊತೆ- ಎಲ್ಲ ಕಡೆ ಲಿಂಗ ಸಂವೇದನಾಶೀಲತೆಗಾಗಿ ಕೂಡ ಪ್ರಯತ್ನಗಳು ನಡೆಯಬೇಕು.

ಸಮವಸ್ತ್ರ ಧರಿಸುವಾಗಲೇ ಇಂತಹವುಗಳ ಅರಿವಿದ್ದ ಅಂಜಲಿಗುಪ್ತಾ ಇಡೀ ವ್ಯವಸ್ಥೆಯನ್ನು ಪ್ರಶ್ನಿಸಿದ್ದಾರೆ. ಹಲವರಿಗೆ ಮಾದರಿಯೂ ಆಗಲಿದ್ದಾರೆ.

ಸಮುದಾಯ - ಕೆ.ಜಿ.ಎಫ್

ಕಲೆ ಮನುಷ್ಯರ ಜೀವನದ ಅವಿಭಾಜ್ಯ ಅಂಗವಾಗಿದೆ. ಅನಕ್ಷರಸ್ಥರು ಮತ್ತು ದುಡಿಯುವ ಜನತೆಗೆ ಒಂದು ಪುಸ್ತಕ ಕಲಿಸಲಾಗದ್ದನ್ನು ಕಲಾವಿದರು ಹಾಡು ಅಭಿನಯದ ಮೂಲಕ ಸುಲಭವಾಗಿ ಅರ್ಥೈಸಬಲ್ಲರು. ಈ ನಿಟ್ಟಿನಲ್ಲಿ ದುಡಿಯುವ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಅವರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಜಾಗೃತಿ ಮೂಡಿಸಿ ಹೋರಾಟ, ಚಳುವಳಿಗಳಿಗೆ ಮುನ್ನಡೆಸುವ, ಮಹತ್ವಪೂರ್ಣ ಕಾರ್ಯವನ್ನು ಸಮುದಾಯ ಕೈಗೊಂಡು ಮುನ್ನಡೆಸುತ್ತಿರುವುದು ಅವಿಸ್ಮರಣೀಯ.

ತನ್ನ ಶಿಸ್ತು, ಸಂಘಟನೆ, ಸೈದ್ಧಾಂತಿಕ ಬದ್ಧತೆಯೊಂದಿಗೆ ಕೈಗೊಂಡ ಕಾರ್ಯಕ್ರಮಗಳು, ಅದರ ಪರಿಣಾಮ ನಮ್ಮ ಮುಂದಿರುವ ಸವಾಲುಗಳನ್ನು ಮತ್ತೆ ಮತ್ತೆ ಚರ್ಚಿಸುತ್ತಾ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಕೆ.ಜಿ.ಎಫ್‌ನ 'ಸಮುದಾಯ' ತಂಡವು ಹಲವಾರು ಸಮಸ್ಯೆಗಳ ನಡುವೆಯೂ ತನ್ನ 7ನೇ ಸಮ್ಮೇಳನವನ್ನು ಯಶಸ್ವಿಗೊಳಿಸಿರುವುದರ ಒಂದು ಕಿರು ನೋಟ.

ಬಿಇಎಂಎಲ್‌ನಲ್ಲಿ ಬಿ.ಎಂ.ಶ್ರೀ ಭವನದಲ್ಲಿ ಮೇ 8,2005 ರಂದು ನಡೆದ ಈ ಸಮ್ಮೇಳನದಲ್ಲಿ ತಾನು ಈ ಹಿಂದೆ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿಶ್ಲೇಷಿಸಲಾಯಿತು. ಸಂಘಟನೆಯನ್ನು ಜಿಲ್ಲೆಯಾದ್ಯಂತ ವಿಸ್ತರಿಸಲು ನಿರ್ಣಯ ಕೈಗೊಳ್ಳಲಾಯಿತು. ಮುಂದಿನ ದಿನಗಳಲ್ಲಿ ಮಕ್ಕಳಿಗೆ ಹೆಚ್ಚಿನ ತರಬೇತಿಯನ್ನು ನೀಡಲು ತೀರ್ಮಾನಿಸಲಾಯಿತು. ಮಹಿಳೆಯರ ಪಾತ್ರಗಳನ್ನೊಳಗೊಂಡ ನಾಟಕಗಳನ್ನು ನಿರ್ಮಾಣ ಮಾಡುವುದು, ಸ್ಥಳೀಯ ಪ್ರತಿಭೆಗಳನ್ನು ಗುರ್ತಿಸಿ ತರಭೇತಿ ನೀಡಿ ಪ್ರೋತ್ಸಾಹಿಸುವುದು ಇತರೆ ಸೋದರ ಸಂಘಟನೆಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು 'ಸಮುದಾಯ'ವನ್ನು ಬೆಳೆಸುವಂತಹ ಹಲವಾರು ಪ್ರಮುಖವಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೈಗೊಂಡು ಅವುಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಉದ್ಘಾಟನೆ :

ದುಡಿವವರ ನೋವು -ಬೆವರು ಕತೆಯಾಗಲಿ

ಜಾಗತೀಕರಣದಿಂದಾಗಿ ನಮ್ಮ ಜನಪದ ಕಲೆಗಳು ಮೂಲೆಗುಂಪಾಗುತ್ತಿವೆ. ಜೀವನದ ಎಲ್ಲ ರಂಗಗಳಲ್ಲಿ ಅದು ತನ್ನ ಪ್ರಭಾವ ಬೀರುತ್ತಿದೆ ಎಂದು ಹಿರಿಯ ಲೇಖಕ ಜನಪದ ತಜ್ಞ ಡಾ. ರಂಗಾರೆಡ್ಡಿ ಕೋಟಿರಾಂಪುರ ವಿಷಾಧಿಸಿದರು. ಅವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಶೋಷಕರ ಕೈಗಳು ಕಾಣದ ಕೈಗಳಾಗಿ ಹತ್ತು ಹಲವು ಮುಖಗಳನ್ನು ಹೊತ್ತು ದುಡಿವ ಜನತೆಯನ್ನು ಹಿಂಡುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ಇದರ ಬಗ್ಗೆ ಸದಾ ಎಚ್ಚರಿಕೆಯಿಂದಿದ್ದು ನಿರಂತರ ಕಾರ್ಯಕ್ರಮಗಳನ್ನು ರೂಪಿಸಿ ಜನತೆಯಲ್ಲಿ ಜಾಗೃತಿಯನ್ನು ಮೂಡಿಸಬೇಕೆಂದು ಕರೆ ನೀಡಿದರು.

ಬೆಂಗಳೂರು ಸಮುದಾಯದ ಶಶಿಧರ್ ಭಾರಿಘಾಟ್ ಹಾಗೂ ರವೀಂದ್ರನಾಥ್‌ರವರು ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ಸಮ್ಮೇಳನಕ್ಕೆ ಸುಭ ಹಾರೈಸಿದರು.

ಕಾರ್ಯದರ್ಶಿ ಜನಾರ್ಧನ್‌ರವರು ಸಂಘಟನಾ ವರದಿಯನ್ನು ಸದಸ್ಯರ ಮುಂದಿಟ್ಟರು ಹೆಚ್ಚಿನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದರು.

ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ ಹಾಗೂ ಕಾರ್ಮಿಕ ಮುಖಂಡರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಈ ಸಮುದಾಯ ಘಟಕಕ್ಕೆ 25 ವರ್ಷ ತುಂಬಿರುವ ಈ ಸಂದರ್ಭದಲ್ಲಿ ಸಮುದಾಯ 'ಬೆಳ್ಳಿಹಬ್ಬ'ವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಬೇಕೆಂದು ನಿರ್ಣಯವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಸಮ್ಮೇಳನವು ಮುಂದಿನ ಅವಧಿಗೆ ಅಧ್ಯಕ್ಷರಾಗಿ ಕೆ.ಎಸ್.ಶೆಟ್ಟಿ, ಉಪಾಧ್ಯಕ್ಷರುಗಳಾಗಿ ಅಚ್ಯುತ್, ಚೊಕ್ಕಲಿಂಗಂ, ಮನೋಹರ್‌ಭಟ್, ಕಾರ್ಯದರ್ಶಿಯಾಗಿ, ಜನಾರ್ಧನ್, ಜಂಟಿ ಕಾರ್ಯದರ್ಶಿಗಳಾಗಿ ಶ್ರೀಮತಿ ಫ್ಲೋರಾ, ಜಗದೀಶ್ ನಾಯಕ್, ಆರ್.ಡಿ.ಅಲಿಕ್ ಹಾಗೂ ಖಜಾಂಚಿಯಾಗಿ ಎ.ಜಿ.ಗಣೇಶ್ ಮತ್ತು 15 ಜನರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಾಜರಿದ್ದು ಯಶಸ್ವಿಯಾಗಿ ನಡೆಯಿತು. ಅಧ್ಯಕ್ಷತೆಯನ್ನು ಕೆ.ಎಸ್.ಶೆಟ್ಟಿಯವರು ವಹಿಸಿದ್ದು, ಸ್ವಾಗತವನ್ನು ಶ್ರೀಮತಿ ಫ್ಲೋರಾರವರು ಮಾಡಿದರು. ಆರ್.ಡಿ.ಅಲಿಕ್ ವಂದನಾರ್ಪಣೆ ಮಾಡಿದರು. ಆರಂಭದಲ್ಲಿ ರಾಮಚಂದ್ರ ಮತ್ತು ಸಂಗಡಿಗರು ಕ್ರಾಂತಿ ಗೀತೆಗಳನ್ನು ಹಾಡಿದರು.

ಇಂದಿಗಾಗಿ ನಾಳಿನ ಕಾರ್ಯಕ್ರಮ

- **ಮೇ 25, 2005**
  ಎಪಿಎಂಸಿ ಕಾಯ್ದೆ ಕುರಿತು ರಾಜ್ಯಮಟ್ಟದ ಸಭೆ
- **ಮೇ 27, ಜೂನ್ 2, 2005**
  ಎಸ್‌ಎಫ್‌ಐ ರಾಜ್ಯಮಟ್ಟದ ಅಧ್ಯಯನ ಶಿಬಿರ, ಹಾಸನ
- **ಮೇ 29, 2004**
  ಪುಸ್ತಕ ಬಿಡುಗಡೆ ಮತ್ತು ವಿಚಾರಗೋಷ್ಠಿ 'ಕೋಮುವಾದದ ಕರಾಳ ಮುಖಗಳು' ಭಾನುವಾರ ಬೆಳಿಗ್ಗೆ 10 ಕ್ಕೆ. ಸ್ಥಳ : ಸೆನೆಟ್ ಹಾಲ್, (ಸೆಂಟ್ರಲ್ ಕಾಲೇಜು), ಬೆಂಗಳೂರು.

ಹಣಾಹಣಿಯ ಉಪಚುನಾವಣೆಗಳು

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಕರ್ನಾಟಕದಲ್ಲೀಗ ಚುನಾವಣೆಗಳ ಸರಣಿ. ಗ್ರಾಮ ಪಂಚಾಯತ್ ಚುನಾವಣೆಗಳು ಮುಗಿದು ನೂತನ ಪಂಚಾಯತ್‌ಗಳು ಕಾರ್ಯಾರಂಭ ಮಾಡಿದವು. ಇನ್ನು ತಾಲ್ಲೂಕು ಪಂಚಾಯತ್-ಜಿಲ್ಲಾ ಪಂಚಾಯತ್ ಚುನಾವಣೆಗಳು ಜೂನ್‌ನಲ್ಲಿ ಮುಗಿದು ಜುಲೈನಲ್ಲಿ ಹೊಸ ಪಂಚಾಯತ್ ರಚನೆಯಾಗುವ ಪ್ರಕ್ರಿಯೆ ಕ್ಷೇತ್ರಗಳ ಸ್ಥಾನ ಮೀಸಲಾತಿ ಪ್ರಕಟಣೆಯೊಂದಿಗೆ ಆರಂಭಗೊಂಡಿದೆ. ಈ ನಡುವೆ ಘೋಷಿತವಾದ ಎರಡು ಕ್ಷೇತ್ರಗಳ ಉಪ ಚುನಾವಣೆಗಳ ಪ್ರಕ್ರಿಯೆ ಏರಿಸಿರುವ ಕಾವು ಬಿಸಿಲಿನ ತಾಪವನ್ನು ನಾಚಿಸುವಂತಿದೆ!

ಜೂನ್ 2 ರ ಶಿವಮೊಗ್ಗ, ಚಾಮರಾಜಪೇಟೆ ಉಪ ಚುನಾವಣೆಯಲ್ಲಿ ಬಿಜೆಪಿಯನ್ನು ಯಾಕೆ ಸೋಲಿಸಲೇಬೇಕು? ಜಾತಿ-ಹಣದ ಹಣಾಹಣಿ ನಡುವೆ ರಾಜಕೀಯ ನೀತಿಗಳು ಹೂತುಹೋಗಬಾರದು....

ಸಮರಸ್ವರೂಪ - ಪ್ರಚಾರ

ಶಿವಮೊಗ್ಗ ಲೋಕಸಭೆ ಹಾಗೂ ಬೆಂಗಳೂರಿನ ಚಾಮರಾಜ ಪೇಟೆ ವಿಧಾನಸಭೆಗೆ ಜೂನ್ 2 ರಂದು ಮತದಾನ. ಕೇದ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಅಧಿಕಾರರೂಢ ಸರ್ಕಾರದ ಮೇಲೆ ಸಂಖ್ಯಾ ದೃಷ್ಟಿಯ ಅಂತಹ ಗಂಭೀರ ಪರಿಣಾಮವನ್ನೇನೂ ಉಂಟು ಮಾಡುವುದಿಲ್ಲವಾದರೂ ಫಲಿತಾಂಶವು ರಾಜಕೀಯ ಪರಿಣಾಮಗಳ ಬಗ್ಗೆ ಕುತೂಹಲ ಕೆರಳಿಸಿವೆ. ಅಭ್ಯರ್ಥಿಗಳು - ಆಯಾ ಪಕ್ಷಗಳ ನಾಯಕರು ಕೆಕ್ಕರಗೊಂಡು ಚುನಾವಣೆಯ ಪ್ರಚಾರಕ್ಕಿಳಿದಿರುವುದು, ಮತದಾರರನ್ನು ಸೆಳೆಯಲು ನಡೆಸಿರುವ ಕಸರತ್ತುಗಳು ಚುನಾವಣೆಯನ್ನು ಸಮರ ಸ್ವರೂಪಕ್ಕೆ ತಿರುಸಿದೆ. ಎಲ್ಲರಲ್ಲೂ ಗೆಲ್ಲುವ ಪ್ರಬಲ ಬಯಕೆ, ಆದರೆ ಸಲ್ಲುವುದು ಒಂದು ಅಭ್ಯರ್ಥಿಗೆ ಮಾತ್ರವಲ್ಲವೇ? ಹೀಗಾಗಿ ಸ್ಪರ್ಧೆಯ ಹಣಾಹಣಿ. ಇದು ನಾಮಪತ್ರ ಸಲ್ಲಿಸುವ ಪ್ರಕ್ರಿಯಯೆಯಿಂದನಿತ್ಯವೂ ನಡೆದಿದೆ.

2004 ರ ಸಾರ್ವತ್ರಿಕ ಚುನಾವಣೆಯಲ್ಲಿ ಶಿವಮೊಗ್ಗ ಲೋಕಸಭಾಕ್ಷೇತ್ರದಿಂದ ಬಿಜೆಪಿ ಸಾವಿರಾರು ಜನರನ್ನು ಜಮಾಯಿಸಿ ಷೋ ತೋರಿಸಿತು. ಬಂಗಾರಪ್ಪ ಏನು ಎಂದು ಸಾಬೀತು ಪಡಿಸಿದ್ದು 25,000 ಕ್ಕೂ ಹೆಚ್ಚಿನ ಜನರನ್ನು ನೆರೆಸಿದಾಗಲೇ ಹೀಗೆ ಹಣ, ಜನ ಪ್ರದರ್ಶನವಿದ್ದೇ ಇದೆ. ಎಸ್.ಬಂಗಾರಪ್ಪ ಗೆದ್ದಿದ್ದು ಬಿಜೆಪಿ ಪಕ್ಷದಿಂದ. ಹಿಂದೆ ಆಯ್ಕೆಯಾಗಿದ್ದವರೂ ಅವರೇ ಆಗ ಕಾಂಗ್ರೆಸ್‌ನಿಂದ. 'ಭಾರತ ಪ್ರಕಾಶಿಸುತ್ತಿದೆ', 'ವಾಜಪೇಯಿಯೇ ಪ್ರಧಾನಿ' ಎಂಬಂತಹ ಕಣ್ಣು ಕೋರೈಸುವ ಘೋಷಣೆಗಳಿಗೆ ಮರುಳಾಗಿದ್ದು, ತನ್ನಂತಹ ನಾಯಕ ಬಿಜೆಪಿ ಪ್ರವೇಶಿಸುವುದರಿಂದ ಬಿಜೆಪಿಯೂ ಜಯಭೇರಿ ಹೊಡೆಯಬಹುದೆಂಬ ಲೆಕ್ಕಾಚಾರದಿಂದ' ಕೇಂದ್ರದಲ್ಲಿ ಮಂತ್ರಿ, ಇತ್ಯಾದಿ ಸ್ಥಾನಗಳ ನಿರೀಕ್ಷೆಯಿಂದ ಕಾಂಗ್ರೆಸ್ ತೊರೆದಿದ್ದರು ಬಂಗಾರಪ್ಪ. ಆಗ ಬಿಜೆಪಿ ಪಕ್ಷಕ್ಕೆ ಸೇರಿಕೊಳ್ಳುವಾಗ ರಾಜ್ಯ-ರಾಷ್ಟ್ರದ ನಾಯಕರು ನೀಡಿದ್ದ ಆಮಿಷ-ಆಶ್ವಾಸನೆಗಳು ಈಡೇರದೆ, ಬಿಜೆಪಿಯ ಕಾರ್ಯವೈಖರಿ-ನಾಯಕರ ಮೇಲಾಟ -ಬಡಿದಾಟಗಳು' ಮತ್ತ ವಿವಿಧ ರಾಜ್ಯಗಳು ಹಾಗೂಉಪ ಚುನಾವಣೆಗಳಲ್ಲಿ ನೆಲಕಚ್ಚುತ್ತಿದ್ದ ರೀತಿಯಿಂದ ಭ್ರಮನಿರಸನಗೊಂಡ ಈ ಮಾಜಿ ಮುಖ್ಯಮಂತ್ರಿ ಪಕ್ಷ ತೊರೆಯುವುದಾಗಿ ಪ್ರಕಟಿಸಿದರು. ಕೊನೆಗೆ ಮುಲಾಯಂ ಸಿಂಗ್ ರ ಸಮಾಜವಾದಿ ಪಕ್ಷ ಸೇರಿಕೊಂಡರು. ಬಿಜೆಪಿ ಎಂ.ಪಿ.ಯಾಗಿದ್ದ ಬಂಗಾರಪ್ಪನವರು ಸಂಸತ್ ಸದಸ್ಯತ್ವಕ್ಕೆ ರಾಜನಾಮೆ ನೀಡಿದ್ದಾಯಿತು.

ಹುಟ್ಟೂರು ಜಿಲ್ಲೆ ಮಂಡ್ಯದಿಂದ ಆಯ್ಕೆಯಾಗುವ ಬಗ್ಗೆ ಅನುಮಾನವಿದ್ದ ಅಂದಿನ ಮುಖ್ಯಮಂತ್ರಿ ಕೃಷ್ಣರವರು ಮೊನ್ನಿನ ಸಾರ್ವತ್ರಿಕ ಚುನಾವಣೆಯಲ್ಲಿ ಚಾಮರಾಜ ಪೇಟೆಯನ್ನು ಆರಿಸಿಕೊಂಡರು. ಹಿಂದೆ ಶಾಸಕರಾಗಿದ್ದ ಕಾಂಗ್ರೆಸ್‌ನ ದೇವರಾಜ್ ಕೃಷ್ಣರಿಗಾಗಿ ಸ್ಥಾನ 'ತ್ಯಾಗ' ಮಾಡಿದ್ದರು! ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅಧಿಕಾರ ಹಂಚಿಕೆಯ ಒಪ್ಪಂದದಂತೆ ಕೃಷ್ಣರವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಮುಂಬೈಗೆ ಹೋದರು. ಆಗ ರಾಜ್ಯಪಾಲರ ಹುದ್ದೆ 'ಅಲಂಕರಿ'ಸುವ ಎರಡು ದಿನಗಳು ಮೊದಲು ಶಾಸಕತ್ವಕ್ಕೆ ರಾಜೀನಾಮೆ ನೀಡಿದ್ದರು. ಇವೆರಡೂ ಕ್ಷೇತ್ರಗಳೂ ಮಾಜಿ ಮುಖ್ಯಮಂತ್ರಿಗಳಿಂದ ತೆರವಾದ ಕ್ಷೇತ್ರಗಳು.

ಶತಾಯ ಗತಾಯ ಯತ್ನ

ಶಿವಮೊಗ್ಗ ಕ್ಷೇತ್ರವನ್ನು ಬಿಜೆಪಿ ಕೈಯಿಂದ ಕಿತ್ತುಕೊಳ್ಳಲು ಕಾಂಗ್ರೆಸ್ ತೀವ್ರ ಪ್ರಯತ್ನದಲ್ಲಿದ್ದರೆ, ಇಬ್ಬರಿಗೂ ಸಿಗದಂತೆ ಮತ್ತೆ ತಮ್ಮ ಪಾಲಿಗೆ ದಕ್ಕಿಸಿಕೊಳ್ಳಲು ಬಂಗಾರಪ್ಪ ಶತಾಯಗತಾಯ ಯತ್ನಕ್ಕೆ ಇಳಿದಿದ್ದಾರೆ. ಇವರಿಗೆ ಪಕ್ಷಕ್ಕಿಂತ ವೈಯಕ್ತಿಕ ಪ್ರಭಾವ-ಸಂಬಂಧಗಳೇ ಪ್ರಧಾನ ಆಧಾರವಾಗಿರುವುದು ಕಾಣುತ್ತದೆ. ಕಾಂಗ್ರೆಸ್ ಆಯನೂರು ಮಂಜುನಾಥ್‌ರವರನ್ನು ಅಭ್ಯರ್ಥಿಯನ್ನಾಗಿಸಿದೆ. ಬಿಜೆಪಿ ಆರ್‌ಎಸ್‌ಎಸ್ ಕಟ್ಟಾಳು ಭಾನು ಪ್ರಕಾಶರನ್ನು ಅಭ್ಯರ್ಥಿಯಾಗಿಸಿದೆ. ಜೆಡಿ(ಎಸ್) ಹಿರಿಯ ರಾಜಕಾರಣಿ ತಿಮ್ಮಪ್ಪ ಹೆಗಡೆಯವರನ್ನು ಅಭ್ಯರ್ಥಿಯಾಗಿಸಿದೆ. ಚಾಮರಾಜಪೇಟೆಯಲ್ಲಿ ಕಾಂಗ್ರೆಸ್‌ಗೆ ಮತ್ತೆ ದೇವರಾಜ್, ಬಿಜೆಪಿಗೆ ಪ್ರಮೀಳಾ ನೇಸರ್ಗಿ, ಅಲ್ಲದೇ ಜೆಡಿ(ಎಸ್), ಸಮಾಜವಾದಿ ಪಕ್ಷವೂ ಅಭ್ಯರ್ಥಿಯನ್ನು ನಿಲ್ಲಿಸಿದೆ.

ನೀತಿಯನ್ನಲ್ಲ ಜಾತಿಯನ್ನು

ಈ ಎರಡೂ ಕ್ಷೇತ್ರಗಳಲ್ಲಿಯೂ ಬಹುತೇಕ ಎಲ್ಲಾ ಪಕ್ಷಗಳ ಅಭ್ಯರ್ಥಿಗಳು ಗೆಲುವಿನ ಲೆಕ್ಕಾಚಾರದಲ್ಲಿ ಬಹಳಷ್ಟು ಆಧರಿಸಿರುವುದು ನೀತಿಯನ್ನಲ್ಲ - ಜಾತಿಯನ್ನೇ. ಶಿವಮೊಗ್ಗಕ್ಕೆ ಭೇಟಿ ನೀಡಿದಾಗ ಅಲ್ಲಿ ಮಾತನಾಡಿದ ಬಹಳಷ್ಟು ಮತದಾರರು ಒಬ್ಬೊಬ್ಬರ ಗೆಲುವು-ಸೋಲಿಗೆ ಜಾತಿಗಳ ಬಲಾಬಲ-ಜಾತಿಗಳ ಸಮೀಕರಣವನ್ನೇ ಹೇಳುತ್ತಿದ್ದರು.

ಅಭ್ಯರ್ಥಿಗಳು ಪ್ರಬಲ ಜಾತಿಗಳಲ್ಲಿ ಜನ್ಮ ತಾಳಿರುವುದು, ಅದಕ್ಕೆ ಇನ್ನೊಂದು ಜಾತಿ ಸೇರಿದರೆ ಗೆಲುವು ತಮ್ಮದೇ ಎಂದು ಭಾವಿಸುತ್ತಿದ್ದಾರೆ. ಕ್ಷೇತ್ರದಲ್ಲಿ ಲಿಂಗಾಯತರು, ಬ್ರಾಹ್ಮಣರು, ಈಡಿಗರು ಒಂದುವರೆ ಲಕ್ಷ ಸಂಖ್ಯೆಯಲ್ಲಿ ಮೀರಿದವರಿದ್ದು ಇನ್ನೊಂದು ಜಾತಿಯನ್ನು ಸೇರಿಸಿಕೊಳ್ಳಲು ಹವಣಿಸುತ್ತಿದ್ದಾರಂತೆ. ಇವರಲ್ಲಿ ಯಾರಾದರೂ ಗೆದ್ದರೆ ಅಥವಾಸೋತರೆ ಕೊನೆಗೆ ದೂರಬಹುದಾದ್ದು ಅಲ್ಪಸಂಖ್ಯಾತ ಮುಸ್ಲಿಂರನ್ನು. ಯಾಕೆಂದರೆ ಇವರ ಮತಗಳು ಯಾರಿಗೆ ಹೋಗುತ್ತ ಅವರೇ ಗೆಲ್ಲುವುದು ಎಂಬ ಪ್ರಚಾರ ಎಲ್ಲೆಡೆಯಂತೆ ಇಲ್ಲೂ ಇದೆ. ಇದು ಪೂರ್ಣ ಸತ್ಯವಲ್ಲ. ಇತರ ಮತದಾರರಂತೆ ಇವರು ಎಂಬುದು ಹಲವು ಚುನಾವಣೆಗಳಲ್ಲಿ ಸ್ಪಷ್ಟವಿದೆ. ಯಾವುದೇ ಜಾತಿಗಳಲ್ಲಿನ ಜನ ತಮ್ಮದೇ ಜಾತಿ ಕುರಿತೇ ಆಲೋಚಿಸುತ್ತಾರೆ ಎಂಬುದು ತಪ್ಪು. ಅವರ ಬೆಂಬಲ ಗಳಿಸಲು ಜಾತಿವಾದವನ್ನು ಉದ್ರೇಕಗೊಳಿಸುವುದೇ ಕ್ಷೇತ್ರದಲ್ಲಿ ಅಂತಹ ಅಭ್ಯರ್ಥಿಗಳ - ಪಕ್ಷದ ಸಾಧನೆಯಾಗಿದೆ! ಚುನಾವಣೆಯಲ್ಲಿ ಅದರಲ್ಲೂ ಶಿವಮೊಗ್ಗದಂತಹ ಕೃಷಿ ಪ್ರದಾನವಾದ ಜಿಲ್ಲೆಯಲ್ಲಿ, ತೀವ್ರ ಬಿಕ್ಕಟ್ಟು ಅನುಭವಿಸುತ್ತಾ, ರೈತ ಉರುಳಿಗೆ ಕೊರಳು ಒಡ್ಡಿದ, ವಿಷ ಸೇವಿಸಿ ಆತ್ಮಹತ್ಯೆಗೀಡಾದ, ಬೆಲೆ ಕಾಣದೆ ನೆಲೆ ತಪ್ಪಿದ, ಕೈಗಾರಿಕೆ ಕುಸಿಯುತ್ತಿರುವ, ಗಂಭೀರವಾದ ಸಮಸ್ಯೆಗಳಿರುವಲ್ಲಿ ಇಂತಹ ಪ್ರಶ್ನೆಗಳು ಚುನಾವಣೆಯ ಕೇಂದ್ರ ವಿಷಯಗಳಾಗುತ್ತಿಲ್ಲ. ಇದನ್ನೇ ಎಲ್ಲರೂ ಮರೆಸುತ್ತಿರುವುದು ಈ ನೀತಿಗಳನ್ನು ಬೆಂಬಲಿಸುತ್ತಿರುವು ದರಿಂದಲೇ. ಇಂತಹವರು ಸಂಸತ್ತಿನಲ್ಲಿ ಏನು ಧ್ವನಿ ಎತ್ತಿಯಾರು?



ಸ್ಥಿತಿ ಹೀಗೆ ಮೇಲ್ನೋಟಕ್ಕೆ ಕಾಣುತ್ತಿದ್ದರೂ ಆಯ್ಕೆಯಾಗುವ ಅಭ್ಯರ್ಥಿ, ಜನರನ್ನು ಪ್ರತಿನಿಧಿಸುವ ಪಕ್ಷ ಪ್ರಸಕ್ತ ರಾಜಕೀಯ ಸಂದರ್ಭದಲ್ಲಿ ವಹಿಸುವ ಪಾತ್ರವು ಮುಖ್ಯವಾದುದು.

ಸಂಘಪರಿವಾರದ ಆವುಟಗಳು

ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬರನ್ನುಳಿದು ಬಹುತೇಕ ಶಾಸಕರೂ ಬಿಜೆಪಿಯವರೇ. ಲೋಕಸಭೆಗೂ ಹಿಂದೆ ಅಭ್ಯರ್ಥಿ ಗೆದ್ದು, ಬಿಜೆಪಿಗೆ ಹೊಸ ಶಕ್ತಿ ನೀಡಿದಂತಾಗಿತ್ತು. ಜನರಲಿದ್ದ ಕಾಂಗ್ರೆಸ್ ವಿರೋಧಿ ಮನೋಭಾವ, ಇನ್ನೊಂದು ಜಾತ್ಯತೀತ ಪರ್ಯಾಯವಿಲ್ಲದ ಸಂದರ್ಭವನ್ನು ಬಿಜೆಪಿ ಕೋಮುವಾದಿ ರಾಜಕಾರಣದಿಂದ ಬಳಸಿತು.

ಈ ರಾಜಕೀಯ ಬಲ ಬಳಸಿ ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಭದ್ರಾವತಿ ಮುಂತಾದೆಡೆ ಕೋಮುಗಲಭೆಗಳನ್ನೆಬ್ಬಿಸುವ ಮೂಲಕ (ಎನ್‌ಡಿಎ ಅಧಿಕಾರದಲ್ಲಿದ್ದರೂ ಅಡಿಕೆ, ತೆಂಗು, ಭತ್ತ ಇತ್ಯಾದಿ ಬೆಳೆವ ರೈತರ ಪ್ರಶ್ನೆ ಬಗ್ಗೆ ಮಾತನಾಡಲೇ ಇಲ್ಲ) ಕೋಮು ದ್ವೇಷದ ಕಿಚ್ಚು ಎಬ್ಬಿಸಿ ಜನರನ್ನು ಒಡೆಯಲು ಮುಂದಾಯಿತು. ಮಾತ್ರವಲ್ಲ, ಬಾಬಾ ಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆಯನ್ನಾಗಿಸುವ ಫ್ಯಾಸಿಸ್ಟ್ ಮಾದರಿ ಅಜೆಂಡಾ ಜಾರಿಗೆ 'ಕರಸೇವಕ'ರನ್ನು ಚಿಕ್ಕಮಗಳೂರಿಗೆ ಜಮಾಯಿಸಲಾಗುತ್ತಿದ್ದುದ್ದು ಶಿವಮೊಗ್ಗದಿಂದಲೇ. ಯಡಿಯೂರಪ್ಪ, ಶಂಕರಮೂರ್ತಿಯಂತಹ ನಾಮಕಾವಸ್ಥೆ 'ಅಧಿಕೃತ ವಿರೋಧ' ಪಕ್ಷದ ನಾಯಕರ ಹೋರಾಟಕ್ಕೆ ನೆಲೆಯೂ ಇದೆ ಆಗಿದೆ. ಹೀಗಾಗಿ ರಾಜ್ಯದ ರಾಜಕಾರಣದಲ್ಲಿ ಕೋಮುವಾದಿಗಳ ನೆಲೆಯನ್ನು ಅಲುಗಾಡಿಸುವುದು, ಅಲ್ಲಿಂದ ಬೇರು ಕೀಳುವಂತಾಗುವುದು ಅತೀ ಅಗತ್ಯವಿದೆ. ಆದ್ದರಿಂದಲೇ ಈ ಚುನಾವಣೆಯಲ್ಲಿ ಕೋಮುವಾದೀ ಬಿಜೆಪಿಯನ್ನು ಸೋಲಿಸುವುದು ಅತೀ ಅಗತ್ಯವಿದೆ.

ಚಾಮರಾಜಪೇಟೆಯಲ್ಲಿಯೂ ಬಿಜೆಪಿ ಕೃತ್ಯಗಳು ಸ್ವಾಸ್ಥ್ಯಕ್ಕೆ ಜನರ ಒಗ್ಗಟ್ಟಿಗೆ ಭಂಗ ತಂದಿದೆ. ಆದ್ದರಿಂದ ಇಲ್ಲೂ ಬಿಜೆಪಿ ಸೋಲುವುದು ಅತ್ಯಗತ್ಯ.

ಬಿಜೆಪಿ ಸೋಲಲೇಬೇಕು

ಈ ಎರಡೂ ಕ್ಷೇತ್ರಗಳ ಫಲಿತಾಂಶಗಳು ತಕ್ಷಣವೇ ಸರ್ಕಾರಗಳ ಮೇಲೆ ಗಂಭೀರ ಪರಿಣಾಮ ಬೀರುವುದಿಲ್ಲ. ನಿಜ, ಆದರೆ ಬೀದರ್ ಲೋಕಸಭಾ ಸ್ಥಾನದಲ್ಲಿ ಬಿಜೆಪಿ ಸೋತಂತೆ ಇಲ್ಲಿಯೂ ಸೋತರೆ ರಾಷ್ಟ್ರಮಟ್ಟದಲ್ಲಿ ಹಿಂದುತ್ವ ಅಜೆಂಡಾವನ್ನೇ ಹಿಡಿದು ಹೊರಟಿರುವ, ಜನರ ತೀರ್ಪಿಗೆ ಅವಮಾನ ಮಾಡುತ್ತಾ, ಪ್ರಜಾಪ್ರಭುತ್ವ ವಿರೋಧಿಯಾಗಿರುವ ಭ್ರಷ್ಟ ಬಿಜೆಪಿ-ಎನ್‌ಡಿಎ ಕೂಟಕ್ಕೆ ಇದು ಜನತೆ ಕೊಡುವ ಮತ್ತೊಂದು ಪ್ರಹಾರವಾಗುತ್ತದೆ.

ರಾಜ್ಯದಲ್ಲಿಯೂ ಜನತೆ ಕೋಮುವಾದೀ ಶಕ್ತಿಗಳಿಗೆ ಮಣೆ ಹಾಕುವುದಿಲ್ಲ, ನೆಲೆಗೊಡುವುದಿಲ್ಲ, ದೇಶದ್ರೋಹಿ-ಜನದ್ರೋಹಿ ಬಿಜೆಪಿ-ಎನ್‌ಡಿಎ ಮೈತ್ರಿಕೂಟದ ವಿರುದ್ಧ ಮತದಾರರ ಆಕ್ರೋಶ-ರಾಜಕೀಯ ಪ್ರಜ್ಞಾವಂತಿಕೆ ಮಂಕಾಗಿಲ್ಲ ಎಂಬ ಸ್ಪಷ್ಟ ಸಂದೇಶ ಹೋಗುತ್ತದೆ.


ಈ ದಿಕ್ಕಿನಲ್ಲಿ ಸೆಕ್ಯುಲರ್ ಶಕ್ತಿಗಳು ಯೋಚಿಸಿ ಕಾರ್ಯವೆಸಗಬೇಕಿದೆ. ಉಪ ಚುನಾವಣೆಗಳೆಂದು ನಿರ್ಲಕ್ಷಿಸುವಂತಿಲ್ಲ. ಆದ್ದರಿಂದ ಕೋಮುವಾದಿ ಬಿಜೆಪಿ ಸೋಲಿಸುವುದರತ್ತ ಲಕ್ಷ್ಯವಿರಬೇಕು.

ಕಾರಿಡಾರ್ - ಸತ್ಯಗಳು ಜನರೆದುರು ಹೊರಬರಲಿ

ಬೆಂಗಳೂರು-ಮೈಸೂರು ಕಾರಿಡಾರ್ ರಸ್ತೆ ಹಾಗೂ ಅದಕ್ಕೆ ಹೊಂದಿಕೊಂಡ 5 ಟೌನ್‌ಶಿಪ್‌ಗಳನ್ನು ಸ್ಥಾಪಿಸುವ ಯೋಜನೆಯ ಬಗ್ಗೆ ರಾಜ್ಯದ ಹೈಕೋರ್ಟ್ ನೀಡಿದ ತೀರ್ಪಿನ ಜಾರಿಗೆ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ನೀಡಿದೆ.

ಈ ಯೋಜನೆಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆಯೆಂದೂ, ಈ ಯೋಜನೆಯಲ್ಲಿ 'ನೈಸ್' ಪ್ರವೇಶ ಹಾಗೂ ಈ ಕಂಪನಿಯೊಂದಿಗೆ ಒಪ್ಪಂದ ಸುಸಂಬದ್ಧವಲ್ಲವೆಂಬ ಪ್ರಮುಖ ಪ್ರಶ್ನೆಗಳನ್ನೆತ್ತಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ, ಮಾಧುಸ್ವಾಮಿರವರು ಸಲ್ಲಿಸಿದ್ದರು. ಇವುಗಳನ್ನು ತಿರಸ್ಕರಿಸಿದ ರಾಜ್ಯ ಉಚ್ಚ ನ್ಯಾಯಾಲಯವು 'ಈ ಪ್ರಕರಣಕ್ಕೆ ಅಗತ್ಯವಾದ ಮಾಹಿತಿ-ದಾಖಲೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಕೆ.ಕೆ.ಮಿಶ್ರಾ ಹಾಗೂ ಅಧೀನ ಕಾರ್ಯದರ್ಶಿ ಎಂ. ಶಿವಲಿಂಗಸ್ವಾಮಿಯವರು ನ್ಯಾಯಾಲಯಕ್ಕೆ ಸಲ್ಲಿಸದೆ ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ನಿರ್ದೇಶಿಸಲಾಗಿತ್ತು. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದವರ ಮೇಲೆ ರೂ. 50,000 ಕೋರ್ಟ್ ಖರ್ಚುಗಳನ್ನು ಕಟ್ಟಿಕೊಡಲು ಸೂಚಿಸಿತ್ತು. ತಜ್ಞರ ಸಮಿತಿ ಹಾಗೂ ಯೋಜನೆ ಪರಾಮರ್ಶೆ ಸಮಿತಿಯ ಕುರಿತಾದ ಸರ್ಕಾರದ

ಪುಟ 8 ಕ್ಕೆ



ಮಂಗಳೂರು: ಡಿವೈಎಫ್ಐ ಬೆಳ್ಳಿಹಬ್ಬ

ಸಾಂಸ್ಕೃತಿಕ ಸವಿಯನ್ನು ಕೊಟ್ಟ 'ಸಾಂಸ್ಕೃತಿಕ ಉತ್ಸವ'

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಡಿ.ವೈ.ಎಫ್.ಐಗೆ 25 ವರ್ಷಗಳಾಗುತ್ತಿರುವ ಈ ಸಂದರ್ಭದಲ್ಲಿ ಬೆಳ್ಳಿಹಬ್ಬದ ಅಂಗವಾಗಿ ದೇಶದಾದ್ಯಂತ ಹಲವಾರು ಜನಪರ ವೈವಿಧ್ಯಮಯ ಚಟುವಟಿಕೆಯೊಂದಿಗೆ ಸಾಗುತ್ತಿರುವ ಡಿ.ವೈ.ಎಫ್.ಐ. ಬೆಳ್ಳಿಹಬ್ಬದ ಮೆರಗನ್ನು ಇಡೀ ದೇಶದ ಯುವಜನತೆಯ ಮಧ್ಯೆ ಕೊಂಡೊಯ್ಯಲು ತೀರ್ಮಾನಿಸಿದೆ.

ಆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳ್ಳಿಹಬ್ಬದ ಆಚರಣೆಗಳನ್ನು ಇಲ್ಲಿನ ಆಚರಣಾ ಸಮಿತಿಯ ಆಶ್ರಯದಲ್ಲಿ ಏಪ್ರಿಲ್-29,30ರಂದು ಮಂಗಳೂರಿನ ಪುರಭವನದಲ್ಲಿ ಎರಡು ದಿನಗಳ 'ಸಾಂಸ್ಕೃತಿಕ ಉತ್ಸವ' ನಡೆಸಲಾಯಿತು. ಬೆಳ್ಳಿಹಬ್ಬದ ನೆನಪಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕೆನ್ನುವ ಡಿ.ವೈ.ಎಫ್.ಐ ಕೇಂದ್ರ ಸಮಿತಿಯ ತೀರ್ಮಾನದ ಪ್ರಕಾರ ಏಪ್ರಿಲ್ 29ರಂದು ಜೂನಿಯರ್ ಮತ್ತು ಸೀನಿಯರ್ ವಿಭಾಗಗಳ ಮುಕ್ತ ಡ್ಯಾನ್ಸ್ ಸ್ಪರ್ಧೆ 'Dane Dance - 2005" ಯನ್ನು ಆಯೋಜಿಸಿತ್ತು. ಇದರಲ್ಲಿ ಸುಮಾರು 45 ತಂಡಗಳು ಭಾಗವಹಿಸಿ ಪುಟಾಣಿ ಮಕ್ಕಳಿಂದ ಹಿಡಿದು ಯುವಕ-ಯುವತಿಯರು ಹಾಡಿಗೆ ಹೆಜ್ಜೆಯನ್ನು ಹಾಕುತ್ತಾ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಿ ಪುರಭವನ ದಲ್ಲಿ ಸೇರಿದ್ದ ಅಪಾರ ಸಂಖ್ಯೆಯ ಪ್ರೇಕ್ಷಕರಿಗೆ ಸಾಂಸ್ಕೃತಿಕ ಸವಿಯನ್ನು ನೀಡಿದರು.

ಏಪ್ರಿಲ್ 30ರಂದು ನಡೆದ "ಬೆಳ್ಳಿಚುಕ್ಕಿ 2005" ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಭಿನವ ಮಂಗಳೂರು ತಂಡದ ಕಲಾವಿದರಿಂದ ವೈವಿಧ್ಯಮಯ ಮೂಕಾಭಿನಯ, ಜನಪದ ಹಾಗೂ ಕ್ರಾಂತಿಗೀತೆಗಳು ಪ್ರೇಕ್ಷಕ ವರ್ಗಕ್ಕೆ ಮುದವನ್ನು ನೀಡಿತು.. ಗಾಡ್ವಿನ್ ಬೆಳ್ತಂಗಡಿ ತಂಡದವರು ನೂತನವಾಗಿ ರಚಿಸಿದ ಸಂಗೀತಮಯ ಕ್ರಾಂತಿಗೀತೆಗಳು ಜನರನ್ನು ಹೊಸದೊಂದು ಪ್ರಪಂಚಕ್ಕೆ ಕೊಂಡೊಯ್ಯುವ ಹಾಗಿತ್ತು. ಅದೇ ರೀತಿ ಸೌಹಾರ್ದ ಕಲಾವಿದರು ಕುತ್ತಾರು ಇಲ್ಲಿನ ಪುಟಾಣಿಗಳ ಜನಪದ ನೃತ್ಯ, ಡಿವೈಎಫ್ಐ ಕಾರ್ಯಕರ್ತರ ವಿವಿಧ ಮನರಂಜನಾ ಕಾರ್ಯಕ್ರಮಗಳು ಜನರನ್ನು ಪುರಭವನಕ್ಕೆ ಆಕರ್ಷಣೆ ಮಾಡುತ್ತಿತ್ತು.

ಪೂರ್ವಭಾವಿ ಕಾರ್ಯಕ್ರಮಗಳು :

ಬೆಳ್ಳಿಹಬ್ಬದ ಅಂಗವಾಗಿ ಜಿಲ್ಲಾಮಟ್ಟದ ಆಚರಣಾ ಸಮಿತಿಯು ಅಸ್ತಿತ್ವಕ್ಕೆ ಬಂದ ನಂತರದಲ್ಲಿ ಅದರ ನಿರ್ದೇಶನದಂತೆ ಸ್ಥಳೀಯ ಘಟಕಗಳಾದ ಕೊಂಚಾಡಿ, ಉರ್ವಾಸ್ಟೋರು, ಕುಲಶೇಖರ ಘಟಕಗಳಲ್ಲಿ ಅಲ್ಲಿನ ಆಚರಣಾ ಸಮಿತಿಯ ಆಶ್ರಯದಲ್ಲಿ ಸಾಂಸ್ಕೃತಿಕ ವೈವಿದ್ಯಮಯ ಚಟುವಟಿಕೆಗಳಲ್ಲಿ ಬಹಳ ವ್ಯವಸ್ಥಿತವಾಗಿ ನಡೆಸಲಾಗಿದೆ. ಸ್ಥಳೀಯ ಪ್ರತಿಭೆಗಳಿಗೆ ವೇದಿಕೆಯನ್ನು ಕಲ್ಪಿಸುತ್ತಾ ಬೆಳ್ಳಿಹಬ್ಬಕ್ಕೆ ಸಾಂಸ್ಕೃತಿಕ ಮೆರಗನ್ನು ನೀಡಲಾಗಿತ್ತು.

ರಕ್ತದಾನ ಶಿಬಿರಗಳು :

ಡಿ.ವೈ.ಎಫ್.ಐ.ನ ಕೇಂದ್ರ ಸಮಿತಿಯ ತೀರ್ಮಾನದ ಪ್ರಕಾರ ಲಕ್ಷಾಂತರ ಜನರ ರಕ್ತವನ್ನು ಶೇಖರಣೆ ಮಾಡಬೇಕೆನ್ನುವ ಕರೆಗೆ ಜಿಲ್ಲೆಯಲ್ಲಿ ಉತ್ತಮ ಚಾಲನೆಯು ದೊರೆಯಿತು. ಈಗಾಗಲೇ ಜೋಕಟ್ಟೆ, ಕೊಂಚಾಡಿ, ಪಂಜಿಮೊಗರು, ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ನಡೆದ ರಕ್ತದಾನ ಶಿಬಿರಗಳಲ್ಲಿ 250ಕ್ಕಿಂತಲೂ ಅಧಿಕ ಕಾರ್ಯಕರ್ತರು ರಕ್ತದಾನ ಮಾಡುವ ಮೂಲಕ ಬೆಳ್ಳಿಹಬ್ಬದ ಸಂದೇಶವನ್ನು ಜನರ ಮಧ್ಯೆ ಕೊಂಡೊಯ್ಯಲಾಗಿದೆ. ಇನ್ನೂ ಅನೇಕ ಘಟಕಗಳಲ್ಲಿ ತಯಾರಿಗಳು ನಡೆಯುತ್ತಿವೆ.

ನಗರವನ್ನು ಅಲಂಕರಿಸಿದ ಪ್ರಚಾರಗಳು :

ಮೊದಲೇ ನಗರದಾದ್ಯಂತ ಹಚ್ಚಲಾದ ವರ್ಣರಂಜಿತ ಪೋಸ್ಟರ್ಸ್‌ಗಳು ಹಾಗೂ ಬ್ಯಾನರ್‌ಗಳು ಬೆಳ್ಳಿಹಬ್ಬದ ಸಂದೇಶವನ್ನು ಜನತೆಯ ಮಧ್ಯೆ ಕೊಂಡೊಯ್ದಿತ್ತು. ಪದೇ ಪದೇ ನೀಡಿದ ಪತ್ರಿಕಾ ಹೇಳಿಕೆ, ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆಗೊಳಿಸಿದ ಬೆಳ್ಳಿಹಬ್ಬದ ಕಾರ್ಯಕ್ರಮಗಳು ಇನ್ನಷ್ಟೂ ಪ್ರಚಾರವನ್ನು ತಂದುಕೊಟ್ಟಿದೆ. ಕೊನೆಯ ಎರಡು ದಿವಸಗಳ ಮುಂಚಿತವಾಗಿ ನಗರದಾದ್ಯಂತ ಹಾಕಿದ ಬಂಟಿಗ್ಸ್‌ಗಳು, ಶ್ವೇತಪತಾಕೆಗಳು ಹಾಗೂ ಅರ್ಥಪೂರ್ಣವಾದ ಘೋಷಣೆಗಳು ಎಲ್ಲರ ಗಮನವನ್ನು ನಮ್ಮ ಕಾರ್ಯಕ್ರಮದ ಕಡೆ ಸೆಳೆಯುತ್ತಿತ್ತು. ಎರಡೂ ದಿವಸಗಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸ್ಥಳೀಯ ಚಾನೆಲ್ ಮೂಲಕ ಇಡೀ ಜಿಲ್ಲೆಯ ಮೂಲೆ ಮೂಲೆಗೂ ತಲುಪುವಂತೆ ನೇರ ಪ್ರಸಾರ ಮಾಡಲಾಗಿತ್ತು.

ಹಿರಿಯ ಸಂಗಾತಿಗಳ ನೆನಪು :

1980 ರಲ್ಲಿ ಡಿವೈಎಫ್ಐ ಪ್ರಾರಂಭಗೊಂಡ ಎರಡು ಮೂರು ವರ್ಷಗಳ ನಂತರದಲ್ಲಿ ದ.ಕ ಜಿಲ್ಲೆಯಲ್ಲಿ ಡಿವೈಎಫ್ಐಯನ್ನು ಕಟ್ಟಿ ಬೆಳೆಸಲು ಕಾರಣಕರ್ತರಾದ ಹಲವಾರು ಹಿರಿಯ ಡಿವೈಎಫ್ಐ ಸಂಗಾತಿಗಳನ್ನು ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು.



ಪ್ರಾಧ್ಯಾಪಕರಾದ ನಿತ್ಯಾನಂದ ಶೆಟ್ಟಿ ಮಾತನಾಡತ್ತಿರುವುದು

1980 ಮತ್ತು 1990 ರ ನಡುವೆ ಸಂಘಟನೆಯನ್ನು ಕಟ್ಟಲು ಸಕ್ರೀಯವಾಗಿ ದುಡಿದಿರುವ ಹಲವು ಸಂಗಾತಿಗಳಲ್ಲಿ ಪ್ರಾರಂಭದಲ್ಲಿ ಸ್ಥಾಪಕ ಅಧ್ಯಕ್ಷರಾಗಿ ದುಡಿದು ಪ್ರಸ್ತುತ ಬ್ಯಾಂಕ್ ನೌಕರರ ಸಂಘಟನೆಯ ಮುಂದಾಳು ಆಗಿರುವ ಬಿ.ಎಂ.ಮಾಧವ ಹಾಗೂ ಅಂದಿನ ಕಾರ್ಯದರ್ಶಿ ಪ್ರಸ್ತುತ ಎಲ್ಐಸಿ ನೌಕರರ ಸಂಘಟನೆಯಲ್ಲಿ ನಾಯಕರಾಗಿರುವ ನಾಗೇಶ್‌ಕುಮಾರ್ ಹಾಗೂ ಅದೇ ಸಂದರ್ಭದಲ್ಲಿ ಉಳ್ಳಾಲ ಪ್ರದೇಶದಲ್ಲಿ ಸಂಘಟನೆಯನ್ನು ಕಟ್ಟಲು ದುಡಿದಿರುವ ಯು.ಬಿ.ನಾರಾಯಣ, ರಮೇಶ್ ಉಳ್ಳಾಲ, ಅದೇ ರೀತಿ 1990 ಬಳ್ಕೂರು, ಆರ್. ಜಯಕುಮಾರ್, ಶಿವಾನಂದ ಕೋಡಿ, ಸುನೀಲ್ ನಾಟೇಕರ್ ಕೃಷ್ಣಪ್ಪ ಕೊಂಚಾಡಿ, ಯಾದವ ಶೆಟ್ಟಿ, ವಸಂತ ಆಚಾರಿ, ಅಶೋಕ್ ಸಾಲ್ಯಾನ್, ರವಿಚಂದ್ರ ಕೊಂಚಾಡಿ, ಬಿ.ಎಂ.ಭಟ್, ರಾಬರ್ಟ್ ಡಿಸೋಜ, ನಾರಾಯಣ ಕಿಲ್ಲಂಗೋಡಿ, ಮುಂತಾದ ಸಂಗಾತಿಗಳನ್ನು ಗೌರವಿಸಲಾಯಿತು.

ಬಹುಮುಖೀ ಸಂಸ್ಕೃತಿ ನಮ್ಮ ದೇಶದ ಐಕ್ಯತೆಯನ್ನು ಉಳಿಸುತ್ತದೆ.

ಇಡೀ ವಿಶ್ವಕಂಡ ವೈವಿದ್ಯತೆಯಲ್ಲಿ ಏಕತೆಯನ್ನು ಕಾಣುವ ನಮ್ಮ ದೇಶದ ಬಹುಮುಖೀ ಸಂಸ್ಕೃತಿ ವಿಭಿನ್ನ ಆಚಾರ ವಿಚಾರಗಳು ಮಾತ್ರ ಈ ದೇಶದ ಐಕ್ಯತೆಯನ್ನು ಉಳಿಸುತ್ತದೆ. ಬದಲಾಗಿ ಏಕ ಸಂಸ್ಕೃತಿ ಸಿದ್ಧಾಂತದಿಂದಲ್ಲ ಎಂದು ಜನಪದ ವಿದ್ವಾಂಸರು ಹಾಗೂ ಕಾವೂರು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಗಣನಾಥ ಎಕ್ಕಾರು ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಡನಾಡಿದ ಅವರು ಇಂದು ಸಂಘಪರಿವಾರವು ಈ ದೇಶದ ಬಹುಮುಖೀ ಸಂಸ್ಕೃತಿಯ ಮೇಲೆ ಧಾಳಿಯನ್ನು ನಡೆಸಿದೆ. ಮಾತ್ರವಲ್ಲದೇ ಹಿಂದುತ್ವದ ಹೆಸರಿನಲ್ಲಿ ಜನತೆಯ ಮೇಲೆ ಏಕ ಸಂಸ್ಕೃತಿಯನ್ನು ಹೇರಲು ಹೊರಟಿದ್ದಾರೆ. ಇದರಿಂದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಹೋದರತೆ, ಸಹಬಾತೃತ್ವ, ಸಮಾನತೆಯನ್ನು ಒಪ್ಪಿಕೊಂಡ ಜಾತ್ಯಾತೀತ ಪರಂಪರೆಗೆ ಧಕ್ಕೆ ಉಂಟಾಗಿದೆ. ಇನ್ನೊಂದೆಡೆ ಜಾಗತೀಕರಣದ ಧಾಳಿಯಿಂದ ನಮ್ಮ ನೆಲದ ನೈಜ ಸಂಸ್ಕೃತಿಗಳಾದ ಜನಪದ ಕಲೆ, ಗ್ರಾಮೀಣ ಕ್ರೀಡೆಗಳು ಜನಪದ ವಿಚಾರಧಾರೆಗಳು ಕೊಲೆಯಾಗುತ್ತಿವೆ.

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಯುವಜನತೆ ಎಚ್ಚೆತ್ತು ನಮ್ಮ ದೇಶದ ವೈವಿಧ್ಯಮಯ ಬಹುಮುಖೀ ಸಂಸ್ಕೃತಿಯನ್ನು ರಕ್ಷಿಸಲು ಒಂದಾಗಬೇಕು ಎಂದು ಕರೆ ನೀಡಿದರು. ವೇದಿಕೆಯಲ್ಲಿ ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ಸಿ.ಎಸ್(ಸಿ.ಎನ್) ಶೆಟ್ಟು, ಕರಾವಳಿ ಕಾಲೇಜಿನ ಮುಖ್ಯಸ್ಥರಾದ ಗಣೇಶ್‌ರಾವ್, ರೋಹತಾಕ್ಷಕ್ಕೆ ಕುಳಾಯಿಗುತ್ತು, ಟಿ.ಸಿ.ಎಂ.ಶರೀಫ್, ಯಾದವಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಅಶೋಕ್ ಕೊಂಚಾಡಿ ಮೊದಲಾದವರು ಉಪಸ್ಥಿತರಿದ್ದರು.

ಸಾಮ್ರಾಜ್ಯಶಾಹಿಗಳ ಜೊತೆ ಕೈಜೋಡಿಸಿದ ಕೋಮುವಾದಿಗಳು

ಜಗತ್ತಿನಾದ್ಯಂತ ಅನೇಕ ಕಡೆಗಳಲ್ಲಿ ಭಯೋತ್ಪಾದನೆಗಳಿಗೆ ಕುಮ್ಮಕ್ಕು ನೀಡುತ್ತಾ ಅದರಿಂದ ರಕ್ತಪಾತಗಳಿಗೆ ಕಾರಣವಾಗುತ್ತಿರುವ ಕಾರ್ಮಿಕ ವರ್ಗದ ಶತ್ರು ಅಮೇರಿಕನ್ ಸಾಮ್ರಾಜ್ಯಶಾಹಿಗಳ ಜೊತೆ ಸಂಘಪರಿವಾರವು ಕೈಜೋಡಿಸಿವೆ ಎಂದು ಆಳ್ವಾಸ್ ಕಾಲೇಜ್ ಮೂಡಬಿದ್ರೆ ಇಲ್ಲಿನ ಪ್ರಾಧ್ಯಾಪಕರಾದ ನಿತ್ಯಾನಂದ ಶೆಟ್ಟಿಯವರು ತಿಳಿಸಿದರು.

ಬೆಳ್ಳಿಹಬ್ಬದ ಮೊದಲನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿದ ಅವರು ಪ್ರಾರಂಭದಲ್ಲಿಯೇ ಹೆತ್ತ ತಾಯಿಯೊಬ್ಬಳು ತಾನು ಸಾಮಾಜಿಕ ಶೋಷಣೆಗಳನ್ನು ಎದುರಿಸುತ್ತಾ ತನ್ನ ಬದುಕಿಗಾಗಿ ವೇಶ್ಯಾವಾಟಿಕೆಯ ಕೃತ್ಯಗಳನ್ನು ಮಾಡಿಕೊಂಡು ತನ್ನ ಮಗುವಿಗೆ ಹಾಲನ್ನು ಕೊಡುವ ಸಂದರ್ಭದಲ್ಲಿ ಹಾಲನ್ನು ಕೊಡಲಾಗದೆ ರಕ್ತವನ್ನು ಕುಡಿಸಲು ಕಾರಣವಾದ ಸಾಮಾಜಿಕ ದೌರ್ಜನ್ಯವನ್ನು ಆಧರಿಸಿ ಹೇಳಿದ ಕಥೆಯು ಇವತ್ತು ಸಾಮ್ರಾಜ್ಯಶಾಹಿಗಳು ಹಾಕಿದ ತಾಳಕ್ಕೆ ತಕ್ಕಂತೆ ಕುಣಿಯುವ ಫ್ಯಾಸಿಸ್ಟ್ ಸಂಘಪರಿವಾರವು ಮಾನವ ವಿರೋಧಿಯಾಗಿದೆ ಎಂದು ಮಾರ್ಮಿಕವಾಗಿ ಹೇಳಿದರು.

ವೇದಿಕೆಯಲ್ಲಿ ಯಶವಂತ್‌ಮರೋಳಿ, ಚಂದ್ರಹಾಸ ಕೊಡಿಯಾಲ್ ಬೈಲ್, ಯಾದವಶೆಟ್ಟಿ, ಸಿ.ಎಸ್.ಶೆಟ್ಟಿ, ರತೀಂದ್ರನಾಥ್, ಮೊದಲಾದವರು ಉಪಸ್ಥಿತರಿದ್ದರು.

ಮಂಜನಾಡಿ ಪಂಚಾಯತ್ ಸಿಪಿಐ(ಎಂ) ನೇತೃತ್ವ

ಮಂಜನಾಡಿ ಗ್ರಾಮದ ಪಂಚಾಯತ್ ಚುನಾವಣೆಯಲ್ಲಿ ಈ ಬಾರಿ ನಾಗರೀಕ ಸಮಿತಿಯ ಮೂಲಕ ಪಂಚಾಯತ್ ಆಡಳಿತ ಬದಲಾಗಿರುವುದು ಸ್ವತಂತ್ರ ಸಿಕ್ಕಿದ ನಂತರ ಇದೇ ಪ್ರಥಮವಾಗಿದೆ. ನಾಗರಿಕ ಸಮಿತಿಯ ಮೂಲಕ ಜನತಾದಳ ಕೆ.ಪಿ.ಮೋನುರವರು ಅಧ್ಯಕ್ಷರಾಗಿಯು, ಉಪಾಧ್ಯಕ್ಷರಾಗಿ ಡಿವೈಎಫ್ಐನ ಎಂ.ಎಸ್. ಮಹಮ್ಮದ್‌ರವರು ಆಯ್ಕೆ ಆಗಿದ್ದಾರೆ. ಮತ್ತು ಉಳ್ಳಾಲ ವಲಯ ಸಮಿತಿ ಸಿಪಿಐ(ಎಂ)ನ ಸದಸ್ಯರಾದ ಕಾ.ಶ್ರೀನಿವಾಸ ಆಳ್ವ ಕಟೆನೋರ್ ಮತ್ತು ಮಂಜನಾಡಿ ಸಿಪಿಐ(ಎಂ) ಶಾಖಾ ಕಾರ್ಯದರ್ಶಿ ಮಾಧವ ಕೋಡಿರವರು ಗೆದ್ದು ಮಂಜನಾಡಿ ಪಂಚಾಯತನ ಆಡಳಿತವನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಮಂಜನಾಡಿ ಗ್ರಾಮದಲ್ಲಿ ಶ್ರೀನಿವಾಸ ಆಳ್ವರರವರು ರೈತಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಜತೆ ಕಾರ್ಯದರ್ಶಿಯಾಗಿ ಸಿಪಿಐ(ಎಂ) ಪಕ್ಷದ ಸದಸ್ಯನಾಗಿಯೂ ಸಿಐಟಿಯುನ ಬೀಡಿ ಯೂನಿಯನ್‌ನ ಸರ್ಕಲ್ ಸದಸ್ಯನಾಗಿಯೂ ಮಂಜನಾಡಿ ಗ್ರಾಮದ ಬಡಜನರ ಮಧ್ಯೆ ನಿರಂತರ ಶ್ರಮಿಸುತ್ತಾ ಸಮಸ್ಯೆಯನ್ನು ಪರಿಹರಿಸಿದ್ದಾರೆ. 1994ರಲ್ಲಿ ಅಂಬೇಡ್ಕರ್ ಯೋಜನೆಯಲ್ಲಿ 14 ಜನರಿಗೆ ವಂಚನೆ ಮಾಡಿದ್ದರ ವಿರುದ್ಧ ಬಹಿರಂಗ ಹೋರಾಟದ ಪರಿಣಾಮ ಬಿಡಿಒ, ಇಂಜಿನಿಯರ್, ಕಾರ್ಯದರ್ಶಿ ಹೀಗೆ 5 ಜನರನ್ನು ಸರ್ಕಾರ 6 ತಿಂಗಳ ಕಾಲ ವಜಾ ಮಾಡಿ ಪಂಚಾಯತನ್ನೆ ವಜಾ ಮಾಡಿತ್ತು. ಆದರೆ ನಂತರದ ಚುನಾವಣೆಯಲ್ಲಿ ಅದೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಈ ಬಾರಿ ಆ ಪಕ್ಷವನ್ನು ಜನತೆ ತಿರಸ್ಕರಿಸಿ ನಾಗರಿಕ ಸಮಿತಿಯ ಮೂಲಕ ಅಧಿಕಾರಕ್ಕೆ ಬಂದಿದ್ದು ಇದು ಈ ಗ್ರಾಮಜನರಿಗೆ ಹೆಮ್ಮೆಯ ವಿಷಯವಾಗಿದೆ. ಈ ಗ್ರಾಮದ ದೀರ್ಘ ಸಮಸ್ಯೆಯಾಗಿದ್ದ ಸಶ್ಮಾನ ಅದು ಕಳೆದ ವರ್ಷ ಹೋರಾಟ ಮಾಡಿ ಕೋರ್ಟು ಮುಖಾಂತರ ಗೆದ್ದು ಸಶ್ಮಾನವನ್ನು ಪೂರ್ತಿ ಸರಿಪಡಿಸಿ ಅದರ ಟ್ರಸ್ಟ್‌ನ ಅಧ್ಯಕ್ಷರಾಗಿದ್ದಾರೆ.

ಶೇಷಪ್ಪ ಹತ್ಯೆಗೆ ಸಿಪಿಐ(ಎಂ) ಖಂಡನೆ

ಚಿಕ್ಕಮಗಳೂರು ಜಿಲ್ಲೆಯ ಮೆಣಸಿನ ಹಾಡ್ಯದ ರೈತ.ಪಿ.ಎಲ್.ಡಿ.ಬ್ಯಾಂಕ್‌ನ ನಿರ್ದೇಶಕನಾದ ಶೇಷಯ್ಯಗೌಡನನ್ನು ಕೊಲೆಮಾಡಿದ ಮಾವೋವಾದಿ ನಕ್ಸಲೀಯರ ಕೃತ್ಯವನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಷ್ಟ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಖಂಡಿಸಿದೆ

ಇಂತಹ ವ್ಯೆಯಕ್ತಿಕ ಕೊಲೆಗಳನ್ನು ತಡೆಯಲು ಸರ್ಕಾರ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.



ಕೋಮುವಾದದ ಈ ಘೆಢಂಭೂತದ ವಿರುದ್ಧ ನಿರ್ಣಾಯಕ ಸಂಘರ್ಷವನ್ನು ನಡೆಸದೆ ಯುಪಿಎ ಸರ್ಕಾರವು ಒಂದು ವರ್ಷದ ಆಚರಣೆಯನ್ನು ನಡೆಸುವುದು ಅಪೂರ್ಣವಾಗಲಿದೆ.

ಕೋಮುವಾದದ ಪೆಡಂಭೂತ ನಿರ್ಣಾಯಕವಾಗಿ ಎದುರಿಸುವತ್ತ

ಯುಪಿಎ ಸರ್ಕಾರ ರಚನೆಗೊಂಡದ್ದೇ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಯುಪಿಎ ಸರ್ಕಾರದ ಒಂದು ವರ್ಷದ ಸಾಧನೆಯನ್ನು ಮೌಲ್ಯೀಕರಿಸುವ ಮೊದಲು ಅತ್ಯಂತ ಪ್ರಮುಖವಾದ ಅಂಶವನ್ನು ಗಮನದಲ್ಲಿರಿಸಿಕೊಳ್ಳ ಬೇಕಾಗುತ್ತದೆ. 2004 ರ ಚುನವಣೆಗಳ ನಂತರ ದೇಶದ ಆಧಾರ ಸ್ತಂಭವಾದ ಜಾತ್ಯಾತೀತತೆಯು ಯುಪಿಎ ರಚನೆಗೆ ಮೂಲ ಕಾರಣವಾಯಿತು. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕತೆಯನ್ನು ರಕ್ಷಿಸಿ ಬಲಿಷ್ಠಗೊಳಿಸಲು ಇದು ತೀರಾ ಅನಿವಾರ್ಯವಾಗಿತ್ತು. ಬಿಜೆಪಿ ನೇತೃತ್ವದ ಎನ್ ಡಿಎ ಕೂಟದ ಆರು ವರ್ಷಗಳ ಆಢಳಿತದಲ್ಲಿ ಜಾತ್ಯಾತೀತ ಧೋರಣೆಯು ತೀವ್ರ ಆಕ್ರಮಣಕ್ಕೆ ಗುರಿಯಾಯಿತು. ಇಂತಹ ಸಂದರ್ಭದಲ್ಲಿ ಉದ್ಭವಿಸಿದ ಯುಪಿಎ ಸರ್ಕಾರ ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕತೆಯನ್ನು ರಕ್ಷಿಸಲು ಬದ್ಧವಾಗಬೇಕು ಯಾವುದೇ ಬೆಲೆ ತೆತ್ತಾದರೂ ಕೋಮುವಾದವನ್ನು ವಿರೋಧಿಸಬೇಕು.

ಗುಜರಾತ್‌ನಲ್ಲಿ ನಡೆದ ರಾಜ್ಯಸರ್ಕಾರ ಪ್ರಾಯೋಜಿತ ಜನಾಂಗೀಯ ಹತ್ಯೆಗಳು ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕತೆಯ ಮೇಲೆ ನಡೆಸಿದ ದಾಳಿಯಾಗಿದೆ. ಈ ಹಲ್ಲೆಗಳಿಂದ ಸಾವಿರಾರು ಮಂದಿ ಅಮಾಯಕರು ನೋವು ಸಂಕಟಗಳನ್ನು ಅನುಭವಿಸುತ್ತಿದ್ದಾರೆ. ಇಷ್ಟಾದರೂ ಆರೋಪಿಗಳು ನಿರಾತಂಕವಾಗಿ ಸುತ್ತಾಡುತ್ತಿದ್ದಾರೆ. ಗೋಧ್ರಾ ದುರಂತದ ನಂತರ ಆರಂಭವಾದ ಈ ಹತ್ಯೆಗಳ ಹಿಂದೆ ರಾಜ್ಯ ಸರ್ಕಾರದ ಕೈವಾಡವಿದೆ ಎಂಬುದಕ್ಕೆ ಪ್ರತಿದಿನವೂ ಹೊಸ ಹೊಸ ಆಧಾರಗಳು ದೊರೆಯುತ್ತಿವೆ. ನರೇಂದ್ರಮೋದಿ ಆಡಳಿತವು ಈ ಜನಾಂಗೀಯ ಹತ್ಯಾಕಾಂಡದಲ್ಲಿ ನೇರ ಪಾತ್ರವಹಿಸಿ ಪ್ರಾಯೋಜಿಸಿ ಆರೋಪಿಗಳಿಗೆ ರಕ್ಷಣೆ ನೀಡಿದೆ ಎಂದು ದೇಶದ ಎಲ್ಲಾ ಸರ್ಕಾರಿ ಅಂಗಸಂಸ್ಥೆಗಳೂ ಗುರ್ತಿಸಿವೆ. ಇದುವರೆಗಿನ ಸಾಕ್ಷ್ಯಾಧಾರಗಳು ಮಾತ್ರವಲ್ಲದೆ ಪ್ರತಿದಿನ ಹಲವಾರು ಹೊಸ ವಿಷಯಗಳು ಬಹಿರಂಗಗೊಳ್ಳುತ್ತಿವೆ. ಈ ಹತ್ಯಾಕಾಂಡದಲ್ಲಿ ಮೋದಿ ವಹಿಸಿದ್ದ ಪಾತ್ರ ಕುರಿತು ಗುಜರಾತ್‌ನ ಅಂದಿನ ರಾಜ್ಯಪಾಲರೂ ಆರ್.ಎಸ್.ಎಸ್.ನ ಹಿರಿಯ ಪ್ರಚಾರಕರಾಗಿದ್ದ ಎಸ್.ಎಸ್.ಭಂಡಾರಿ(1951 ರಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿ ಜನಸಂಘದ ಸ್ಥಾಪನೆಗೆ ನೆರವಾಗಲು ದೀನ ದಯಾಳ್ ಉಪಾಧ್ಯಾಯರೊಂದಿಗೆ ವಾಜಪೇಯಿ, ಆಡ್ವಾಣಿ ಅವರೊಂದಿಗೆ ಎಸ್.ಎಸ್.ಭಂಡಾರಿ ಅವರನ್ನು ನಿಯೋಜಿಸಲಾಗಿತ್ತು)ಅವರು ಗುಜರಾತ್ ಸರ್ಕಾರ ಮತ್ತು ಮೋದಿ ಅವರ ಪಾತ್ರದ ಕುರಿತು ಬಹಿರಂಗವಾಗಿ ವಿಮರ್ಶೆ ಮಾಡುತ್ತಿದ್ದಾರೆ. ಗುಜರಾತ್‌ನ ಅಂದಿನ ಪೋಲೀಸ್ ಉಪ ಮಹಾನಿರ್ದೇಶಕರಾಗಿದ್ದ ಆರ್.ಬಿ.ಶ್ರೀಕುಮಾರ್ ತಮ್ಮ ಅಧಿಕೃತ ದಿನಚರಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಹತ್ಯಾಕಾಂಡದ ಸಂದರ್ಭದಲ್ಲಿ ಮೋದಿ ಸರ್ಕಾರದ ಕೈವಾಡ ಕುರಿತು ಬಹಿರಂಗಗೊಳಿಸಿದ್ದಾರೆ. ಇದು ಅಧಿಕೃತ ಸಾಕ್ಷ್ಯಾಧಾರಗಳ ಭಾಗವಾಗಿದ್ದು ಮೋದಿ ಆಡಳಿತದ ವಿರುದ್ಧದ ಮತ್ತೊಂದು ಬಲವಾದ ಸಾಕ್ಷಿಯಾಗಿದೆ. ಸಾಮೂಹಿಕ ಹತ್ಯೆಗಳಿಗೆ ಸಂಬಂಧಿಸಿದ ಅತ್ಯಂತ ಪ್ರಮುಖವಾದ ಆರು ಪ್ರಕರಣಗಳನ್ನು ನೇರವಾಗಿ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಕೋರಿರುವ ಮೇಲ್ಮನವಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಕಾದಿದೆ. ಈ ಹತ್ಯೆಗಳನ್ನು ನಡೆಸಿದ ಆರೋಪಿಗಳನ್ನು ಶಿಕ್ಷಿಸಲು ಕೇಂದ್ರ ಸರ್ಕಾರ ಶೀಘ್ರವಾಗಿ ಕಾರ್ಯಪ್ರವೃತ್ತವಾಗಬೇಕು, ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು.

ಗುಜರಾತ್ ಹತ್ಯಾಕಾಂಡಗಳನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದಂತೆ ಅಂದಿನ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ಪ್ರಧಾನ ಮಂತ್ರಿ ವಾಜಪೇಯಿ ಅವರಿಗೆ ನೀಡಿದ್ದ ಸಲಹೆಯನ್ನು ಅವರು ಪರಿಗಣಿಸಲಿಲ್ಲ ಎಂಬುದನ್ನು ಅವರು ಇತ್ತೀಚೆಗೆ ಬಹಿರಂಗಪಡಿಸಿರುವುದನ್ನು ಸಹ ಸಾಕ್ಷಿಯಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಕೋಮುವಾದದ ಈ ಘೆಢಂಭೂತದ ವಿರುದ್ಧ ನಿರ್ಣಾಯಕ ಸಂಘರ್ಷವನ್ನು ನಡೆಸದೆ ಯುಪಿಎ ಸರ್ಕಾರವು ಒಂದು ವರ್ಷದ ಆಚರಣೆಯನ್ನು ನಡೆಸುವುದು ಅಪೂರ್ಣವಾಗಲಿದೆ. 2004 ರ ಚುನಾವಣೆಗಳಲ್ಲಿ ಜನತೆ ಕೋಮುವಾದಿ ಬಿಜೆಪಿಯನ್ನು ಧಿಕ್ಕರಿಸಿದ್ದರ ಪರಿಣಾಮವಾಗಿ ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಈಗ ಯುಪಿಎ ಸರ್ಕಾರವು ಜನತೆಗೆ ನೀಡಿದ ಆಶ್ವಾಸನೆಗಳನ್ನು ಸಾಕಾರಗೊಳಿಸಬೇಕಾಗಿದೆ.



ಕೂಲಿಕಾರರ ಹೊಂಬೆಳಕು-ಕೃಷಿ ಕೂಲಿಕಾರರ ಸಂಘ

ಭೂಮಾಲೀಕರ ಹಿಡಿತದಲ್ಲಿ ಗಂಗಾವತಿ ತಾಲೂಕು ನಲುಗುತ್ತಿದೆ. ಹಠಮಾರಿ ಧೋರಣೆಗಳನ್ನು ಅನುಸರಿಸುತ್ತಿರುವ ಕೆಲವು ಸರ್ಕಾರಿ ಅಧಿಕಾರಿಗಳು ಇವರಿಗೆ ಬೆಂಬಲವಾಗಿ ಚುನಾಯಿತ ಪ್ರತಿನಿಧಿಗಳು ಹೀಗೆ ದುಡಿಯುವ ವರ್ಗದ ಜನತೆಗೆ ಹೇಳ ತೀರದ ಕಷ್ಟ. ಇಂಥ ಬಿಗುವಿನ ವಾತಾವರಣದ ಕೆಂಡದಲ್ಲಿ ಅರಳಿದ ಹೂವಿನ ಹಾಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ತಾಲೂಕಿನಲ್ಲಿ ಮುಂಚೂಣಿಯಲ್ಲಿದೆ. ಕೂಲಿಕಾರರಿಗೆ ನ್ಯಾಯಒದಗಿಸುವ ನಿಟ್ಟಿನಲ್ಲಿ ಮತ್ತೂ ದೇವದಾಸಿಯರಿಗೆ ಸರ್ಕಾರಿ ಭೂಮಿ ಅರ್ಧ ಎಕರೆ ಮಂಜೂರಿಯಾಗಿ 10-12 ವರ್ಷ ಗತಿಸಿದರೂ ಹಿಂದಿನ ಶಾಸಕರ ಮತ್ತು ಕೆಲವು ಅಧಿಕಾರಿಗಳ ಮೋಸದಿಂದ ದೇವದಾಸಿಯರು ಭೂಮಿಯಿಂದ ವಂಚಿತರಾಗಿದ್ದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದಿಂದ ರಾಜ್ಯಾದ್ಯಂತ ನಡೆಯುವ ಪ್ರಚಾರಾಂದೋಲನದ ಅಂಗವಾಗಿ ಪ್ರತಿ ಗ್ರಾಮಗಳಲ್ಲಿ ಪ್ರಚಾರ ಮಾಡಿ ಮೇ 3, 2005 ರಂದು ವಿದ್ಯುತ್ ಸಮಸ್ಯೆ ಬಗ್ಗೆ ಮನವಿ ಸಲ್ಲಿಸಿ, ದೇವದಾಸಿಯರಿಂದ ತಹಶೀಲು ಕಾರ್ಯಾಲಯದ ಮುಂದೆ ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹ ಹಮ್ಮಿಕ್ಕೊಂಡು ಹಂಚಿನಾಳದ ಇಬ್ಬರು, ಸಿಂಗನಾಳದ 8 ಜನರು ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಧರಣಿ ನಡೆಸಿದರು. ಮೇ 6ರಂದು ತಹಶೀಲ ಕಛೇರಿ ಮುತ್ತಿಗೆ ಕಾರ್ಯಕ್ರಮ ನಡೆಯಿತು. ಒತ್ತಡಕ್ಕೆ ಮಣಿದ ತಹಶೀಲ್ದಾರರು ದೇವದಾಸಿಯರ ಭೂಮಿಗೆ ಪೊಲೀಸ್ ರಕ್ಷಣೆ ನೀಡಿ ಪತ್ರ ಬರೆದರು. ಸಿಂಗನಾಳ ದೇವದಾಸಿಯರನ್ನು ವಂಚಿಸುತ್ತಿರುವ ಶರಣೇಗೌಡ ಮತ್ತು ಮಹಾಂತಗೌಡ ಎನ್ನುವವರು ಮಾಜಿ ಸೈನಿಕರೆಂದು ಸಿಂಧನೂರಿನಲ್ಲಿ ಮತ್ತು ಗಂಗಾವತಿಯಲ್ಲಿ ಎರಡು ಕಡೆಗೆ ಭೂಮಿಯನ್ನು ಪಡೆದು ಸರ್ಕಾರಕ್ಕೆ ವಂಚಿಸಿದ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು.

ಈ ಮಧ್ಯೆ ನಿರಂತರ ಸತ್ಯಾಗ್ರಹ ನಡೆದ ಸ್ಥಳಕ್ಕೆ ವೈದ್ಯಕೀಯ ಶಿಕ್ಷಣ ಸಚಿವರಾದ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಇಕ್ಬಾಲ ಅನ್ಸಾರಿಯವರು ಭೇಟಿ ನೀಡಿ ಸತ್ಯಾಗ್ರಹ ನಿರತರಿಗೆ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರಲ್ಲದೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಹಠಮಾರಿ ಧೋರಣೆಯನ್ನು ಅನುಸರಿಸುತ್ತಿರುವ ತಹಶೀಲ್ದಾರರು ಸ್ಪಂದಿಸದಿದ್ದಾಗ ಮೇ 15 ರಂದು ಕೊಪ್ಪಳ ಜಿಲ್ಲಾಧಿಕಾರಿಗಳು ಸತ್ಯಾಗ್ರಹ ನಡೆದ ಸ್ಥಳಕ್ಕೆ ಭೇಟಿ ನೀಡಿ ತಹಶೀಲ್ದಾರರನ್ನು ತರಾಟೆಗೆ ತೆಗೆದುಕೊಂಡು ಜಿಲ್ಲಾ / ತಾಲ್ಲೂಕು ಪಂಚಾಯತ ಚುನಾವಣೆಗಳು ಮುಗಿದ ನಂತರದಲ್ಲಿ ಹೋಬಳಿ ಮಟ್ಟದಲ್ಲಿ ಭೂಮಿಯ ಸಮಸ್ಯೆಗಳನ್ನು ಬಗೆಹರಿಸುವುದಾಗಿ ತಿಳಿಸಿದರು. ಗೋನಾಳ ಬಸವರಾಜನ ಕೊಲೆ ಪ್ರಕರಣವು ರಾಜ್ಯದ ಗೃಹಮಂತ್ರಿಗಳ ಕಾರ್ಯಾಲಯದ ಮುಂದೆ ಇದ್ದುದನ್ನು ಸಿಓಡಿಯ ಪೊಲೀಸ್ ಉಪ ವಿಭಾಗಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ



ಕೊಲೆಯಾಗಿದ್ದನ್ನು ತನಿಖೆ ಮಾಡಿ ತಪ್ಪಿತಸ್ಥರಿಗೆ ಕಾನೂನಿನ ಪ್ರಕಾರ ಶಿಕ್ಷೆಗೆ ಒಳಪಡಿಸುವುದಾಗಿ ತನಿಖಾಧಿಕಾರಿಗಳು ತಿಳಿಸಿದ್ದಾರೆ. ಹೀಗೆ ಕೂಲಿಕಾರರಿಗೆ ಈ ಹಿಂದೆ 8-10 ವರ್ಷದಿಂದ ನೆನೆಗುದಿಗೆ ಬಿದ್ದಿದ್ದ ಕೆಲಸಗಳು ಜಾರಿಯಾಗಲು ಪ್ರಾರಂಭವಾಗಿವೆ. ಕೂಲಿಕಾರರ ಈ ದಿಟ್ಟ ಹೋರಾಟದ ಫಲವಾಗಿದೆ.

ಕೆ.ಬಾಳಪ್ಪ, ಗಂಗಾವತಿ

ಜನಸಂಖ್ಯೆ ಬೆಳವಣಿಗೆ ದರಕ್ಕಿಂತ ಆಹಾರ ಬೆಳವಣಿಗೆ ದರ ಕಡಿಮೆ!

ಅಂಕಿ ಸಂಖ್ಯೆ

'ಹಸಿರು ಕ್ರಾಂತಿ'ಯ ಫಲವಾಗಿ ಶ್ರೀಮಂತ ರೈತರು ಮತ್ತು ಭೂಮಾಲೀಕರಿಗೆ ಮಾತ್ರ ಹೆಚ್ಚು ಲಾಭವಾಗಿದ್ದರೂ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗಿತ್ತು. ಆದರೆ ಜಾಗತೀಕರಣ, ಉದಾರೀಕರಣ ನೀತಿಗಳ ಜಾರಿಯ ನಂತರ ಆಹಾರ ಉತ್ಪಾದನೆ ತೀವ್ರಗತಿಯಲ್ಲಿ ಇಳಿತವಾಗಿ, ಜನಸಂಖ್ಯೆ ಬೆಳವಣಿಗೆ ದರಕ್ಕಿಂತ ಕಡಿಮೆಯಾಗಿದೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ಮುಂದೊಂದು ದಿನ ಆಹಾರದ ಅಭಾವ ತೀವ್ರವಾಗುವುದು ಖಂಡಿತ.

	ಆಹಾರ ಉತ್ಪಾದನೆ ದರ	ವಾಣಿಜ್ಯ ಕೃಷಿ ಉತ್ಪಾದನೆ	ಎಲ್ಲಾ ಬೆಳೆಗಳ ಸರಾಸರಿ
1980-81 ರಿಂದ 1989-90	2.85	3.77	3.19
1990-91 ರಿಂದ 2000-01	1.66	1.86	1.73

ಯುಪಿಎ ಸರ್ಕಾರದ ಒಂದು ವರುಷ ಮೌಲ್ಯಮಾಪನ - ಸಾಗಬೇಕಾದ ಹಾದಿ ಏನು?

ಕೇಂದ್ರದಲ್ಲಿ ಸಂಯುಕ್ತ ಪ್ರಗತಿಪರ ರಂಗದ ಸರ್ಕಾರ ರಚನೆಯಾಗಿ ಒಂದು ವರುಷವಾಗುತ್ತಿದೆ. ಈ ಸರ್ಕಾರ ರಚನೆಯ ಹಾಗೂ ಆ ಸಂದರ್ಭದಲ್ಲಿನ ಉದ್ದೇಶ ಹಾಗೂ ಜನತೆ ನೀಡಿದ ತೀರ್ಪು, ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿದೆಯೇ? ಈ ಸಂದರ್ಭದಲ್ಲಿ ವಸ್ತುನಿಷ್ಠ ಮೌಲ್ಯಮಾಪನ



ಕೇಂದ್ರದಲ್ಲಿನ ಯುಪಿಎ ಸರಕಾರದ ಒಂದು ವರ್ಷದ ಆಳ್ವಿಕೆಯ ಪರಾಮರ್ಶೆ ನಡೆಸಿದೆ. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಳಲ್ಲಿ, ವಿದೇಶಾಂಗ ವಲಯದಲ್ಲಿ ಅದು ಕೈಗೊಂಡ ಕೆಲವು ಕ್ರಮಗಳನ್ನು ಪ್ರಶಂಸಿಸುತ್ತಾ, ಆದರೆ ಒಟ್ಟಾರೆಯಾಗಿ ಯುಪಿಎ ಸರಕಾರ ವಿದೇಶಿ ಹಣಕಾಸು ಬಂಡವಾಳ ಮತ್ತು ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳಿಗೆ ಅನುಗುಣವಾದ ಕ್ರಮಗಳನ್ನು ಹೇಗಾದರೂ ತರುವಲ್ಲಿ ಆತುರವನ್ನು ತೋರಿಸುತ್ತಾ, ಅತ್ತ ಕೋಟ್ಯಾಂತರ ರೈತರು, ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳಿಗೆ ಪರಿಹಾರ ಒದಗಿಸಬಹುದಾದ, ಅವರ ಬದುಕಿಗೆ ಆಸರೆ ನೀಡಬಹುದಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ನಿರಾಸಕ್ತಿಯನ್ನು ತೋರಿಸಿದೆ. ಮುಂಬರುವ ದಿನಗಳಲ್ಲಿ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿನ ಜನಪರ ಕ್ರಮಗಳು ಜ್ಯಾರಿಯಾಗುವಂತೆ ಯುಪಿಎ ಸರಕಾರ ನೋಡಿಕೊಳ್ಳಬೇಕಾಗಿದೆ ಹಾಗೂ ಬಿಜೆಪಿ ನೇತೃತ್ವದ ಸರಕಾರಕ್ಕಿಂತ ಭಿನ್ನವಾದ ಒಂದು ಹಾದಿಯನ್ನು ಹಿಡಿಯುಬೇಕಾಗಿದೆ.

ಯುಪಿಎ ಸರಕಾರ ಮೇ 22, 2005 ರಂದು ಅಧಿಕಾರ ವಹಿಸಿ ಒಂದು ವರ್ಷವನ್ನು ಪೂರ್ಣಗೊಳ್ಳುತ್ತಿದೆ. ಯುಪಿಎ ಸರಕಾರ ಮೇ 2004ರಲ್ಲಿ ನಡೆದ 14ನೇ ಲೋಕಸಭಾ ಚುನಾವಣೆಗಳಲ್ಲಿ ಜನತೆ ಬಿಜೆಪಿ ನೇತೃತ್ವದ ಸರಕಾರವನ್ನು ತಿರಸ್ಕರಿಸಿದ ನಂತರ ಅಧಿಕಾರ ವಹಿಸಿಕೊಂಡಿತು. ಭಾರತದ ಜನತೆ ಜಾತ್ಯಾತೀತ ನೀತಿಯನ್ನು ಎತ್ತಿ ಹಿಡಿಯುವ, ಕೋಮುವಾದವನ್ನು ತಿರಸ್ಕರಿಸುವ ಹಾಗೂ ಬಿಜೆಪಿ ಆಳ್ವಿಕೆಯ ಆರು ವರ್ಷಗಳಲ್ಲಿ ಬೆಳವಣಿಗೆಯ ಪ್ರಯೋಜನಗಳಿಂದ ವಂಚಿಸಲಾದ ಕೋಟ್ಯಾಂತರ ಜನಗಳ ಅಗತ್ಯಗಳನ್ನು ಪೂರೈಸುವ ಅಭಿವೃದ್ಧಿ ದಾರಿಯನ್ನು ಹಿಡಿಯುವ ಒಂದು ಸರಕಾರಕ್ಕಾಗಿ ಮತ ನೀಡಿದ್ದಾರೆ. ವಿಶ್ವವ್ಯವಹಾರಗಳಲ್ಲಿ ಭಾರತ ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಮಣಿಯದೆ ನಮ್ಮ ಪಾರಂಪರಿಕ ಅಲಿಪ್ತ ನೀತಿಗೆ ಅನುಗುಣವಾಗಿ ಒಂದು ಸ್ವತಂತ್ರ ಪಾತ್ರವನ್ನು ವಹಿಸಬೇಕು ಎಂದು ಅವರು ಬಯಸಿದರು.

ಯುಪಿಎ ಒಂದು ಸಮಾನ ಕನಿಷ್ಟ ಕಾರ್ಯಕ್ರಮ (ಸಿಎಂಪಿ)ಯನ್ನು ಅಂಗೀಕರಿಸಿತು. ಸಿಪಿಐ(ಎಂ) ಮತ್ತು ಕಾಂಗ್ರೆಸ್ ನಡುವೆ ಧೋರಣೆಗಳ ವಿಷಯಗಳಲ್ಲಿ ಮೂಲಭೂತ ಭಿನ್ನಾಭಿಪ್ರಾಯಗಳಿವೆ. ಇವು ವಿಭಿನ್ನ ವರ್ಗ ದೃಷ್ಟಿಕೋನಗಳಿಂದ ಹೊಮ್ಮುವ ಭಿನ್ನಾಭಿಪ್ರಾಯಗಳು. ಅದೇನೇ ಇದ್ದರೂ, ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಕಾರ್ಯಕ್ರಮದ ಕೆಲವು ಅಂಶಗಳ ಬಗ್ಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲೇ ಅದನ್ನು ಅನುಮೋದಿಸಿದವು. ಸಿಎಂಪಿಯಲ್ಲಿನ ಜನ-ಪರ ಕ್ರಮಗಳನ್ನು ಯುಪಿಎ ಜ್ಯಾರಿಗೆ ತಂದರೆ ಹಾಗೂ ಬಿಜೆಪಿ ನೇತೃತ್ವದ ಸರಕಾರದ ಕಂಟಕಕಾರೀ ನೀತಿಗಳನ್ನು ಸರಿಪಡಿಸಲು ಸಾಧ್ಯ ಎಂಬುದು ನಮ್ಮ ದೃಷ್ಟಿಯಾಗಿತ್ತು.

ಯುಪಿಎ ಸರಕಾರ ಪ್ರಜಾಪ್ರಭುತ್ವ ಹಕ್ಕುಗಳನ್ನು ಬಲಪಡಿಸಲು ಅಗತ್ಯವಾದ ಕೆಲವು ಕ್ರಮಗಳನ್ನು ಕೈಗೊಂಡಿದೆ. ಪೋಟಾ ಕಾಯ್ದೆಯನ್ನು ಅದು ರದ್ದುಪಡಿಸಿದೆ, ಮಾಹಿತಿ ಹಕ್ಕು ಕಾನೂನನ್ನು ಅಂಗೀಕರಿಸಿದೆ. ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಸೇರಿಸಿದ ಕೋಮುವಿಷವನ್ನು ತೆಗೆಯಲು ಮತ್ತು ಬಿಜೆಪಿ ನೇತೃತ್ವದ ಸರಕಾರ ರದ್ದು ಮಾಡಿದ ಇತಿಹಾಸದ ಪಠ್ಯಪುಸ್ತಕಗಳನ್ನು ಮತ್ತೆ ತರಲು ಕೆಲವು ಕ್ರಮಗಳನ್ನು ಸರಕಾರ ಕೈಗೊಂಡಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅಲ್ಪಸಂಖ್ಯಾತರಲ್ಲಿ ಹೆಚ್ಚಿನ ಸುರಕ್ಷಿತತೆಯ ಭಾವನೆಯಿದೆ. ಸಾಮಾಜಿಕ ವಲಯದಲ್ಲಿ ಮಾಡುವ ಖರ್ಚು ಈಗಲೂ ಅಗತ್ಯಕ್ಕಿಂತ ಬಹಳ ಕಮ್ಮಿಯೇ ಇದ್ದರೂ ಹಿಂದಿನದಕ್ಕಿಂತ ಹೆಚ್ಚಿದೆ. 'ಪ್ರಾಥಮಿಕ ಶಿಕ್ಷಣ ಕೋಶ'ಕ್ಕೆ ಹೋಗಬೇಕಾದ ಶೇಕಡಾ 2 ಶಿಕ್ಷಣ ಸುಂಕ ಇನ್ನು ರಚನೆಗೊಂಡಿರದಿದ್ದರೂ ಶಿಕ್ಷಣದ ಬಜೆಟ್ಟಿಗೆ ಹೆಚ್ಚಿನ ಹಣ ದೊರೆತಿದೆ. ಮಧ್ಯಾಹ್ನದ ಊಟದ ಯೋಜನೆ ಮತ್ತು ಅಂಗನವಾಡಿ ನೌಕರರ ಕಾರ್ಯಕ್ರಮದ ವಿಸ್ತರಣೆಯಾಗಿದೆ.

ಗ್ರಾಮೀಣ ಉದ್ಯೋಗ ಭರವಸೆ ಮಸೂದೆಯನ್ನು ಬಿಜೆಪಿಯ ಬಹಿಷ್ಕಾರದಿಂದಾಗಿ ಸಂಸತ್ತಿನಲ್ಲಿ ಕೈಗೆತ್ತಿಕೊಳ್ಳಲಾಗಿಲ್ಲ. ಇದೊಂದು ಮಹತ್ವದ ಶಾಸನ. ಆದರೆ ಈ ಮಸೂದೆ ಸಿಎಂಪಿಯಲ್ಲಿ ನೀಡಿದ ಮೂಲಭರವಸೆಯ ಕೆಲವು ಮುಖ್ಯ ಅಂಶಗಳನ್ನು ದುರ್ಬಲಗೊಳಿಸಿದೆ. ಅದನ್ನು ಅಂಗೀಕರಿಸುವ ಮೊದಲು ಬಲಗೊಳಿಸಬೇಕಾಗಿದೆ. ನವೆಂಬರ್ 2004ರಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಆರಂಭಿಸಲಾಯಿತು. ಇದರಲ್ಲಿನ ಹಣ ಮತ್ತು ಆಹಾರಧಾನ್ಯಗಳನ್ನು ಸೂಕ್ತರೀತಿಯಲ್ಲಿ ಬಳಸಲಾಗುತ್ತಿದೆಯೇ ಎಂಬ ಬಗ್ಗೆ ಉಸ್ತುವಾರಿ ಅಗತ್ಯ.

ಕೃಷಿಯ ಹೂಡಿಕೆಗಳಲ್ಲಿ ಗಮನಾರ್ಹ ಹೆಚ್ಚಳವೇನೂ ಆಗಿಲ್ಲ. ಗ್ರಾಮೀಣ ಸಾಲ ನೀಡಿಕೆಯಲ್ಲಿ ಹೆಚ್ಚಳ ಆಗಬೇಕಾಗಿದೆ. ಮಹಿಳಾ ಮೀಸಲಾತಿ ಮಸೂದೆಗೆ ಆದ್ಯತೆ ನೀಡಬೇಕಾಗಿದೆ. ಯುಪಿಎ ಅದನ್ನು ಮಂಡಿಸಲು ತನ್ನ ಎಲ್ಲಾ ಭಾಗೀದಾರರ ಬೆಂಬಲವನ್ನು ಪಡೆಯಬೇಕು.

ವಿದೇಶಾಂಗ ನೀತಿಯ ವಲಯದಲ್ಲಿ, ಯುಪಿಎ ಸರಕಾರ ಪಾಕಿಸ್ತಾನದೊಡನೆ ಇನ್ನಷ್ಟು ಮಾತುಕತೆಗಳಿಗೆ, ವಿಶ್ವಾಸ ಕುದುರಿಸುವ ಕ್ರಮಗಳನ್ನು ಆರಂಭಿಸಲು ಹಾಗೂ ಎರಡೂ ದೇಶಗಳ ಜನಗಳ ನಡುವಿನ ಸಂಪರ್ಕಗಳನ್ನು ಪ್ರೋತ್ಸಾಹಿಸಲು ಪ್ರಶಂಸಾರ್ಹ ಕ್ರಮಗಳನ್ನು ಕೈಗೊಂಡಿದೆ. ಚೀನಾ ಪ್ರಧಾನಮಂತ್ರಿ ವೆನ್ ಜಿಯಾಬೋರವರ ಭೇಟಿ ಭಾರತ-ಚೀನಾ ಸಂಬಂಧಗಳನ್ನು ಮೇಲ್ಮಟ್ಟಕ್ಕೆ ಒಯ್ದಿದೆ. ಭಾರತ ಸರಕಾರ ಭಾರತ, ರಶ್ಯಾ ಮತ್ತು ಚೀನಾದ ನಡುವೆ ತ್ರಿಪಕ್ಷೀಯ ಸಹಕಾರವನ್ನು ಬೆಳೆಸಲು ಕೆಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ ವಾಜಪೇಯಿ ಸರಕಾರ ಅಮೇರಿಕಾದೊಂದಿಗೆ ನಿಕಟ ಸಾಮರಿಕ ಭದ್ರತೆ ಮತ್ತು ಮಿಲಿಟರಿ ಸಹಕಾರವನ್ನು ಹೆಚ್ಚಿಸುವಲ್ಲಿ ಕೈಗೊಂಡ ಹಾನಿಕಾರಕ ಕ್ರಮಗಳನ್ನು ರದ್ದುಮಾಡಲು ಯುಪಿಎ ಸರಕಾರ ಹಿಂದೇಟು ಹಾಕುತ್ತಿದೆ. ಅದು ವಿಮರ್ಶೆಯನ್ನೇನೂ ಮಾಡದೆ ಇಸ್ರೇಲ್ ಮಿಲಿಟರಿ ಸಾಧನಗಳ ಒಂದು ಪ್ರಮುಖ ಪೂರೈಕೆದಾರ ಎಂದು ಈಗಲೂ ಕಾಣುತ್ತಿದೆ; ಅದರಿಂದ ಅರಬ್ ಜಗತ್ತಿನಲ್ಲಿ ಹಾಗೂ ಪ್ಯಾಲೆಸ್ಟೇನ್ ಗುರಿಸಾಧನೆಗೆ ಸಂಬಂಧಪಟ್ಟಂತೆ ಭಾರತದ ಸ್ಥಾನಮಾನಕ್ಕೆ ಎಂತಹ ಹಾನಿಯುಂಟಾಗುತ್ತಿದೆ ಎಂದು ಕಾಣುತ್ತಿಲ್ಲ.

ಸಿಪಿಐ(ಎಂ)ನ ಒಂದು ಮೂಲಭೂತ ಆತಂಕವೆಂದರೆ ಯುಪಿಎ ಸರಕಾರದ ಈ ಒಂದು ವರ್ಷದಲ್ಲಿ ನಮ್ಮ ದೇಶದ ಬಡವಿಭಾಗಗಳ ವಿಶಾಲ ಸಮೂಹಗಳ ಅಗತ್ಯಗಳನ್ನು ಪರಿಶೀಲಿಸುವ ಒಂದಾದರೂ ಶಾಸನವನ್ನು ಸಂಸತ್ತಿನಲ್ಲಿ ಮಂಡಿತವಾಗಿಲ್ಲ ಎಂಬ ಸಂಗತಿ. ನಿಜ, ಬಿಜೆಪಿ ಮೈತ್ರಿಕೂಟದ ವಿಚ್ಛಿದ್ರಕಾರಿ ಪಾತ್ರ ಸಂಸತ್ತಿನ ಕೆಲಸವನ್ನು ಪ್ರತಿಬಂಧಿಸಿದೆ. ಆದರೂ ಸರಕಾರ ನವ - ಉದಾರವಾದಿ ಚೌಕಟ್ಟಿನೊಳಗಿನ ನೀತಿಗಳನ್ನು ಮುಂದೊತ್ತಲು ಎಷ್ಟು ಚುರುಕಾಗಿ ಶಾಸನಗಳನ್ನು ಮಂಡಿಸಿತೋ, ತದ್ವಿರುದ್ಧವಾಗಿ ಜನಗಳ ಮೂಲ ಅಗತ್ಯಗಳನ್ನು ಪರಿಶೀಲಿಸುವಲ್ಲಿ ಅದರ ವಿಫಲತೆ ಕಳವಳಕಾರಿ.

ನಮ್ಮ ಜನಸಮೂಹಗಳಿಗೆ ಒಂದು ನಿರ್ಣಾಯಕವಾದ, ಕೆಲವೊಮ್ಮೆ ಸಾವು ಬದುಕಿನ ನಡುವಿನ ವ್ಯತ್ಯಾಸದ ಪ್ರಶ್ನೆಯೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮತ್ತು ಅಗ್ಗದ ಆಹಾರಧಾನ್ಯಗಳನ್ನು ಪಡೆಯುವ ಪ್ರಶ್ನೆ. ಎನ್‌ಡಿಎ ಆಳ್ವಿಕೆಯಲ್ಲಿ ಈ ವ್ಯವಸ್ಥೆಯ ಕುಸಿತವನ್ನು ಸರಿಪಡಿಸುವ ಭರವಸೆ ಸಿಎಂಪಿಯಲ್ಲಿದ್ದರೂ ಈ ಬಗ್ಗೆ ಏನನ್ನು ಮಾಡಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ತೆಯನ್ನು ಸಾರ್ವತ್ರಿಕಗೊಳಿಸುವ ಮತ್ತು ರೇಶನ್ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳ ಬೆಲೆಗಳನ್ನು ಇಳಿಸುವತ್ತ ಯಾವುದೇ ಹೆಜ್ಜೆಯಿಟ್ಟಿಲ್ಲ.

ಸಿಎಂಪಿಯಲ್ಲಿ ದುಡಿಯುವ ಜನಗಳಿಗೆ ಆಶ್ವಾಸನೆ ನೀಡದಿದ್ದರೂ ಇದುವರೆಗೂ ಜಾರಿಯಾಗದೆ ಉಳಿದಿರುವ ಮುಖ್ಯ ಪ್ರಶ್ನೆಗಳೆಂದರೆ ಅಸಂಘಟಿತ ಕಾರ್ಮಿಕರಿಗೆ ಶಾಸನ, ಕೃಷಿ ಕಾರ್ಮಿಕರಿಗೆ ಶಾಸನ ಹಾಗೂ ಎಲ್ಲಕ್ಕೂ ಮುಖ್ಯವಾಗಿ ಭೂಸುಧಾರಣೆಯ ಬಗ್ಗೆ ನೀಡಿದ ಭರವಸೆಯ ಜಾರಿಯ ಬಗ್ಗೆ ಯಾವುದೇ ಕಾಳಜಿಯ ಅಭಾವ. ಸರಕಾರ ಪೆನ್ಶನ್ ಫಂಡ್‌ಗಳ ಖಾಸಗೀಕರಣವನ್ನು ಹೇಗಾದರೂ ಮಾಡಲು ಪ್ರಯತ್ನಿಸುತ್ತಿದೆ. ಎನ್‌ಡಿಎ ಸರಕಾರ ಅಂಗೀಕರಿಸಿದ ವಿದ್ಯುಚ್ಛಕ್ತಿ ಕಾನೂನು 2003ನ್ನು ಪರಾಮರ್ಶಿಸಲು ನಿರಾಕರಿಸುತ್ತಿರುವುದರಿಂದಾಗಿ ಖಾಸಗೀಕರಣದಿಂದ ಹೆಚ್ಚಿನ ದರಗಳನ್ನು ತೆರಬೇಕಾಗಿ ಬಂದಿರುವ ಬಳಕೆದಾರರ ನಡುವೆ ಹಾಗೂ ಈ ವಲಯದ ಕಾರ್ಮಿಕರು ಮತ್ತು ನೌಕರರ ನಡುವೆಯೂ ವ್ಯಾಪಕ ಅಸಂತೃಪ್ತಿ ಉಂಟಾಗುತ್ತಿದೆ.


ಆತಂಕದ ಒಂದು ಪ್ರಮುಖ ಅಂಶವೆಂದರೆ ಕೆಲವು ಸೂಕ್ಷ್ಮ ವಲಯಗಳಲ್ಲಿ ವಿದೇಶೀ ನೇರ ಹೂಡಿಕೆಯ (ಎಫ್‌ಡಿಐ) ಬಗ್ಗೆ ಸರಕಾರದ ನಿಲುವು. ಸರಕಾರ ಖಾಸಗೀ ಭಾರತೀಯ ಬ್ಯಾಂಕುಗಳಲ್ಲಿ 74 ಶೇಕಡಾ ಎಫ್‌ಡಿಐ ಹಾಗೂ ಗಣಿಗಾರಿಕೆ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಬಗ್ಗೆ ಪ್ರಕಟಿಸಿದೆ. ಇದಕ್ಕೆ ಮೊದಲು ಟೆಲಿಕಾಂ ವಲಯದಲ್ಲಿ ಎಫ್‌ಡಿಐನ್ನು 74 ಶೇಕಡಕ್ಕೆ ಏರಿಸಲಾಯಿತು. ಇಂತಹ ಕ್ರಮಗಳು ರಾಷ್ಟ್ರೀಯ ಸಾರ್ವಭೌಮತೆಯನ್ನು ಕುಂಠಿತಗೊಳಿಸುತ್ತವೆ ಹಾಗೂ ಚಿಲ್ಲರೆ ವ್ಯಾಪಾರದ ಸಂದರ್ಭದಲ್ಲಿ ಉದ್ಯೋಗಾವಕಾಶಗಳಲ್ಲಿ ದೊಡ್ಡ ನಷ್ಟ ಉಂಟು ಮಾಡಿ ಲಕ್ಷಾಂತರ ಸಣ್ಣ ವ್ಯಾಪಾರಿಗಳು ಮತ್ತು ಅಂಗಡಿ ವಹಿವಾಟುಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಸತತ ಬೆಲೆಯೇರಿಕೆಗಳು ಜನಸಾಮಾನ್ಯರ ಮೇಲೆ ಹೊರೆ ಹಾಕುತ್ತಿವೆ. ಅವು ಹಣದುಬ್ಬರಕ್ಕೆ. ತುಪ್ಪ ಸುರಿಯುತ್ತವೆ. ಈ ಸನ್ನಿವೇಶವನ್ನು ಎದುರಿಸಲು ಸಿಪಿಐ(ಎಂ) ಮುಂದಿರುವ ಪ್ರಸ್ತಾವಗಳಿಗೆ ಯುಪಿಎ ಸರಕಾರ ಗಮನ ನೀಡಬೇಕು.

ಒಟ್ಟಾರೆಯಾಗಿ ಯುಪಿಎ ಸರಕಾರ ವಿದೇಶೀ ಹಣಕಾಸು ಬಂಡವಾಳ ಮತ್ತು ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳಿಗೆ ಅನುಗುಣವಾದ ಕ್ರಮಗಳನ್ನು ಹೇಗಾದರೂ ತರುವಲ್ಲಿ ಆತುರವನ್ನು ತೋರುತ್ತಾ, ಅತ್ತ ಕೋಟ್ಯಾಂತರ ರೈತರು, ಕಾರ್ಮಿಕರು ಮತ್ತು ಇತರ ಶ್ರಮಜೀವಿ ವಿಭಾಗಗಳಿಗೆ ಪರಿಹಾರ ಒದಗಿಸಬಹುದಾದ, ಅವರ ಬದುಕಿಗೆ ಆಸರೆ ನೀಡಬಲ್ಲ ಕ್ರಮಗಳನ್ನು ಕೈಗೆತ್ತಿಕೊಳ್ಳುವಲ್ಲಿ ನಿರಾಸಕ್ತಿಯನ್ನು ತೋರಿಸಿದೆ.

ಯುಪಿಎ ಸರಕಾರ ಅಪಕೀರ್ತಿಗೊಳಗಾದ ಹಿಂದಿನ ಧೋರಣೆಗಳಿಂದ ತನ್ನನ್ನು ದೂರವಿರಿಸಿಕೊಳ್ಳುವ ಅಗತ್ಯದ ಬಗ್ಗೆ ಸಾಕಷ್ಟು ಕಾಳಜಿ ವಹಿಸುತ್ತಿಲ್ಲ. ನವ ಉದಾರವಾದಿ ಸುಧಾರಣೆಗಳು ಮಾತ್ರವೇ ದೇಶವನ್ನು ಮುಂದೊಯ್ಯಬಲ್ಲ ದಾರಿ ಎಂದು ನಂಬಿರುವ ವಿಚಾರದ ಮತ್ತು ಸಿಬ್ಬಂದಿಯ ಒಂದು ವ್ಯವಸ್ಥೆ ಬೇರುಬಿಟ್ಟಿದೆ. ಸಿಪಿಐ(ಎಂ) ಈ ನಿಲುವಿಗೆ ಸವಾಲು ಹಾಕುತ್ತದೆ ಹಾಗೂ **ಪರ್ಯಾಯ ನೀತಿಗಳನ್ನು ಮುಂದಿಡುವುದನ್ನು ಮತ್ತು ಅವುಗಳ ಅಂಗೀಕಾರಕ್ಕಾಗಿ ಜನಗಳನ್ನು ಅಣಿನೆರೆಸುವುದನ್ನು ಮುಂದುವರೆಸುತ್ತದೆ.**

ಎಡಪಕ್ಷಗಳ ದೃಢ ನಿಲುವು ಮತ್ತು ಒತ್ತಡದಿಂದಾಗಿ ನೌಕರರ ಭವಿಷ್ಯನಿಧಿಯ ಬಡ್ಡಿದರವನ್ನು ಮತ್ತೆ 9.5ಕ್ಕೆ ತರಲಾಯಿತು;



ಕೃಪೆ : 'ದಿ ಹಿಂದೂ'
ಶ್.... ಮಾತಾಡದೆ ಮುಖಂಡರನ್ನು ಹಿಂಬಾಲಿಸಿ. ನಾವು ಎಲ್ಲಿಗೆ ಹೋಗುತ್ತಿದ್ದೇವೆಂದು ಅವರಿಗೆ ಗೊತ್ತಿದೆ.

ಗ್ರಾಮೀಣ ಸಾಲದ ಸಮಸ್ಯೆ

ಗ್ರಾಮೀಣ ಕುಟುಂಬಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ಸಾಲ ಬೇಕಾಗುತ್ತದೆ. ಒಂದು ರೈತ ಕುಟುಂಬಕ್ಕೆ ಬೀಜ, ಗೊಬ್ಬರ, ಕ್ರಿಮಿನಾಶಕದಂತಹ ಕೃಷಿ ಲಾಗವಾಡುಗಳನ್ನು ಕೊಂಡುಕೊಳ್ಳಲು ಅಲ್ಪಾವಧಿಯ (ದುಡಿಯುವ ಬಂಡವಾಳ) ಸಾಲ ಬೇಕಾಗುತ್ತದೆ, ಮಾತ್ರವಲ್ಲ ಕೃಷಿಯಲ್ಲಿ ದೀರ್ಘಾವಧಿ ಹೂಡಿಕೆಗಾಗಿ ಸಾಲದ ಸೌಲಭ್ಯ ಬೇಕಾಗುತ್ತದೆ. ಕೃಷಿ ಆದಾಯ ಸೀಸನಲ್ ಆಗಿರುವುದರಿಂದ ಕೃಷಿಯಿಂದ ಆದಾಯ ಬರುವವರೆಗಿನ ಅವಧಿಯ ಖರ್ಚುವೆಚ್ಚಗಳನ್ನು ಸರಿದೂಗಿಸಲು ಸಾಲ ಮಾಡಬೇಕಾಗುತ್ತದೆ. ಉಚಿತ ಶಿಕ್ಷಣ ವ್ಯವಸ್ಥೆ, ಉಚಿತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಬಲಿಷ್ಠವಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ಇಲ್ಲದಿರುವ ಈ ನಮ್ಮ ಸಮಾಜದಲ್ಲಿ ಮಕ್ಕಳ ಶಿಕ್ಷಣಕ್ಕಾಗಿ, ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚಗಳಿಗಾಗಿ, ಮನೆಕಟ್ಟುವುದಕ್ಕಾಗಿ ಮಾತ್ರವಲ್ಲ ಹೊಟ್ಟೆಗೆ ಹಿಟ್ಟು ಕೊಂಡುಕೊಳ್ಳುವುದಕ್ಕಾಗಿಯೂ ಸಾಲ ಮಾಡಬೇಕಾದ ಪರಿಸ್ಥಿತಿ ಇದೆ. ಮದುವೆ ಮುಂಜಿಯಂತಹ ಸಾಮಾಜಿಕ ಕಾರ್ಯಕ್ರಮ ಗಳಿಗಾಗಿ ಹಾಗೂ ಹಬ್ಬ ಹರಿದಿನಗಳಲ್ಲಿ ಮಾಡಲಾಗುತ್ತಿರುವ ಆಚರಣೆಗಳಿಗಾಗಿ ಸಾಲ ಮಾಡಬೇಕಾಗುತ್ತದೆ. ಗ್ರಾಮೀಣ ಕುಟುಂಬಗಳ, ಅದರಲ್ಲೂ ಮುಖ್ಯವಾಗಿ ಬಡಕುಟುಂಬಗಳ ಇಂತಹ ಸಹಜ ಆವಶ್ಯಕತೆಗಳನ್ನು ಪೂರೈಸಲು ಸುಲಭ ಬಡ್ಡಿ ದರಗಳಲ್ಲಿ ಸಾಲವನ್ನು ಒದಗಿಸುವ ವ್ಯವಸ್ಥೆ ಇರಬೇಕಾದ್ದು ನ್ಯಾಯವಾಗಿದೆ. ಗ್ರಾಮೀಣ ಕುಟುಂಬಗಳಿಗೆ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಸಾಂಸ್ಥಿಕಸಾಲ ಸುಲಭವಾಗಿ ದೊರೆಯದಿದ್ದಾಗ ಗ್ರಾಮೀಣ ಜನತೆ ಅನಿವಾರ್ಯ ವಾಗಿ ಲೇವಾದೇವಿಗಾರರನ್ನು ಅವಲಂಬಿಸ ಬೇಕಾಗುತ್ತದೆ. ಯಾವದೇ ಕಾನೂನಿನ ನಿಯಂತ್ರಣ ವಿಲ್ಲದ ಈ ಲೇವಾದೇವಿಗಾರರು ಹೇರುವ ದುಬಾರಿ ಬಡ್ಡಿ ದರಗಳಿಂದಾಗಿ, ವಸೂಲಿಗಾಗಿ ಅನುಸರಿಸುವ ಅಮಾನವೀಯ ಕ್ರಮಗಳಿಂದಾಗಿ ಗ್ರಾಮೀಣ ಕುಟುಂಬಗಳು ತಮ್ಮ ಹೊಲ ಮನೆಗಳನ್ನು ಕಳೆದುಕೊಂಡು ಭಿಕ್ಷೆ ಬೇಡುವಂತಾದ ಉದಾಹರಣೆಗಳು ಗ್ರಾಮೀಣ ಭಾರತದಲ್ಲಿ ಸಾಮಾನ್ಯವಾಗಿವೆ.

ಗ್ರಾಮೀಣ ಸಾಲದ ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು, ಸ್ವಾತಂತ್ರ್ಯಾ ನಂತರ ಗ್ರಾಮೀಣ ಸಾಲ ನೀತಿಯನ್ನು ರೂಪಿಸಲಾಗಿತ್ತು, ಈ ಸಾಲ ನೀತಿಯ ಮುಖ್ಯ ಉದ್ದೇಶವು, ರಿಸರ್ವ್ ಬ್ಯಾಂಕಿನ (1996) ಗವರ್ನರ್ ರಂಗರಾಜನ್ ಅವರ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮೀಣ ಜನತೆಯ ಅದಷ್ಟು ದೊಡ್ಡ ವಿಭಾಗಕ್ಕೆ ಸಾಕಷ್ಟು ಹಾಗೂ ಸಕಾಲಿಕ ಸಾಲವನ್ನು ನ್ಯಾಯವಾದ ಬಡ್ಡಿ ದರಗಳಲ್ಲಿ ಒದಗಿಸುವುದು ಆಗಿತ್ತು. ಈ ಉದ್ದೇಶದ ಜಾರಿಗಾಗಿ, ಸಾಲ ಒದಗಿಸುವ ಸಂಸ್ಥೆಗಳನ್ನು ವಿಸ್ತರಿಸುವುದು, ನೇರವಾಗಿ ಸಾಲ ಒದಗಿಸುವುದು ಮತ್ತು ಸಬ್ಸಿಡಿ ಸಹಿತದ ಸಾಲ ನೀಡುವುದು ಮೊದಲಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಗ್ರಾಮೀಣ ಸಾಲ ಮಾರುಕಟ್ಟೆಯಿಂದ ಖಾಸಗಿ ಲೇವಾದೇವಿಗಾರರನ್ನು ಹೊರತಳ್ಳುವುದು ಈ ನೀತಿಯ ಉದ್ದೇಶವಾಗಿತ್ತು.

ಗ್ರಾಮೀಣ ಕುಟುಂಬಗಳ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಸಾಂಸ್ಥಿಕಸಾಲ ಸುಲಭವಾಗಿ ದೊರೆಯದಿದ್ದಾಗ ಗ್ರಾಮೀಣ ಜನತೆ ಅನಿವಾರ್ಯವಾಗಿ ಲೇವಾದೇವಿಗಾರರನ್ನು ಅವಲಂಬಿಸಬೇಕಾಗುತ್ತದೆ. ಯಾವದೇ ಕಾನೂನಿನ ನಿಯಂತ್ರಣವಿಲ್ಲದ ಈ ಲೇವಾದೇವಿಗಾರರು ಹೇರುವ ದುಬಾರಿ ಬಡ್ಡಿ ದರಗಳಿಂದಾಗಿ, ವಸೂಲಿಗಾಗಿ ಅನುಸರಿಸುವ ಅಮಾನವೀಯ ಕ್ರಮಗಳಿಂದಾಗಿ ಗ್ರಾಮೀಣ ಕುಟುಂಬಗಳು ತಮ್ಮ ಹೊಲ ಮನೆಗಳನ್ನು ಕಳೆದುಕೊಂಡು ಭಿಕ್ಷೆ ಬೇಡುವಂತಾದ ಉದಾಹರಣೆಗಳು ಗ್ರಾಮೀಣ ಭಾರತದಲ್ಲಿ ಸಾಮಾನ್ಯವಾಗಿವೆ.

ಬ್ಯಾಂಕುಗಳ ರಾಷ್ಟ್ರೀಕರಣ

1969 ರಲ್ಲಿ 14 ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ ದಿಂದಾಗಿ ಗ್ರಾಮೀಣ ಸಾಲ ನೀತಿಗೆ ಬಾರೀ ಬಲ ಬಂದಂತಾಯಿತು. ಇದು 'ಹಸಿರು ಕ್ರಾಂತಿ'ಯ ಆರಂಭದ ಕಾಲವಾಗಿತ್ತು. ಗ್ರಾಮೀಣ ಪ್ರದೇಶದ ಶ್ರೀಮಂತ ರೈತರಿಗೆ ಸಾಲ ಸೌಲಭ್ಯ ಒದಗಿಸುವುದು ಬ್ಯಾಂಕುಗಳ ರಾಷ್ಟ್ರೀಕರಣದ ಉದ್ದೇಶಗಳಲ್ಲಿ ಒಂದಾಗಿತ್ತು, ಇದರಿಂದಾಗಿ ವಾಣಿಜ್ಯ ಬ್ಯಾಂಕುಗಳ ಗುರಿ ಹಾಗೂ ಕಾರ್ಯಾಚರಣೆ ಯಲ್ಲಿ ಗಣನೀಯ ಬದಲಾವಣೆ ಬರುವಂತಾ ಯಿತು. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಶಾಖೆಗಳ ಹಾಗೂ ಸಹಕಾರಿ ಸಂಸ್ಥೆಗಳ ಸ್ಥಾಪನೆಯಾಯಿತು. ಕೃಷಿ ಹಾಗೂ ಕೃಷಿ ಸಂಬಂದಿತ ಚಟುವಟಿಕೆಗಳು ಹಾಗೂ ಸಣ್ಣ ಹಾಗೂ ಗೃಹ ಕೈಗಾರಿಕೆಗಳನ್ನು ಆದ್ಯತೆಯ ಕ್ಷೇತ್ರಗಳೆಂದು ಪರಿಗಣಿಸಿ ವಾಣಿಜ್ಯ ಬ್ಯಾಂಕುಗಳು ಈ ಕ್ಷೇತ್ರಗಳಿಗೆ ಶೇ.40 ರಷ್ಟು ಮುಂಗಡವನ್ನು ಒದಗಿಸಬೇಕೆಂಬ ಗುರಿಯನ್ನು ನೀಡಲಾಯಿತು.

1970 ರಿಂದ 1980 ರ ನಡುವಿನ ಅವಧಿಯಲ್ಲಿ ಗ್ರಾಮೀಣ ಉದ್ಯೋಗ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಲಾಯಿತು. ಐಆರ್‌ಡಿಪಿ ಯೋಜನೆಯ ಮೂಲಕ ಗ್ರಾಮೀಣ ಉದ್ಯೋಗ ಹಾಗೂ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗಾಗಿ ಸಬ್ಸಿಡಿ ಸಹಿತದ ಸಾಲವನ್ನು ಒದಗಿಸಲಾಯಿತು. ಈ ಅವಧಿಯಲ್ಲಿ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೇ ವಿಸ್ತಾರಗೊಂಡಿತು. ಆದರೆ ಭೂ ಸುಧಾರಣಾ ಕ್ರಮಗಳ ಕೊರತೆಯಿಂದಾಗಿ ಬರಲಿಲ್ಲ.

ಉದಾರೀಕರಣದ ಯುಗದಲ್ಲಿ :

1991 ರಲ್ಲಿ ಭಾರತ ಸರ್ಕಾರ ಉದಾರೀ ಕರಣದ ದೋರಣೆಗಳನ್ನು ಅಂಗೀಕರಿಸುವುದ ರೊಂದಿಗೆ ಇದುವರೆಗಿನ ಗ್ರಾಮೀಣ ಸಾಲ ನೀತಿ ಸಂಪೂರ್ಣವಾಗಿ ಬದಲಾಯಿತು. ರೈತ ಪರ ನೀತಿಯ ಬದಲಾಗಿ ಮಾರುಕಟ್ಟೆ -ಪರ, ಲಾಭ ಆಧಾರಿತ ನೀತಿ ಆರಂಭವಾಯಿತು. ಇದರ ಪರಿಣಾಮವಾಗಿ ಗ್ರಾಮೀಣ ಸಾಲ ಮುಖ್ಯವಾಗಿ ಕೃಷಿ ಸಾಲವನ್ನು ಗಣನೀಯವಾಗಿ ಕಡಿತಮಾಡಲಾಯಿತು. ಗ್ರಾಮೀಣ ಸಾಲ ಠೇವಣಿ ಅನುಪಾತ ಶೇಕಡಾ 51.04 ರಿಂದ ಶೇಕಡಾ 31.95 ಕ್ಕೆ ಇಳಿಯಿತು. ಗ್ರಾಮೀಣ ಪ್ರದೇಶದಲ್ಲಿದ್ದು ವಾಣಿಜ್ಯ ಬ್ಯಾಂಕುಗಳ ಸಾವಿರಾರು ಶಾಖೆಗಳಲ್ಲಿ ಮುಚ್ಚಲ್ಪಟ್ಟವು.



ಕೋಲಾರದಲ್ಲಿ ಪ್ರಾಂತ ರೈತ ಸಂಘದ ಆಶ್ರಯದಲ್ಲಿ 'ಬ್ಯಾಂಕುಗಳ ಅಗತ್ಯ ಕೃಷಿ ಸಾಲ' ಕುರಿತ ಸಮಾವೇಶ ನಡೆಯಿತು. ಕೆನರಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಎಂ.ರತ್ನಾಕರ ಶೆಣೈ ಮಾತನಾಡಿದರು. ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಮುಖಂಡ ಜಿ.ಸಿ.ಬಯ್ಯಾರೆಡ್ಡಿ ಮೊದಲಾದವರು ಉಪಸ್ಥಿತರಿದ್ದರು.

ಗ್ರಾಮೀಣ ಶಾಖೆಗಳು ನೀಡಿದ ಸಾಲದ ಪ್ರಮಾಣವು ಶೇ. 15(1990) ರಿಂದ ಶೇ. 10(2002) ಕ್ಕೆ ಇಳಿಯಿತು

ಗ್ರಾಮೀಣ ಸಾಲ ನೀತಿಯಲ್ಲಿ ಆದ ಅವರ ಈ ಹಠಾತ್ ಬದಲಾವಣೆಯಿಂದಾಗಿ ಗ್ರಾಮೀಣ ಲೇವಾದೇಪಿಗಾರರು ಮತ್ತೆ ಎದ್ದು ಕುಳಿತರು. ಅವರ ಕಪಿಮುಷ್ಟಿ ಇನ್ನಷ್ಟು ಭದ್ರವಾಯಿತು. ರೈತರು ಹಾಗೂ ಗ್ರಾಮೀಣ ಜನತೆ ಅನಿವಾರ್ಯವಾಗಿ ಇವರನ್ನೇ ಅವಲಂಬಿಸುವಂತಾಯಿತು. ಬೆಳೆಹಾನಿ, ಬೆಲೆ ಕುಸಿತದಿಂದಾಗಿ ಸಾಲ ತೀರಿಸಲಾಗದ ರೈತರು ಸಾಳು ಸಾಲಾಗಿ ಆತ್ಮಹತ್ಯೆ ಮಾಡಿಕೊಂಡರು.

ಉದಾರೀಕರಣ ನೀತಿಗಳನ್ನು ಜಾರಿಗೆ ತಂದು ಗ್ರಾಮೀಣ ಪ್ರದೇಶಗಳಿಗೆ ಸಂಕಷ್ಟಗಳನ್ನು ಹರಿಸಿದ ಕಾಂಗ್ರೆಸ್ ಸರ್ಕಾರದ ದೋರಣೆಗಳನ್ನೇ 1998 ರ ನಂತರ ಬಿಜೆಪಿ ಸರ್ಕಾರ ಮುಂದುವರೆಸುತ್ತಾ ಹೋದುದರ ಪರಿಣಾಮವಾಗಿ ದೇಶದ ವಿವಿಧ ಭಾಗಗಳಲ್ಲಿ ಸಾವಿರರು ರೈತರು ಆತ್ಮಹತ್ಯೆ ಮಾಡಿಕೊಂಡರು. ರೈತರ ಭಾಷೆಯಲ್ಲೇ ಹೇಳುವುದಾದರೆ, ಬಿಜೆಪಿಗೆ ರೈತರ ಶಾಪ ತಟ್ಟಿತು. 2004 ಚುನಾವಣೆಯಲ್ಲಿ ಗ್ರಾಮೀಣ ಜನತೆ ಬಿಜೆಪಿಯನ್ನು ಕಸ ಗುಡಿಸಿದಂತೆ ಗುಡಿಸಿ ತಿಪ್ಪೆಗೆ ಹಾಕಿದರು.



ಯು.ಪಿ.ಎ. ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ

2004 ರ ಜನಾದೇಶವನ್ನು ಗಮನದಲ್ಲಿಟ್ಟು ಕೊಂಡು, ಮತ್ತು ಮುಖ್ಯವಾಗಿ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುತ್ತಿರುವ ಎಡ ಪಕ್ಷಗಳ ಸಲಹೆಗಳನ್ನು ಒಪ್ಪಿಕೊಂಡು ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರವು ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯ ಕ್ರಮದಲ್ಲಿ ಗ್ರಾಮೀಣ ಸಾಲನೀತಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಗ್ರಾಮೀಣ ಸಹಕಾರಿ ಸಾಲ ವ್ಯವಸ್ಥೆಯನ್ನು ಬಲಪಡಿಸುವುದು, ಮೂರು ವರ್ಷಗಳಲ್ಲಿ ಗ್ರಾಮೀಣ ಸಾಲದ ಹರಿವನ್ನು ದ್ವಿಗುಣಗೊಳಿಸು ವುದು, ಗ್ರಾಮೀಣ ಸಾಲ ವಿತರಣಾ ವ್ಯವಸ್ಥೆಯನ್ನು ಪುನರ್ ಪರಶೀಲಿಸುವುದು ಮೊದಲಾದ ಭರವಸೆಗಳನ್ನು ನೀಡಲಾಗಿದೆ ಅಲ್ಲದೆ ಕೇಂದ್ರ ಬಜೆಟ್‌ಗಳನ್ನು ಅಗತ್ಯ ಹಣವನ್ನು ತೆಗೆದಿರಿಸಲಾಗಿದೆ.

ಈ ಭರವಸೆಗಳು, ಇನ್ನುಳಿದ ಭರವಸೆಗಳಂತೆ ತನ್ನಷ್ಟಕ್ಕೆ ಜಾರಿಯಾಗುವ ಸಾಧ್ಯತೆಯಿಲ್ಲ. ರೈತರ ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಂಘಟನೆ ಗಳು ಗ್ರಾಮೀಣ ಜನರನ್ನು ಸಂಘಟಿಸಿ ಭರವಸೆಗಳ ಜಾರಿಗಾಗಿ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಕೃಷಿ ಕೂಲಿಕಾರರಿಗೆ ಗೃಹ ಬಳಕೆಗಾಗಿ ಹಾಗೂ ಹೈನುಗಾರಿಕೆಯಂತಹ ಉಪ ಕಸುಬುಗಳಿಗಾಗಿ ಬ್ಯಾಂಕುಗಳು ಸಾಲ ನೀಡುವಂತಾಗ ಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮುಚ್ಚಲಾದ ಬ್ಯಾಂಕ್ ಶಾಖೆಗಳನ್ನು ಪುನರಾರಂಭಿಸ ಬೇಕಾಗಿದೆ. ಆದ್ಯತೆಯ ಕ್ಷೇತ್ರಗಳಿಗೆ ಶೇ. 40 ರಷ್ಟು ಮತ್ತು ಕೃಷಿ ಕ್ಷೇತ್ರಕ್ಕೆ ಶೇ. 18 ರಷ್ಟು ಮುಂಗಡವನ್ನು ಒದಗಿಸುವ ನೀತಿಯನ್ನು ಪುನಃ ಜಾರಿಗೆ ತರಬೇಕು. ಬಡ್ಡಿ ದರಗಳನ್ನು ಶೇ .6ಕ್ಕೆ ಇಳಿಸಬೇಕು. ಸಹಕಾರಿ ಬ್ಯಾಂಕುಗಳನ್ನು ಬಲಪಡಿಸಬೇಕು. ಖಾಸಗಿ ಲೇವಾದೇವಿಗರರನ್ನು ನಿಯಂತ್ರಿಸಲು ದೃಢವಾದ ಕ್ರಮಗಳನ್ನು ಅನುಸರಿಸಬೇಕು.

ಕರ್ನಾಟಕ ಸರ್ಕಾರವು ಅಸಲು ಸಂದಾಯ ಮಾಡುವ ರೈತರಿಗೆ ಬಡ್ಡಿ ಮನ್ನಾ ಸೌಲಭ್ಯವನ್ನು ಘೋಷಿಸಿದೆ. ಆದರೆ ಕಳೆದ ಮೂರು ನಾಲ್ಕು ವರ್ಷಗಳ ಸತತ ಬರಗಾಲ, ಬೆಳೆಹಾನಿ, ಬೆಲೆ ಕುಸಿತದಿಂದಾಗಿ ರೈತರು ಅಸಲನ್ನು ಸಂದಾಯ ಮಾಡುವ ಪರಿಸ್ಥಿತಿ ಇಲ್ಲ, ಆದ್ದರಿಂದ ಒಂದು ಸಲದ ಸೌಲಭ್ಯವಾಗಿ ಬಡ ರೈತರ ಸಾಲ- ಅಸಲು ಸಹಿತವಾಗಿ ಮನ್ನ ಮಾಡುವುದು ಅಗತ್ಯವಾಗಿದೆ.

ಗ್ರಾಮೀಣ ಸಾಲ ನೀತಿಗಾಗಿ ಹೋರಾಟ

ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟ ಎಲ್ಲಾ ಗ್ರಾಮೀಣ ಸಾಲ ನೀತಿಯ ಕುರಿತಾದ ಯು.ಪಿ.ಎ.ಸರ್ಕಾರದ ಭರವಸೆಗಳ ಜಾರಿಗಾಗಿ ದೇಶಾದ್ಯಂತ ಹೋರಾಟ ನಡೆಸಲು ಅಖಿಲ ಭಾರತ ಕಿಸಾನ್ ಸಭಾ ತನ್ನ ರಾಜ್ಯ ಘಟಕಗಳಿಗೆ ಕರೆ ನೀಡಿದೆ. ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರಿರುವ ಕರ್ನಾಟಕ ಪ್ರಾಂತ ರೈತ ಸಂಘವು ಈ ಬ್ಯಾಂಕುಗಳಿಂದ ಅಗತ್ಯ ಕೃಷಿ ಸಾಲಕ್ಕಾಗಿ ರೈತರ ರಾಜ್ಯ ಮಟ್ಟದ ಸಮಾವೇಶವೊಂದನ್ನು ಎಪ್ರಿಲ್ 15 ರಂದು ಕೋಲಾರದಲ್ಲಿ ಏರ್ಪಡಿಸಿತ್ತು. ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಅಧ್ಯಕ್ಷ ಎಂ. ರತ್ನಾಕರ್ ಶೆಣೈ ಅವರು "ಭಾರತ ಸರ್ಕಾರವು ವಿಶ್ವ ಬ್ಯಾಂಕ್ ಒತ್ತಡಗಳಿಗೆ ಮಣಿದು ಅನುಸರಿಸುತ್ತಿರುವ ಉದಾರೀಕರಣದ ಧೋರಣೆಗಳಿಂದಾಗಿ ಕೃಷಿ ಕ್ಷೇತ್ರಕ್ಕೆ ನೇರವಾಗಿ ಹೆಚ್ಚೆಚ್ಚು ಸಾಲವನ್ನು ನೀಡುವ ಬದಲು ಕೃಷಿ ಹೆಸರಿನಲ್ಲಿ ಶೀಥಲ ಕೇಂದ್ರಗಳಿಗೆ, ಫಾರಂಗಳಿಗೆ, ಹೂವಿನಂತಹ ಬೆಳೆಗಳನ್ನು ಬೆಳೆಯಲು ನೀಡುತ್ತಿದೆ" ಎಂದು ಆರೋಪಿಸಿದರು. ಕೃಷಿ ಕ್ಷೇತ್ರವನ್ನು ಪ್ರವೇಶಿಸಿರುವ ದೊಡ್ಡ ದೊಡ್ಡ ಕಂಪನಿಗಳು ಆದ್ಯತಾ ವಲಯಕ್ಕೆ ನೀಡಲಾಗುವ ಸಾಲವನ್ನು ಕಬಳಿಸುತ್ತಿವೆ ಎಂದ ಅವರು ಇದರಿಂದಾಗಿ ಬಡ ರೈತರಿಗೆ ಸಾಲ ಸಿಗದಂತಾಗಿದೆ ಎಂದರು. ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯರೆಡ್ಡಿಯವರು, 'ರೈತರು ಸಾಲ ವಾಪಸ್ ಮಾಡುವುದಿಲ್ಲ ಎಂಬ ನೆಪವೊಡ್ಡಿ ರೈತರಿಗೆ ಸಾಲ ನೀಡುವುದನ್ನು ಕಡಿಮೆ ಮಾಡಲಾಗುತ್ತಿದೆ' ಎಂದು ಹೇಳಿದರು. ಆದರೆ ವಾಸ್ತವಿಕವಾಗಿ ರೈತರಿಂದ ಬರಬೇಕಾದ ಬಾಕಿ ಕೇವಲ ಶೇ. 13 ರಷ್ಟಿದ್ದು ದೊಡ್ಡ ದೊಡ್ಡ ಬಂಡವಾಳಶಾಹಿ ಉದ್ಯಮಿಗಳಿಂದ ಬ್ಯಾಂಕುಗಳಿಗೆ ಕೋಟ್ಯಾಂತರ ರೂಪಾಯಿ ಬಾಕಿ ಇರುವುದನ್ನು ಮುಚ್ಚಿಡಲಾಗುತ್ತಿದೆ ಎಂದು ಹೇಳಿದರು. ರೈತರ ಫಸಲಿಗೆ ನ್ಯಾಯವಾದ ಬೆಲೆ ಸಿಗುವಂತಾದರೆ ಅವರು ಸಾಲಗಾರರಾಗಿ ಇರುವುದಿಲ್ಲ ಎಂದು ಹೇಳಿದರು. ಸಮಾವೇಶದ ಅಧ್ಯಕ್ಷತೆವಹಿಸಿದ್ದ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಅವರು ಮಾತನಾಡಿ ಕೃಷಿ ಕ್ಷೇತ್ರಕ್ಕೆ ಸಾರ್ವಜನಿಕ ಹೂಡಿಕೆಯನ್ನು ಕಡಿಮೆ ಮಾಡಿ ಬರಲಾಗುತ್ತಿರುವುದರಿಂದ ಬ್ಯಾಂಕುಗಳು ರೈತರಿಗೆ ಸಾಲ ನೀಡಲು ಹಿಂದೇಟು ಹಾಕುತ್ತಿವೆ. ಸರ್ಕಾರದ ಧೋರಣೆಗಳನ್ನು ರೈತರ ಪರವಾಗಿ ಬದಲಾಯಿಸುವಂತೆ ಬಲಿಷ್ಟವಾದ ಹೋರಾಟಗಳು ನಡೆಯಬೇಕಾಗಿದೆ ಎಂದು ಅವರು ಹೇಳಿದರು. ರೈತ ಮುಖಂಡರಾದ ಕೆ.ಎಂ.ವೆಂಕಟೇಶ್, ಎನ್.ವೆಂಕಟಾಚಲಯ್ಯ, ಪಿ.ಆರ್.ಸೂರ್ಯ ನಾರಾಯಣ, ಹೋಳೂರು ಶಂಕರ, ಉಮೇಶ್, ಜಿ.ಸಿದ್ದಗಂಗಪ್ಪ ಮತ್ತು ಮಾಜಿ ಶಾಸಕ ಸೂರಂ ರಾಮಯ್ಯ ಮೊದಲಾದವರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಮೇ ತಿಂಗಳಲ್ಲಿಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಗಳು ಜಂಟಿಯಾಗಿ ರಾಜ್ಯಾದ್ಯಂತ ನಡೆಸಿದ್ದ ಪ್ರಚಾರಾಂದೋಲನ ಮತ್ತು ತಾಲ್ಲೂಕು ಕಚೇರಿಗಳ ಮತ್ತಿಗೆ ಚಳುವಳಿಯಲ್ಲಿ ಗ್ರಾಮೀಣ ಸಾಲದ ಪ್ರಶ್ನೆಯನ್ನು ಪ್ರಮುಖವಾಗಿ ಎತ್ತಿಕೊಳ್ಳಲಾಗಿತ್ತು. ಈ ಹೋರಾಟವನ್ನು ಮುಂದಿನ ದಿನಗಳಲ್ಲಿ ಇನ್ನೂ ತೀವ್ರ ಗೊಳಿಸುವುದು ಅಗತ್ಯವಿದೆ.

- ನಿತ್ಯಾನಂದಸ್ವಾಮಿ

ವೃತ್ತಿಶಿಕ್ಷಣ ಬಿಕ್ಕಟ್ಟು ಬಗೆಹರಿಯದ ಕಗ್ಗಂಟು

ವೃತ್ತಿ ಶಿಕ್ಷಣ(ಸಿಇಟಿ) ಬಿಕ್ಕಟ್ಟನ್ನು ಶಾಶ್ವತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ರಾಜಕೀಯ ಇಚ್ಛಾಶಕ್ತಿ ತೋರುತ್ತಿಲ್ಲ. ಬದಲಾಗಿ ವ್ಯವಸ್ಥಿತ ರೀತಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಭಕೋರ ನೀತಿಗೆ ಪೂರಕವಾಗಿ ವರ್ತಿಸುತ್ತಿವೆ. ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವಂತಹ ಕೇಂದ್ರೀಯ ಶಾಸನವನ್ನು ರೂಪಿಸಬೇಕು. ಸರ್ಕಾರಿ ತಾಂತ್ರಿಕ, ವೈದ್ಯಕೀಯ ಇತರೆ ವೃತ್ತಿಪರ ಕಾಲೇಜುಗಳನ್ನು ಹೆಚ್ಚಿಸಬೇಕು. ಶಿಕ್ಷಣಕ್ಕೆ ಹೆಚ್ಚಿನ ಹಣಕಾಸು ಒದಗಿಸಬೇಕು. ಆಗಮಾತ್ರ ವೃತ್ತಿಶಿಕ್ಷಣದ ಕಗ್ಗಂಟು ಬಿಚ್ಚಿಕೊಳ್ಳುತ್ತದೆ.

ಎಸ್ ಎಫ್ಐ ಮತ್ತಿತರೆ ಸಂಘಟನೆಗಳ ಒತ್ತಡಕ್ಕೆ ಮಣಿದಿದ್ದ ಕೇಂದ್ರ/ರಾಜ್ಯ ಸರ್ಕಾರಗಳು ಕೇಂದ್ರೀಯ ಶಾಸನವೇ ಅಂತಿಮವೆಂದು ಹೇಳಿದ್ದನ್ನು ಮರೆತು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಜೊತೆ ರಾಜಿಗೆ ಹೊರಟಿವೆ. ಸಭೆಗಳ ಕಸರತ್ತುಗಳನ್ನು



ನಡೆಸಲಾರಂಭಿಸಿವೆ. ಧನದಾಹಿ ಕಾಮೆಡ್ ಕೆ ಬಳಗ ಈಗ ಮಠಾಧೀಶರನ್ನು ಮುಂದೆ ಬಿಟ್ಟು ಶುಲ್ಕ ಏರಿಕೆ -ಸೀಟ್ ಮ್ಯಾಟ್ರಿಕ್ಸ್ ಬಗ್ಗೆ ಬೊಗಳಿಸುತ್ತಿದೆ. ರಾಜ್ಯಸರ್ಕಾರ ಮಠಾಧೀಶರ ತಾಳಕ್ಕೆ ಕುಣಿಯುತ್ತಿದೆ.

ನಿವೃತ್ತ ನ್ಯಾಯಮೂರ್ತಿ ರಂಗಾ ವಿಠಲ್ ಚಾರ್ ಸಮಿತಿ ನಿಗದಿಗೊಳಿಸಿರುವ ಶುಲ್ಕಗಳು ಶಿಕ್ಷಣ ವ್ಯಾಪಾರೀಕರಣಕ್ಕೆ ಪೂರಕವಾಗಿದ್ದರೆ, ಇದೇ ತಿಂಗಳು 13ರಂದು ಸುಪ್ರೀಂ ಕೋರ್ಟ್ ತೀರ್ಮ ನೀಡಿತ್ತು. ತಂತ್ರಿಕ ಶಿಕ್ಷಣದ ಶುಲ್ಕ ಸ್ವರೂಪದ ಬಗ್ಗೆ ಕಳೆದ ವರ್ಷದ ಪದ್ಧತಿಯನ್ನು ಜಾರಿಗೆ ಮಾಡಿ ಎಂದು ಆದೇಶ ನೀಡಿದೆ. ಶಾಶ್ವತ ಪರಿಹಾರ ನಿರೀಕ್ಷಿಸುತ್ತಿರುವ ವಿದ್ಯಾರ್ಥಿ ಪೋಷಕರಿಗೆ ತೀರ್ಮ ನಿರಾಸೆ ತಂದಿದೆ. ಕಳೆದ ವರ್ಷ ಶೇ.75 ಸೀಟುಗಳನ್ನು ಸರ್ಕಾರಿ ಸಿಇಟಿ ಮೂಲಕ ತುಂಬುವ ವ್ಯವಸ್ಥೆ ಇದ್ದರೂ ಸಹ ಖಾಸಗಿ ಕಾಲೇಜುಗಳಲ್ಲಿ ಉಚಿತ ಸೀಟುಗಳ ಸಂಖ್ಯೆ ಕೇವಲ ಶೇ.30ರಷ್ಟು ಮಾತ್ರ ಇತ್ತು.

ಈ ಸೀಟುಗಳಿಗೆ 15,000 ಶುಲ್ಕ ವಿಧಿಸಲಾಗಿತ್ತು. ನಂತರದ ಶೇ.30 ಸೀಟುಗಳಿಗೆ ಸುಮಾರು 52 ಸಾವಿರದಷ್ಟು ಮತ್ತು ಕೊನೆಯ ಶೇ.40 ಸೀಟುಗಳಿಗೆ ತಲಾ 1 ಲಕ್ಷ 2 ಸಾವಿರ ರೂ.ಗಳನ್ನು ವಿದ್ಯಾರ್ಥಿಗಳು ತೆರಬೇಕಿತ್ತು. ಇಡೀ ಶುಲ್ಕ ಸ್ವರೂಪವನ್ನು ಮುಂದುವರೆಸುವುದು ಎಂದರೆ ಶಿಕ್ಷಣ ವ್ಯಾಪಾರೀಕರಣವನ್ನೇ ಮುಂದುವರೆಸುವುದು ಎಂದಾಗಿದೆ. ಇದಲ್ಲದೆ ವೈದ್ಯಕೀಯ ಶುಲ್ಕಗಳ ಬಗ್ಗೆ ಸದ್ಯದಲ್ಲೇ ತೀರ್ಪು ಹೊರಬೀಳಲಿದೆ. ಒಟ್ಟಾರೆ ರಾಜ್ಯ-ಕೇಂದ್ರ ಸರಕಾರಗಳು, ಧನದಾಹಿ ಶಿಕ್ಷಣ ಸಂಸ್ಥೆಗಳು, ನ್ಯಾಯಾಲಯಗಳು ಸೇರಿದಂತೆ ಜಾರಿಗೆ ತರುತ್ತಿರುವ ನೀತಿಗಳು ಪ್ರತಿಭೆ ಮತ್ತು ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಹಾಡುತ್ತಿದೆ. ಹೀಗಾಗಿ ಪ್ರತಿಭೆ, ಆಸಕ್ತಿ ಇದ್ದರೂ ದುಬಾರಿ ಶುಲ್ಕ - ,ಡೋನೇಶನ್ ನೀತಿಯಿಂದಾಗಿ ಬಡ ಹಾಗೂ ಕೆಳ ಮಧ್ಯಮ ವರ್ಗದ ಹಾಗೂ ಸಾಮಾಜಿಕವಾಗಿ ಹಿಂದುಳಿದ ಸಮುದಾಯದ ಬಹುದೊಡ್ಡ ಭಾಗದ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದೇ ದುಬಾರಿ ಶುಲ್ಕಗಳಿಂದಾಗಿ ಈ ವರ್ಷ ಸಿಇಟಿಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಕುಸಿತ ಕಂಡುಬಂದಿದೆ.



ಕೇಂದ್ರ ಸರ್ಕಾರ ಮೊದಲಿಗೆ ಕೇಂದ್ರೀಯ ಶಾಸನ ತರಲು ಆಸಕ್ತಿ ಹೊಂದಿದ್ದೇವೆಂದು ಹೇಳಿದ್ದು, ಈಗ ರಾಗ ಬದಲಾಯಿಸುತ್ತಿದೆ. ರಾಜ್ಯ ಸರ್ಕಾರಗಳಿಗೆ ಮಾರ್ಗ ಸೂಚಿಗಳನ್ನು ನೀಡ ಲಾಗುತ್ತದೆ ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಅರ್ಜುನ್‌ಸಿಂಗ್ ಹೇಳುತ್ತಿದ್ದಾರೆ. ಇವರ ವಾದವನ್ನು ಸುಪ್ರೀಂ ಕೋರ್ಟ್ ತಿಪ್ಪೆಗೆ ಎಸೆಯುತ್ತದೆ. ರಾಜ್ಯ ಸರ್ಕಾರ ಆರು ಹೊಸ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುತ್ತೇವೆಂದು ಹೇಳಿ ಅದಕ್ಕೆ ಬೇಕಾದ ಎಲ್ಲಾ ರೀತಿಯ ವ್ಯವಸ್ಥೆ ಮಾಡದೆ ಅನಗತ್ಯ ವಿಳಂಬದ ಧೋರಣೆಯನ್ನು ಅನುಸರಿಸುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಶಿಕ್ಷಣ ಸಂಸ್ಥೆಗಳ ಲಾಭಕೋರನೀತಿಗೆ ಕೈಜೋಡಿಸುತ್ತಿದೆ. ಈಗಾಗಲೇ ಏರಿರುವ ಶುಲ್ಕಗಳನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸದ ಸರ್ಕಾರ ಶಿಕ್ಷಣ ವ್ಯಾಪಾರೀಕರಣಕ್ಕೆ ಮಣೆ ಹಾಕುತ್ತಿದೆ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿ -ಪೋಷಕರು ಶಿಕ್ಷಣ ವ್ಯಾಪಾರೀಕರಣ ವಿರುದ್ಧ ಹೋರಾಟ ರೂಪಿಸದೆ ಅನ್ಯಮಾರ್ಗವಿಲ್ಲ. ಈಗಾಗಲೇ ಎಸ್ ಎಫ್ ಐ ಸಂಘಟನೆ ಹೇಳಿರುವಂತೆ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವಂತಹ ಕೇಂದ್ರೀಯ ಶಾಸನವನ್ನು ರೂಪಿಸಬೇಕು. ಸರ್ಕಾರಿ ತಾಂತ್ರಿಕ, ವೈದ್ಯಕೀಯ ಇತರೆ ವೃತ್ತಿಪರ ಕಾಲೇಜುಗಳನ್ನು ಹೆಚ್ಚಿಸಬೇಕು. ಶಿಕ್ಷಣಕ್ಕೆ ಹೆಚ್ಚಿನ ಹಣಕಾಸು ಒದಗಿಸಬೇಕು. ಆಗಮಾತ್ರ ವೃತ್ತಿಶಿಕ್ಷಣದ ಕಗ್ಗಂಟು ಬಿಚ್ಚಿಕೊಳ್ಳುತ್ತದೆ.

ಬಿ.ರಾಜಶೇಖರಮೂರ್ತಿ
ಎಸ್.ಎಫ್.ಐ. ಅಧ್ಯಕ್ಷರು

ಕಾರಿಡಾರ್ - ಸತ್ಯಗಳು

ಪುಟ 3 ರಿಂದ

ಆದೇಶ ರದ್ದುಗೊಳಿಸುವ ಆಜ್ಞೆ ಜಾರಿಯಾಗದಂತೆ ಅಧಿಕಾರಿಗಳ ಮೇಲಿನ ಕ್ರಮಗಳ ತಡೆಯಾಜ್ಞೆ ಕೋರಿ ಸರ್ಕಾರ ಮನವಿ ಸಲ್ಲಿಸಿತ್ತು. ಹಾಗೆಯೇ ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಈಗ ಸರ್ಕಾರವು ಅಧಿಕಾರಿಗಳು ನ್ಯಾಯಾಲಯದ ಮುಂದೆ ನೀಡಿರುವ ಹೇಳಿಕೆ ಅವರ ವೈಯಕ್ತಿಕ ಅಲ್ಲ, ಅದು ಸರ್ಕಾರದ ತೀರ್ಮಾನ, ಯಾವ ದುರುದ್ದೇಶವೂ ಇರಲಿಲ್ಲ, ಯೋಜನೆಗೆ ವಿರೋಧವಿಲ್ಲ, ಆದರೆ ವಶಪಡಿಸಿಕೊಳ್ಳಲಾದ 20,193 ಎಕರೆ ಜಮೀನಿನಲ್ಲಿ ಯೋಜನೆಗೆ ಕೇವಲ 17,809 ಎಕರೆ ಜಮೀನು ಮಾತ್ರ ಬೇಕಿದೆ ಉಳಿದ 2,384 ಎಕರೆ ಭೂಮಿ ರಿಯಲ್ ಎಸ್ಟೇಟ್‌ಗೆ ಬಳಸುವಂತಾಗಿದೆ. ಇದಕ್ಕೆ ತಮ್ಮ ತಕರಾರು, ಎಂದು ಈಗ ಹೇಳಿದೆ. ಈ ಬಗ್ಗೆ 'ನಂದಿ' ಸಂಸ್ಥೆಯ ಪರ ವಕೀಲರ ವಾದ ಕೇಳಿದ ನ್ಯಾಯಾಲಯವು ತಡೆಯಾಜ್ಞೆಗೆ ನೀಡಲು ಏನಾದರೂ ಆಕ್ಷೇಪ ಇದೆಯೇ ಎಂದು ಪ್ರಶ್ನಿಸಿದೆ - ಇಲ್ಲವೆಂದು ಅವರ ವಕೀಲರು ಹೇಳಿದ್ದಾರೆ. ಬಳಿಕ ಹೈಕೋರ್ಟ್‌ನ ಆದೇಶಕ್ಕೆ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ನೀಡಿದೆ. ಅಲ್ಲದೆ 10 ದಿನದೊಳಗೆ ಪ್ರತಿವಾದಿಗಳು ಪ್ರತಿಕ್ರಿಯೆ ಸಲ್ಲಿಸಬೇಕೆಂದಿದೆ. ಸರ್ಕಾರ ಈಗ ಕೋರಿದ ಮನವಿಯಲ್ಲಿ ಬಹುತೇಕ ತಾಂತ್ರಿಕ ಅಂಶಗಳನ್ನು ಅದು ಎತ್ತಿದೆ.

ಈ ಕಾರಿಡಾರ್ ಯೋಜನೆಯ ಕುರಿತ ವಿವಾದಗಳು ಹೊಸದೇನಲ್ಲ. ಇದಕ್ಕೆ ಸಂಬಂಧಿಸಿ ಹಿಂದೆ ನ್ಯಾಯಾಲಯವು ಹಲವು ತೀರ್ಪು ನೀಡಿದ ಉದಾಹರಣೆಗಳಿವೆ. ಈ ಸಂದರ್ಭದಲ್ಲಾದರೂ ಕಾರಿಡಾರ್ ಯೋಜನೆ ಅದರ ಒಳ-ಹೊರ ವ್ಯವಹಾರಗಳು ಪೂರ್ಣವಾಗಿ ಸಾರ್ವಜನಿಕರೆದುರು ಬರಬೇಕಿದೆ.

ಊರಿಗೆ ಉರಿ ಹಚ್ಚುವವರು

ದೋಸ್ತಿ ಸರ್ಕಾರದ ಭಾಗೀದಾರರ ಕುಸ್ತಿಯಿಂದಾಗಿ ಉದ್ಭವಿಸಿದ ಸಂದರ್ಭದಲ್ಲಿ ತಾನೂ ಏನಾದರೂ ಮಾಡಬೇಕು, ಬಳಸಿಕೊಳ್ಳಬೇಕು, ಇಲ್ಲವಾದರೆ ಅಸ್ತಿತ್ವವೇ ಅಲುಗಾಡೀತೆಂದು ಬಿಜೆಪಿಯವರೂ ಬೆಂಗಳೂರಿನಲ್ಲಿ ರ್‍ಯಾಲಿ ಮಾಡಿ ಭಾಷಣ ಬಿಗಿದರು. ಇನ್ನಾರು ತಿಂಗಳಲ್ಲಿ ಎಲೆಕ್ಷನ್ ಗ್ಯಾರಂಟಿ ಎಂದು ಭವಿಷ್ಯ ನುಡಿದಿದ್ದಾರೆ. ಅದಕ್ಕಾಗಿ ಧರ್ಮಸಿಂಗ್ ಸರ್ಕಾರದ ವಿರುದ್ಧ ಧರ್ಮಯುದ್ಧ ಸಾರಿಬಿಟ್ಟಿದ್ದಾರಂತೆ. ಎಲ್ಲಾ ಹಳ್ಳಿಗಳಿಗೂ ನುಗ್ಗಿ ಪ್ರಚಾರಿಸುವರಂತೆ. ಬಿಜೆಪಿ ಸಾರಿರುವ ಧರ್ಮಯುದ್ಧ ಅಧರ್ಮ ಯುದ್ಧಗಳು ಏನಾಗುತ್ತವೆ ಎಂಬುದನ್ನು ನೋಡೋಣ. ಇವರು ಘೋಷಿಸಿರುವ ಆರೋಪಗಳಲ್ಲಿ ಬಿಜೆಪಿಯ ಕೇಂದ್ರ ಅಧಿಕಾರದಲ್ಲಿದ್ದ ಹಾಗೂ ರಾಜ್ಯದಲ್ಲಿ ವಿರೋಧ ಪಕ್ಷವಾದರೂ ಆಡಳಿತ ಪಕ್ಷದೊಂದಿಗೆ ಬಹುತೇಕ ಆರ್ಥಿಕ ನೀತಿಗಳಲ್ಲಿ ಕೈಜೋಡಿಸಿದ ಬಳುವಳಿಯೂ ಇದೆ ಎಂಬುದನ್ನು ಮರೆಯಲಾಗದು. ಊರಿಗೆ ಉರಿ ಹಚ್ಚುವ ಈ ಕೋಮುವಾದಿಗಳು ಊರೂರಿಗೆ ಬರುವಾಗ ಎಚ್ಚರವಿರಬೇಕು

ಕೃಷ್ಣ ನೀರು - ದೂರು

ಆಂಧ್ರಪ್ರದೇಶದ ಸರ್ಕಾರ ಕೃಷ್ಣದ 'ಬಿ' ಸ್ಕೀಮಿನ ಹೆಚ್ಚುವರಿ ನೀರನ್ನು ಬಳಸಲು ಅಕ್ರಮವಾಗಿ ಯೋಜನೆ ರೂಪಿಸುತ್ತಿದೆ ಎಂಬ ವಿವಾದ ಪ್ರಧಾನವಾಗಿ ಕೇಳಿಬರುತ್ತಿದೆ. ಇದಕ್ಕಾಗಿ 46,000 ಕೋಟಿ ರೂಪಾಯಿಗಳ ಯೋಜನೆಗಳನ್ನು ರೂಪಿಸಲಾಗಿದೆ ಎಂದು ವಿವಿಧ ರಾಜಕೀಯ ಪಕ್ಷಗಳು, ಅಸೆಂಬ್ಲಿಯಲ್ಲಿ ಚರ್ಚಿಸಿದ್ದವು. ಸರ್ಕಾರದ ಮೇಲೆ ವಿಪರೀತ ಒತ್ತಡವೂ ಉಂಟಾಗಿತ್ತು. ಕೇಂದ್ರ ಸರ್ಕಾರಕ್ಕೆ ಇದನ್ನು ಮನವರಿಕೆ ಮಾಡಿಕೊಡಲು, ಅಗತ್ಯವಾದ ಮಧ್ಯಪ್ರವೇಶಿಸಲು ಆಗ್ರಹಿಸಬೇಕೆಂದೂ, ಅದಕ್ಕಾಗಿ ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕೊಂಡೊಯ್ಯಲು ಒತ್ತಾಯಿಸಲಾಗಿತ್ತು. ಈ ಬಗ್ಗೆ ಮುಖ್ಯಮಂತ್ರಿಗಳೂ ಸರ್ವ ಪಕ್ಷಗಳ ಸಭೆಯನ್ನು ನಡೆಸಿದರು. ಸಿಪಿಐ(ಎಂ) ಬಿಟ್ಟು ಉಳಿದ ಬಹುತೇಕ ಪಕ್ಷಗಳು ದೆಹಲಿಗೆ ಹೋಗಿಬಂದವು.

ಈ ಪ್ರಶ್ನೆಯನ್ನು ತಾಳ್ಮೆಯಿಂದ ಎದುರಿಸಬೇಕಿದೆ. ನಮ್ಮಪಾಲಿನ ನೀರನ್ನು, ಅದರ ಹಕ್ಕನ್ನು ಸಮರ್ಥಿಸಿಕೊಳ್ಳಬೇಕಿದೆ, ನಿಜ. ಮತ್ತು ನೀರಿನ ಬಳಕೆಗೆ ಅನೇಕ ವರುಷಗಳಲ್ಲಿ ನಿರ್ಲಕ್ಷಿಸುತ್ತಾ ಬಂದ ಅಗತ್ಯವಾದ ಯೋಜನೆಗಳ ಅನುಷ್ಠಾನ ಆಗಬೇಕಿದೆ, ಹಣವಿರಿಸಬೇಕಿದೆ. ಮುಖ್ಯ ಪ್ರಶ್ನೆಯೆಂದರೆ ಕೃಷ್ಣಾ ನೀರಿನ ಹಂಚಿಕೆ ಕುರಿತಾಗಿ ನ್ಯಾಯಮಂಡಳಿ ತೀರ್ಪು ಹೊರಬರಬೇಕಿದೆ. ಸರ್ವಪಕ್ಷಗಳು - ಸರ್ಕಾರದ ನಿಯೋಗ ಹೋಗಿ ಬರುವುದರಿಂದ ಅದರ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ಎಚ್ಚರಿಕೆ ಇರಬೇಕಿದೆ. ಇದನ್ನು ಸರ್ಕಾರದ ವಕೀಲರೂ ಹೇಳಿದ್ದರು. ಸಿಪಿಐ(ಎಂ) ಸಹ ದೃಢ ನಿಲುವು ತಳೆದು ನಿಯೋಗ ಹೋಗುವುದು ಬೇಡ, ಎಂದಿತ್ತು. ಮತ್ತು ನಿಯೋಗದಲ್ಲಿ ಭಾಗವಹಿಸಲಿಲ್ಲ.

ಇನ್ನೊಂದೆಡೆ ಕೃಷ್ಣ ಕಣಿವೆಯ 'ಬಿ' ಸ್ಕೀಮಿನ ನೀರು ಹಂಚಿಕೆಗಾಗಿ ರಚಿತವಾಗಿರುವ ಪ್ರಾಧಿಕಾರದ ಮುಂದೆ ಸಹ ಕರ್ನಾಟಕವು ಅರ್ಜಿ ಸಲ್ಲಿಸಿತ್ತು. ಇದನ್ನು ಪರಿಗಣಿಸಿರುವ ಪ್ರಾಧಿಕಾರವು ಆಂಧ್ರ ಹಾಗೂ ಕರ್ನಾಟಕ ಸರ್ಕಾರಗಳಿಗೆ ನೋಟಿಸ್ ನೀಡಿದೆ. ಎರಡೂ ರಾಜ್ಯಗಳ ಜನರ-ಜೀವನದ ನಡುವಿನ ಸಂಬಂಧಗಳಾಗಿದ್ದು ಪರಸ್ಪರ ಸಮಾಲೋಚನೆ-ಚರ್ಚೆಗಳಿಂದಲೂ ಸಹ ಈ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಮುಂದಾಗಬೇಕಿದೆ. ಕೇಂದ್ರದ ಪಾತ್ರವೂ ಮುಖ್ಯವಿದೆ. ಈಗ ಸಚಿವಸಂಪುಟ ನಿಯೋಗವೂ ಪ್ರಧಾನಿ ಬಳಿ ಹೋಗಿದೆ. ಅದೇನಿದ್ದರೂ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ನಿಟ್ಟಿನ ಹೆಜ್ಜೆ ಅಗತ್ಯವಿದೆ.

ಜರ್ಮನಿ ಹಿಟ್ಲರನ ಫ್ಯಾಸಿಸ್ಟ್ ಆಕ್ರಮಣವನ್ನು ಸೋವಿಯತ್ ಕೆಂಪುಸೈನ್ಯ ಪುಡಿಗುಟ್ಟಿದ 60ನೇ ವಾರ್ಷಿಕೋತ್ಸವವನ್ನು ರಶಿಯಾದಲ್ಲಿ ಆಚರಿಸಲಾಯಿತು. ಜಗತ್ತಿನ ಗಣ್ಯಾತಿಗಣ್ಯರು ಭಾಗವಹಿಸಿದ್ದ ಈ ಸರ್ಕಾರಿ ಸಮಾರಂಭದಲ್ಲಿ ಜನತೆಗೆ ಪಾತ್ರವಾಗಲೀ, ಅವಕಾಶವೂ ಬರಲಿ ಇರದೇ ನಿರ್ಬಂಧದ ಉತ್ಸವವಾಗಿತ್ತು. ಫ್ಯಾಸಿಸಂ ತಲೆ ಎತ್ತದಂತೆ ನೋಡಿಕೊಳ್ಳಬೇಕು ಎಂಬುದು ಹಲವು ನಾಯಕರ ಬಾಯ್ಮಾತು ಅಷ್ಟೇ. ಆದರೆ ಇದಕ್ಕೆ ಭಿನ್ನವಾಗಿ ಜನತೆಯ ಉತ್ಸವವೂ ಜರುಗಿತು. ಇದರ ತುಲನಾತ್ಮಕ ಚಿತ್ರಣ ನೀಡುತ್ತಲೇ, ಜಗತ್ತಿನ ಹಲವು ದೇಶಗಳು ಜನತೆಯನ್ನು ವಿಮೋಚನೆಗೊಳಿಸಿ, ಪ್ರಜಾಪ್ರಭುತ್ವ-ಸಮಾಜವಾದದ ಬೆಳವಣಿಗೆ ಪ್ರಮುಖ ಕೊಡುಗೆ ನೀಡಿದ, ಪ್ರಭಾವಿಸಿದ ಐತಿಹಾಸಿಕ ವಾಸ್ತವಗಳನ್ನು ಪರಿಚಯಿಸಿದ್ದಾರೆ ಶರತ್‌ಚಂದ್ರರವರು.

ಫ್ಯಾಸಿಸಂ - ವಿರೋಧಿ ವಿಜಯದ 60ನೇ ವಾರ್ಷಿಕೋತ್ಸವ

ಮಾಸ್ಕೋದಲ್ಲಿ ಕೆಂಪು ಉತ್ಸವದ ಸಂಭ್ರಮ

ಫ್ಯಾಸಿಸಂ - ವಿರೋಧಿ ವಿಜಯದ 60ನೇ ವಾರ್ಷಿಕೋತ್ಸವವನ್ನು ಮಾಸ್ಕೋದಲ್ಲಿ ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಬಹಳ ದಿನಗಳ ನಂತರ ಮಾಸ್ಕೋದ ಕೆಂಪು ಚೌಕ ಕೆಂಪು ಬಣ್ಣ ಹೊದ್ದು ಸಂಭ್ರಮದ ಉತ್ಸವ ಆಚರಿಸುತ್ತಿತ್ತು. ಬಹಳ ದಿನಗಳ ನಂತರ ಲೆನಿನ್, ಸ್ಟಾಲಿನರ ಭಾರಿ ದೊಡ್ಡ ಗಾತ್ರದ ಭಾವಚಿತ್ರಗಳು ಕಂಡುಬಂದವು - ಉತ್ಸವದಲ್ಲಿ ಉತ್ಸವದ ಮುಖ್ಯ ಅಧಿಕೃತ ಪರೆಡ್‌ನಲ್ಲಿ ಕೆಂಪು ಧ್ವಜಗಳನ್ನು ಸೋವಿಯತ್ ಕೆಂಪು ಸೈನ್ಯದ ಕೆಂಪು ಸಮವಸ್ತ್ರ ಧರಿಸಿದ್ದ ಸೈನಿಕರು ಹಿಡಿದಿದ್ದರು.

ಮಾಸ್ಕೋದ ಉತ್ಸವ ಫ್ಯಾಸಿಸಂ-ವಿರೋಧಿ ವಿಜಯದ 60ನೇ ವಾರ್ಷಿಕೋತ್ಸವದ ವಿಶ್ವಾದ್ಯಂತ ಆಚರಣೆಯ ಪ್ರಮುಖ ಅಧಿಕೃತ ಅಂತರ್‍ರಾಷ್ಟ್ರೀಯ ಮಟ್ಟದ ಉತ್ಸವವಾಗಿತ್ತು. ಮಾಸ್ಕೋದಲ್ಲಿ 50 ದೇಶಗಳ ಪ್ರಮುಖರು (ಅಧ್ಯಕ್ಷರು, ಪ್ರಧಾನಿ ಇತ್ಯಾದಿ) ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಅಮೆರಿಕದ ಅಧ್ಯಕ್ಷ ಬುಶ್, ಚೀನಿ ಅಧ್ಯಕ್ಷ ಹೂ ಚಿಂತಾವೊ, ಭಾರತದ ಪ್ರಧಾನಿ ಮನಮೋಹನ ಸಿಂಗ್, ಜಪಾನಿ ಪ್ರಧಾನಿ, ಯುರೋಪಿಯನ್ ದೇಶಗಳ ಪ್ರಮುಖರು ಭಾಗವಹಿಸಿದ್ದರು. ಫ್ಯಾಸಿಸಂ ಪುನಃ ತಲೆ ಎತ್ತದಂತೆ, ಇನ್ನೊಂದು ಇಂತಹ ಮಹಾಯುದ್ಧ ಆಗದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ-ಎಂದು ಹಲವು ನಾಯಕರು ಬಾಯ್ಮಾತಿನಲ್ಲಾದರೂ ಹೇಳಿದರು.

ಜನತೆಗಿರಲಿಲ್ಲ ಸ್ಥಾನ

ಮಾಸ್ಕೋದ ಮುಖ್ಯ ಅಧಿಕೃತ ಸಮಾರಂಭ ವೈಭವಯುತ ಮತ್ತು ಸಂಭ್ರಮದಿಂದ ಕೂಡಿದ್ದರೂ, ಅದು ಹೆಚ್ಚಾಗಿ ಪುಟಿನ್ ನಾಯಕತ್ವದ ಈಗಿನ ರಶ್ಯನ್ ಸರ್ಕಾರದ 'ಉತ್ಸವ' ಮಾತ್ರ ಆಗಿತ್ತು. ರಶ್ಯ ಈಗಲೂ ಪ್ರಧಾನ ಶಕ್ತಿ (ಹಿಂದಿನ ಸೋವಿಯತ್ ಒಕ್ಕೂಟದ ಪಾತ್ರ, ಶಕ್ತಿ ಆಧಾರದ ಮೇಲೆ) ಎಂದು ತೋರಿಸಿಕೊಳ್ಳುವುದೇ ಅದರ ಮುಖ್ಯ ಉದ್ದೇಶವಾಗಿತ್ತು. ಇದರಲ್ಲಿ ಅಪಾರ ತ್ಯಾಗ ಮಾಡಿದ, ಅವುಡುಗಚ್ಚಿ ಹೋರಾಡಿದ ಸಾಮಾನ್ಯ ಜನತೆಗೆ ಸ್ಥಾನವಿರಲಿಲ್ಲ.

ನಿಷಿದ್ಧ ಉತ್ಸವ?

ಮಾಸ್ಕೊ ಅಭೂತಪೂರ್ವ ಭದ್ರತಾ ಕ್ರಮಗಳನ್ನು ಕೈಗೊಂಡಿತ್ತು. 50 ದೇಶಗಳ ಪ್ರಮುಖರ ಭದ್ರತೆ ದೃಷ್ಟಿಯಿಂದ. ಚೆಚೆನ್ಯಾ ಪ್ರತ್ಯೇಕವಾದಿಗಳು ಭಯೋತ್ಪಾದಕ ಕೃತ್ಯಗಳನ್ನು ಎಸಗಬಹುದು ಎಂಬ ಭಯ ಬೇರೆ. ಅಧಿಕೃತ ಸಮಾರಂಭ ನಡೆಯುವ ಮಾಸ್ಕೋದ ಕೇಂದ್ರ ಪ್ರದೇಶಗಳಿಗೆ ಮಾಸ್ಕೋದ ಜನತೆಗೆ 'ಪ್ರವೇಶವಿಲ್ಲ' ಬೋರ್ಡು ಹಾಕಿತ್ತು. ವಾಹನ ಮತ್ತು ಪಾದಚಾರಿಗಳು ಸಂಚಾರದ ಮೇಲೂ ತೀವ್ರ ನಿರ್ಬಂಧ ಹೇರಲಾಗಿತ್ತು. ಅಧಿಕೃತ ಸಮಾರಂಭದಲ್ಲಿ ಪಾಲ್ಗೊಳ್ಳಲು 'ಭದ್ರತಾ ಅನುಮತಿ' ಹೊಂದಿದ್ದ ಕಾರ್ಯಕರ್ತರು, ಆಹ್ವಾನಿತರು ಬಿಟ್ಟರೆ ಉಳಿದವರೆಲ್ಲಾ ಮಾಸ್ಕೊ ನಿಷಿದ್ಧ ಪ್ರದೇಶವಾಗಿತ್ತು. ಸಮಾರಂಭಕ್ಕೆ 'ಪ್ರವೇಶ ಪತ್ರ'ವಿಲ್ಲದೆ ಹೋಗುವಂತಿರಲಿಲ್ಲ. ಸ್ವಲ್ಪ ಮಟ್ಟಿಗೆ 'ಭದ್ರತಾ ಕ್ರಮ'ವಾಗಿ ಇವೆಲ್ಲಾ ಅನಿವಾರ್ಯ ಎನ್ನಬಹುದಾದರೂ, ಪುಟಿನ್ ಆಡಳಿತ ಸಮಾರಂಭದಲ್ಲಿ ಜನತೆಗೆ ಏನೇನೂ ಪಾತ್ರವಿಲ್ಲವೇನೋ ಎಂಬಂತೆ ವರ್ತಿಸಿದ್ದ ಹಲವು ಮಾಸ್ಕೋ ನಾಗರಿಕರಿಗೆ ದೂರದಿಂದ ಸ್ವಯಂಸ್ಫೂರ್ತಿಯಾಗಿ ಬಂದಿದ್ದ ಹಲವು ಉತ್ಸಾಹಿಗಳಿಗೆ ನಿರಾಶೆತಂದಿತ್ತು.

ಜರುಗಿತು ಜನತಾ ಉತ್ಸವ

ಅನಧಿಕೃತವಾದರೂ, ನಿಜವಾದ ಜನತಾ ಉತ್ಸವ ಮಾಸ್ಕೋದ ಪಶ್ಚಿಮ ದ್ವಾರದ ಬಳಿ ಇರುವ ಸಣ್ಣ ಗುಡ್ಡವೊಂದರಲ್ಲಿ 'ಪೊಕ್ಲೋನ್ಯಾ ಗೋರಾ'ದ ಬಳಿ ನಡೆಯಿತು. ಇದು ಎರಡನೇ ಮಹಾಯುದ್ಧದ ಕಾಲದಲ್ಲಿ ಸೋವಿಯತ್ ಸೈನ್ಯದ ಭೂಗತ ಮುಖ್ಯ ಕಛೇರಿ ಇದ್ದ ಸ್ಥಳ. ಸೋವಿಯತ್ ಒಕ್ಕೂಟದಲ್ಲಿ 'ಮಹಾನ್ ದೇಶಪ್ರೇಮಿ ಯುದ್ಧ' ಎಂದು ಹೆಸರಾದ ಯುದ್ಧದ ಉದ್ದಕ್ಕೂ ಚಾರಿತ್ರಿಕ ಮಿಲಿಟರಿ ನಿರ್ಧಾರಗಳನ್ನು ತೆಗೆದುಕೊಂಡ ಸ್ಥಳ ಇದು. ಯುದ್ಧದ ನಂತರ ಇಲ್ಲಿ ಒಂದು ಸ್ಮಾರಕ ಫಲಕ ಮತ್ತು ಮ್ಯೂಸಿಯಂ ಸ್ಥಾಪಿಸಲಾಗಿದೆ. ಈ ಸ್ಮಾರಕ ಮತ್ತು ಮ್ಯೂಸಿಯಂಗೆ ಯುದ್ಧದಲ್ಲಿ ನೇರವಾಗಿ ಭಾಗವಹಿಸಿದ, ಕಷ್ಟ-ನಷ್ಟಕ್ಕೀಡಾದ ಸೈನಿಕರು, ನಾಗರಿಕರು ಹಣ-ಸ್ಮಾರಕ ವಸ್ತುಗಳನ್ನು ಕಾಣಿಕೆ ನೀಡಿದ್ದರು. ಸೋವಿಯತ್ ಒಕ್ಕೂಟ ಇದ್ದಾಗಲೂ, ಈಗಲೂ ಜನತೆಗೆ ಇದು ಭಾವನಾತ್ಮಕ ಸಂಬಂಧವಿರುವ ಮಹತ್ವದ ಪವಿತ್ರ ಸ್ಥಳವಾಗಿತ್ತು. ಪ್ರತಿವರ್ಷ ಮೇ 19 ರಂದು 'ಅಧಿಕೃತ' ಉತ್ಸವದಲ್ಲಿ ಪಾಲ್ಗೊಳ್ಳುವುದರಿಂದ ವಂಚಿತರಾದ ಎಲ್ಲರೂ ದೊಡ್ಡ ಪ್ರಮಾಣದಲ್ಲಿ ಸೇರಿದ್ದರು. ಮುಖ್ಯವಾಗಿ ಮಾಜಿ ಯೋಧರು ದೊಡ್ಡ ಪ್ರಮಾಣದಲ್ಲಿ ಸೇರಿದ್ದರು. ಇಲ್ಲಿ ಸ್ವಾಭಾವಿಕವಾಗಿ ಈ ವಿಜಯದ ಮುಖ್ಯ ರೂವಾರಿಯಾದ ಸ್ಟಾಲಿನ್ ಭಾವಚಿತ್ರ ಎಲ್ಲೆಲ್ಲೂ.

ಯುರೋಪ್‌ನ್ನು ಯಾರು ವಿಮೋಚನೆ ಮಾಡಿದ್ದು?

ಯುರೋಪು ಹಿಟ್ಲರ್ - ಮುಸಲೋನಿ ಫ್ಯಾಸಿಸಂನ ಬೂಟುಗಾಲಡಿ ನರಳುತ್ತಿದ್ದಾಗ, ಅದರ ವಿರುದ್ಧ ಹೋರಾಡಿ ವಿಮೋಚನೆ ಮಾಡಿದವರು ಯಾರು? ಇದು ಆಗಾಗ ಏಳುತ್ತಿರುತ್ತದೆ. ಪಾಶ್ಚಿಮಾತ್ಯ ಇತಿಹಾಸಕಾರರು, ಸಾಮ್ರಾಜ್ಯಶಾಹಿ ಬಾಲಬಡುಕರು, ಈ ವಿಮೋಚನೆಯಲ್ಲಿ ಸೋವಿಯತ್ ಒಕ್ಕೂಟದ ಸೈನಿಕರ-ನಾಗರಿಕರ ಅಪ್ರತಿಮ ತ್ಯಾಗ - ಬಲಿದಾನದ ಪ್ರತಿರೋಧ-ಹೋರಾಟವನ್ನು ಮತ್ತು ಅದಕ್ಕೆ ಸ್ಟಾಲಿನ್‌ರ ನಾಯಕತ್ವದ ಬಗ್ಗೆ

ಪುಟ 10 ಕ್ಕೆ

ಪುಟಿನ್ ನಾಯಕತ್ವದ ಈಗಿನ ರಶ್ಯನ್ ಸರ್ಕಾರದ 'ಉತ್ಸವ' ಮಾತ್ರ ಆಗಿತ್ತು. ರಶ್ಯ ಈಗಲೂ ಪ್ರಧಾನ ಶಕ್ತಿ (ಹಿಂದಿನ ಸೋವಿಯತ್ ಒಕ್ಕೂಟದ ಪಾತ್ರ, ಶಕ್ತಿ ಆಧಾರದ ಮೇಲೆ) ಎಂದು ತೋರಿಸಿಕೊಳ್ಳುವುದೇ ಅದರ ಮುಖ್ಯ ಉದ್ದೇಶವಾಗಿತ್ತು. ಇದರಲ್ಲಿ ಅಪಾರ ತ್ಯಾಗ ಮಾಡಿದ, ಅವುಡುಗಚ್ಚಿ ಹೋರಾಡಿದ ಸಾಮಾನ್ಯ ಜನತೆಗೆ ಸ್ಥಾನವಿರಲಿಲ್ಲ.



'ಯುರೋಪನ್ನು ವಿಮೋಚನೆ ಮಾಡಿದ್ದು ಸೋವಿಯತ್ ಕೆಂಪು ಸೈನ್ಯ'

ಫ್ಯಾಸಿಸಂನ್ನು ಸೋಲಿಸಿ ಯುರೋಪನ್ನು ವಿಮೋಚನೆ ಮಾಡುವಲ್ಲಿ ಸೋವಿಯತ್ ಒಕ್ಕೂಟದ ಪಾತ್ರದ ಬಗ್ಗೆ ಹಲವು ನಾಯಕರು ಮುಕ್ತಕಂಠದಿಂದ ಹೊಗಳಿದ್ದಾರೆ. ಇಂತಹ ಹೇಳಿಕೆಗಳಲ್ಲಿ ಕೆಲವು ಯುರೋಪಿನ ವಿಮೋಚನೆ ಮಾಡಿದ್ದು ಸೋವಿಯತ್ ಕೆಂಪು ಸೈನ್ಯ. ಬಾಕ್ಸ್‌ನಲ್ಲಿ ಇದೆ.

■ "ಫ್ರೆಂಚರಿಗೆ ಸೋವಿಯತ್ ರಶ್ಯ ಏನು ಮಾಡಿದೆ ಎಂಬುದು ಗೊತ್ತು. ಫ್ರಾನ್ಸ್‌ನ ವಿಮೋಚನೆಯಲ್ಲಿ ಮುಖ್ಯ ಪಾತ್ರವಹಿಸಿದ್ದು ಸೋವಿಯತ್ ರಶ್ಯಾ ಎಂದು ಫ್ರೆಂಚರಿಗೆ ಗೊತ್ತು"

- 'ಸ್ವತಂತ್ರ ಫ್ರಾನ್ಸ್' ನ ನಾಯಕ **ಚಾರ್ಲ್ಸ್ ಡಿ ಗಾಲೆ**(ಡಿಸೆಂಬರ್ 1944)

★

■ "ಬಲಾಢ್ಯ ಸೋವಿಯತ್ ಒಕ್ಕೂಟ ನಾಗರಿಕತೆ ಮತ್ತು ಸ್ವಾತಂತ್ರ್ಯ ಎತ್ತಿ ಹಿಡಿಯುವಲ್ಲಿ ಮಾಡಿದ ಮಹೋತ್ತರ ಕೊಡುಗೆಯನ್ನು ನಾವು ಮೆಚ್ಚಿದ್ದೇವೆ"

- ಹ್ಯಾರಿ ಟ್ರುಮನ್, ಅಮೆರಿಕ ಅಧ್ಯಕ್ಷ (ಮೇ 1945)

★

■ "ಈ ಮಹಾನ್ ವಿಜಯವನ್ನು ಕಣ್ಣಾರೆ ನೋಡಿದ ಈ ಪೀಳಿಗೆಯವರು ಮಾತ್ರವಲ್ಲ, ಮುಂಬರುವ ಪೀಳಿಗೆಗಳು ಸೋವಿಯತ್ ಕೆಂಪು ಸೈನ್ಯಕ್ಕೆ ಕೃತಜ್ಞತಾ ಭಾವದಿಂದ ಅದನ್ನು ಸ್ಮರಿಸುತ್ತಾರೆ"

- ವಿನ್ಸಂಟ್ ಚರ್ಚಿಲ್, ಬ್ರಿಟನ್ ಪ್ರಧಾನಿ(ಫೆಬ್ರವರಿ 1945)

★

■ "(ಸೋವಿಯತ್) ಕೆಂಪು ಸೈನ್ಯ ಚೀನಿ ಜನತೆಗೆ ಆಕ್ರಮಣಕಾರರನ್ನು ಹೊರದಬ್ಬುವುದರಲ್ಲಿ ನೆರವಾಯಿತು. ಇಂತಹ ಘಟನೆ ಹಿಂದೆಂದೂ ಚೀನಾದ ಚರಿತ್ರೆಯಲ್ಲಿ ಆಗಿಲ್ಲ. ಈ ಘಟನೆಯ ಮಹತ್ವ ಅಮೂಲ್ಯವಾದದ್ದು"

- ಮಾವೋ ತ್ಸೆ ತುಂಗ್

★

■ "ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಒಕ್ಕೂಟದ ಮಹಾನ್ ವಿಜಯ, ಜಪಾನನ್ನು ಸೋವಿಯತ್ ಕೆಂಪು ಸೈನ್ಯ ಸೋಲಿಸಿದ್ದರಿಂದ ನಮ್ಮ ದೇಶದ ವಿಮೋಚನೆ ಸಾಧ್ಯ ವಾಯಿತು. ಕೊರಿಯದ ಜನತೆ ಸತತ ವಸಾಹತುಶಾಹಿ ಅಧಿಪತ್ಯದಿಂದ ಬಿಡಿಸಿಕೊಂಡು, ಹೊಸ ಸ್ವಾತಂತ್ರ್ಯ ಜೀವನ ಆರಂಭಿಸುವುದು ಸಾಧ್ಯವಾಯಿತು..."

- ಕಿಮ್ -ಇಲ್-ಸಂಗ್, ಕೊರಿಯಾದ ನಾಯಕ

★


■ "ರೈಸ್ಟಾಗ್(ಜರ್ಮನಿ ಪಾರ್ಲಿಮೆಂಟ್) ಮೇಲೆ ಹಾರಿದ ವಿಜಯ ಪತಾಕೆ ಗೆದ್ದವರಿಗೆ ಮಾತ್ರವಲ್ಲ ಜರ್ಮನಿಗೂ ಸಂತೋಷದ ಗಳಿಗೆ. ನಾಜಿವಾದ ಎಂಬ ಹೆಸರಿನ ಭೀಕರ, ಮತಿಗೆಟ್ಟ ಸೈತಾನ ಸತ್ತ ಗಳಿಗೆ ಇದು. ಜರ್ಮನಿಗೂ ಸಂತೋಷದ ಗಳಿಗೆ. ಹಿಟ್ಲರನ ದೇಶ ಎಂಬ ಕಳಂಕದಿಂದ ಜರ್ಮನ್ ಮುಕ್ತವಾಯಿತು...."

- ಥಾಮಸ್ ವಗಾನ್, ಪ್ರಸಿದ್ಧ ಜರ್ಮನ್ ಲೇಖಕ.

ಅಂದಿನ ಬ್ರಿಟನ್ ಪ್ರಧಾನಿ ಚರ್ಚಿಲ್, ಅಮೆರಿಕಾ ಅಧ್ಯಕ್ಷ ಫ್ರಾಂಕಿನ್ ರೋಸಲ್ಟ್ ಮತ್ತು ಸೋವಿಯತ್ ಅಧ್ಯಕ್ಷ ಸ್ಟಾಲಿನ್



ಹಸಿವು ಹೆಚ್ಚಿಸುವ ಹಣದುಬ್ಬರ



ಕುರುಡು ಕಾಂಚಾಣ

ಜಿ.ಎಸ್.ಮಣಿ

ಹಣದುಬ್ಬರ ಹೆಚ್ಚುತ್ತಲೇ ಇದೆ. ವಿವಿಧ ಸರಕುಗಳ ಬೆಲೆಗಳು ಹೆಚ್ಚುವುದರಿಂದ ಇದು ಆಗುತ್ತಿದೆ. ಕಳೆದೊಂದು ವರ್ಷದಲ್ಲಿನ ಹಣದುಬ್ಬರ ಹೆಚ್ಚಳಕ್ಕೆ ಮುಖ್ಯ ಕಾರಣ ಆಹಾರ ಪದಾರ್ಥಗಳ



ಬೆಲೆ ಹೆಚ್ಚುತ್ತಿರುವುದು. ಇಂಧನ ವಿದ್ಯುತ್‌ಗಳ ಬೆಲೆ ಹೆಚ್ಚುತ್ತಿರುವುದರಿಂದಲೂ ಹಣದುಬ್ಬರ ಹೆಚ್ಚುತ್ತಿದೆ ಎಂಬುದು ನಿಜ. ಆದರೆ ದೊಡ್ಡ ಪಾಲು ಆಹಾರ ಪದಾರ್ಥಗಳದ್ದಂತೆ.

ಯುಪಿಎ ನೇತೃತ್ವ ವಹಿಸಿರುವ ಕಾಂಗ್ರೆಸ್ಸು ಯಾರ ಪರವಾದ ನೀತಿಗಳನ್ನು ನಿಜದಲ್ಲಿ ಅನುಸರಿಸುತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಜನರ ಪರವಾಗಿರುವ ಯಾವುದೇ ಸರ್ಕಾರ ಬಹುತೇಕ ಜನರ ಹಿತಾಸಕ್ತಿಗಳನ್ನು ಕಾಯಬೇಕು. ಆಹಾರ ಪದಾರ್ಥಗಳು ಎಲ್ಲರಿಗೂ ಬೇಕು. ಈ ಪದಾರ್ಥಗಳ ಬೆಲೆ ಇಳಿದರೆ ಜನ ಸಾಮಾನ್ಯರಿಗೆ ಜೀವನ ಸಹನೀಯವಾಗುತ್ತದೆ. ಶ್ರೀಮಂತರಿಗೂ ಕಡಿಮೆ ಬೆಲೆಯಲ್ಲಿ ಆಹಾರ ಪದಾರ್ಥಗಳು ದೊರೆತರೆ ತಪ್ಪೇನಿಲ್ಲ. ಜನಪರವಾಗಿ ಕೆಲಸ ಮಾಡುವ ಸರ್ಕಾರ ಮಾತ್ರ ಇದನ್ನು ಅರ್ಥ ಮಾಡಿಕೊಳ್ಳಬಲ್ಲದು. ದೊಡ್ಡ ಬಂಡವಾಳಿಗ ಮತ್ತು ಜಮೀನುದಾರರ ಹಿತಾಸಕ್ತಿ ಕಾಯುವ ಕಾಂಗ್ರೆಸ್ ಪಕ್ಷ ಇಂತಹ ವಿಚಾರಗಳನ್ನು ಮಾಡುವ ಸಾಧ್ಯತೆಳಿಲ್ಲ.

ಜಾಗತಿಕ ಮಟ್ಟದಲ್ಲಿ ತೈಲದ ಬೆಲೆ ಏರುತ್ತಲೇ ಇರುವುದಿಂದ ಮತ್ತೆ ನಮ್ಮಲ್ಲಿನ ತೈಲ ಬೆಲೆಗಳನ್ನು ಏರಿಸುವ ವಿಚಾರವನ್ನು ಕಾಂಗ್ರೆಸ್ ಮಾಡುತ್ತಿದೆ.



ತೈಲದ ಮೇಲೆ ಅಬ್ಕಾರಿ ಸುಂಕ ಮತ್ತು ಇತರ ಶುಲ್ಕಗಳನ್ನು ಸರ್ಕಾರ ವಸೂಲು ಮಾಡುತ್ತದೆ. ಈ ಶುಲ್ಕಗಳನ್ನು ಕೈಬಿಟ್ಟರೆ ತೈಲಗಳ ಬೆಲೆ ಏರಿಸಲೇಬೇಕಾದ ಪ್ರಮೇಯ ಬರುವುದಿಲ್ಲ. ಆದರೆ ಕಾಂಗ್ರೆಸ್ ಇದಕ್ಕೆ ತಯಾರಿಲ್ಲ.

ಎಡಪಕ್ಷಗಳು ಅದರಲ್ಲೂ ಸಿಪಿಐ(ಎಂ) ತೈಲ ಬೆಲೆ ಹೆಚ್ಚಳವನ್ನು ವಿರೋಧಿಸುತ್ತಿದೆ. ಇದು ಜನಸಾಮಾನ್ಯರ ಬದುಕಿನ ಮೇಲಿನ ದಾಳಿಯಾಗುತ್ತದೆ. ಇಂತಹ ದಾಳಿಯನ್ನು ಎಡ ಪಕ್ಷಗಳು ವಿರೋಧಿಸುತ್ತಿವೆ.

ಅಂದ ಹಾಗೇ ತೈಲ ಬೆಲೆ ಹೆಚ್ಚಳವೆಂದರೆ ಮತ್ತೆ ಹಣದುಬ್ಬರದ ಹೆಚ್ಚಳ ಮತ್ತು ಹಲವಾರು ವಸ್ತುಗಳ ಬೆಲೆಗಳಲ್ಲಿ ಹೆಚ್ಚಳ. ಹಸಿವನ್ನು ಇದು ಹೆಚ್ಚಿಸುತ್ತದೆ.

ರಸಗೊಬ್ಬರ ಹಗರಣ : ಬರೀ 1 ಕೋಟಿ ವಸೂಲಿ

1995ರಲ್ಲಿ ನರಸಿಂಹ ರಾಯರ ಸರ್ಕಾರ ರಸಗೊಬ್ಬರ ಆಮದು ಮಾಡಲು ಹೋಗಿ ದೊಡ್ಡ ಹಗರಣವಾಗಿತ್ತು. ಟರ್ಕಿ ಮತ್ತು ನಮ್ಮ ದೇಶದ ನ್ಯಾಶನಲ್ ಫರ್ಟಿಲೈಸರ್ ಲಿಮಿಟೆಡ್‌ಗಳ ಈ ವ್ಯವಹಾರದ ಒಪ್ಪಂದ ಮಾಡಿಕೊಂಡಿದ್ದವು.

ಇಂತಹ ವ್ಯವಹಾರಗಳಲ್ಲಿ ಸಾಮಾನ್ಯವಾಗಿ ಲೆಟರ್ ಆಫ್ ಕ್ರೆಡಿಟ್ ನೀಡಿ ಆಮದು ಮಾಡಿಕೊಳ್ಳಲಾಗುತ್ತದೆ. ಸರಕು ಬಂದ ಮೇಲೆ ಹಣ ಪಾವತಿ ಮಾಡಲಾಗುತ್ತದೆ. ಆದರೆ ಈ ವ್ಯವಹಾರದಲ್ಲಿ ಕರ್ಸನ್ ಹಣ ಮೊದಲೇ ಪಾವತಿಯಾಗಬೇಕೆಂದಿತು. ಹಣ ಪಾವತಿ ಮಾಡಿದ ಮೇಲೆ ಕರ್ಸನ್ ಸರಬರಾಜು ಮಾಡಲೇ ಇಲ್ಲ. ಒಪ್ಪಂದದ ಅವಧಿಯನ್ನು ವಿಸ್ತರಿಸಲಾಯಿತು. ಆಗ ಕಳಪೆ ದರ್ಜೆಯ ರಸಗೊಬ್ಬರವನ್ನು ಕರ್ಸನ್ ಕಳುಹಿಸಿತು. ಇದನ್ನು ಎನ್.ಎಫ್.ಎಲ್. ತಿರಸ್ಕರಿಸಿತು. ಕರ್ಸನ್ ನಂತರ ಹಣವನ್ನು ಮರುಪಾವತಿ ಮಾಡಬೇಕಾಗಿತ್ತು. ಆದರೆ ಅದು ಮರು ಪಾವತಿ ಮಾಡಲೇ ಇಲ್ಲ. ಸುಮಾರು 250 ಕೋಟಿ ರೂಪಾಯಿಗಳ ಪಂಗನಾಮವನ್ನು ಸರ್ಕಾರದ ಖಜಾನೆಗೆ ಹಾಕಲಾಯಿತು.

ನಮ್ಮ ದೇಶದ ಅಂದಿನ ಆಡಳಿತ ಪಕ್ಷವಾದ ಕಾಂಗ್ರೆಸ್‌ನ ರಾಜಕಾರಣಿಗಳು ಇದರಲ್ಲಿ ಶಾಮೀಲಾಗಿದ್ದರು. ಆದ್ದರಿಂದಲೇ ದೇಶದ ಖಜಾನೆಗೆ ಇವರೆಲ್ಲ ಸೇರಿ ನಾಮ ಹಾಕಿದ್ದರು.

ಈ ಬಗ್ಗೆ ಸಂಸತ್ತಿನ ವಿಚಾರಣಾ ಸಮಿತಿಯನ್ನು ನೇಮಿಸಲಾಗಿತ್ತು.

ಭಾರತ ಸರ್ಕಾರದ ಅರ್ಜಿಯ ಮೇಲೆ ಅಂತರ್ರಾಷ್ಟ್ರೀಯ ಚೆಂಬರ್ ಆಫ್ ಕಾಮರ್ಸ್ ಕರ್ಸನ್ ಕಂಪನಿ ಹಣ ವಾಪಸ್ ನೀಡಬೇಕೆಂದು ನಿರ್ಣಯ ನೀಡಿತ್ತು. ಆದರೆ ಈ ನಿರ್ಣಯದ ನಂತರವೂ ಸರ್ಕಾರ ವಸೂಲು ಮಾಡಲು ಸಾಧ್ಯವಾದದ್ದು ಬರೀ ಒಂದು ಕೋಟಿ ರೂಪಾಯಿಗಳು ಮಾತ್ರ.

ಯಾರ ಹಣ ಯಾವ ಜಾತ್ರೆ?

...............ಮಾಸ್ಕೋದಲ್ಲಿ ಕೆಂಪು ಉತ್ಸವದ ಸಂಭ್ರಮ

ಪುಟ 9 ರಿಂದ

ಜಾಣಮೌನ ವಹಿಸುತ್ತಾರೆ. ಅದೇ ರೀತಿ ಹಿಟ್ಲರ್ ಮೇಲೆ ಭಾರಿ ದಾಳಿ ನಡೆಸಿದಾಗಲೂ, ಅದರ ವಿರುದ್ಧ ಯಾವುದೇ ಪ್ರತಿರೋಧ ಒಡ್ಡಲು ನಿರಾಕರಿಸಿದ ಆಂಗ್ಲೋ- ಅಮೆರಿಕನ್ ಸರ್ಕಾರಗಳ ಅವಮಾನಕಾರಿ, ಶರಣಾಗತಿ ನೀತಿಯನ್ನು ಮರೆಮಾಚುತ್ತಾರೆ. ನಾಝಿ ಹಿಟ್ಲರ್ - ಸಮಾಜವಾದಿ ಸೋವಿಯತ್ ಒಕ್ಕೂಟ ಇವರು ಹೋರಾಡಿ ಸಾಯಲಿ. ಈ ಹಣಾಹಣಿಯಲ್ಲಿ ಸೋವಿಯತ್ ಒಕ್ಕೂಟ ಸೋತರೆ ಒಳ್ಳೆಯದು. ಅಷ್ಟುಹೊತ್ತಿಗೆ ಹಿಟ್ಲರ್ ಹೋರಾಡಿ ಹಣ್ಣಾಗಿರುತ್ತಾರೆ. ಆಮೇಲೆ ಅವನನ್ನು ನೋಡಿಕೊಂಡರಾಯಿತು ಎಂಬುದು ಅವರ ನೀತಿಯಾಗಿತ್ತು. ಅಂದರೆ ಯುರೋಪಿನ ಜನರ ಸ್ವಾತಂತ್ರ್ಯ-ಪ್ರಜಾಪ್ರಭುತ್ವದ ನಾಶದ ಬಗ್ಗೆ ಕಿಂಚಿತ್ತೂ ಅವರಿಗೆ ಕಾಳಜಿ ಇರಲಿಲ್ಲ. ಮೂರು ವರ್ಷಗಳ ದಿಟ್ಟ ಹೋರಾಟದ ನಂತರ ಸೋವಿಯತ್ ಒಕ್ಕೂಟ ಗೆಲ್ಲುವ ಲಕ್ಷಣಗಳು ಕಂಡಾಗ ಮಾತ್ರ ಆಂಗ್ಲೋ-ಅಮೆರಿಕನ್ ಸರ್ಕಾರಗಳು ಮಹಾಯುದ್ಧದಲ್ಲಿ ಪ್ರವೇಶ ಮಾಡಲು ದೊಡ್ಡದಾಗಿ ಪ್ರಯತ್ನಿಸಿದವು. ಅಮೆರಿಕದ 'ಅಧಿಕೃತ' ಇತಿಹಾಸಕಾರರಂತೂ, ಅಮೆರಿಕನ್ ಸೈನ್ಯಗಳೇ ಯುರೋಪನ್ನು 'ವಿಮೋಚನೆ' ಗೊಳಿಸಿದ್ದು ಎಂದು ಹಸಿ-ಸುಳ್ಳು ಹೇಳುತ್ತಾರೆ. ಆ ಮೂರು ವರ್ಷಗಳ ಕಾಲ ಫ್ಯಾಸಿಸಂನ ವಿರುದ್ಧ ಅಂತರ್ರಾಷ್ಟ್ರೀಯ ಕೂಟ ರಚನೆ ಮಾಡಬೇಕು, ನಾಜಿ ಪಡೆಗಳ ವಿರುದ್ಧ ಪಶ್ಚಿಮದಲ್ಲಿ ಆಂಗ್ಲೋ-ಅಮೆರಿಕನ್ ಇನ್ನೊಂದು ರಣರಂಗ ತೆರೆಯಬೇಕು ಎಂಬ ಸ್ಟಾಲಿನ್ ನಾಯಕತ್ವದ ಸೋವಿಯತ್ ಒತ್ತಾಯಕ್ಕೆ 'ಹೂಂ ಹೂಂ' ಎನ್ನುತ್ತಲೇ ಮೋಸ ಮಾಡಿತ್ತು. ಆದರೆ ಯುರೋಪಿನ ಮತ್ತು ಜಗತ್ತಿನ ಜನತೆಗೆ, ಹಲವು ನಾಯಕರಿಗೆ ಸೋವಿಯತ್ ಪಾತ್ರದ ಬಗ್ಗೆ ಗೌರವವಿದೆ. ಕೃತಜ್ಞತಾ ಭಾವನೆ ಇದೆ. ಸೋವಿಯತ್ ಜನತೆಯ ಉಪಕಾರ ಇಂದಿಗೂ ಯುರೋಪ್ ಮತ್ತು ಇತರ ಜನತೆ ಸ್ಮರಿಸುತ್ತಾರೆ.

ಈಗ ಪುನಃ ಹೊಸ ರೀತಿಯ ಸಾಮ್ರಾಜ್ಯಶಾಹಿ ಅಪಪ್ರಚಾರ ಆರಂಭವಾಗಿದೆ. ನಾಜಿವಾದದ ವಿರುದ್ಧ ಹೋರಾಟದಲ್ಲಿ ವಿಜಯವನ್ನು 'ದುರುಪಯೋಗ' ಪಡಿಸಿ ಪೂರ್ವ ಯುರೋಪನ್ನು 'ವಶಪಡಿಸಿಕೊಂಡಿತು' ಎಂಬ ಈ ಆಪಾದನೆ ಬುಶ್‌ನಿಂದ. ಮಾಸ್ಕೋ ದಾರಿಯಲ್ಲಿ ಬಾಲ್ಟಿಕ್ ದೇಶಗಳಲ್ಲಿ ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ. ಪೂರ್ವಯುರೋಪಿನಲ್ಲಿ ಸಮಾಜವಾದಿ ವ್ಯವಸ್ಥೆಯ ಕುಸಿತ, ಎರಡನೇ ಮಹಾಯುದ್ಧ ಕಂಡ ಪೀಳಿಗೆ ಮಾಯವಾಗುತ್ತಿರುವ




ನಾಜಿ ಜರ್ಮನಿ ವಿರುದ್ಧದ ಯುದ್ಧದಲ್ಲಿ ಪಾಲ್ಗೊಂಡಿದ್ದ ಕೆಂಪು ಸೈನ್ಯದ ಸೈನಿಕರು ವಿಜಯೋತ್ಸವದಲ್ಲಿ ಪಾಲ್ಗೊಂಡಿರುವುದು.

ಹಿನ್ನೆಲೆಯಲ್ಲಿ ಈ 'ಹುಸಿ ಚರಿತ್ರೆ'ಯೇ 'ಚರಿತ್ರೆ'ಯಾಗುವ ಅಪಾಯವಿದೆ. ಹಿಟ್ಲರ್ ಪಡೆಗಳನ್ನು ಸೋವಿಯತ್ ಒಕ್ಕೂಟದ ಗಡಿಯಾಚೆಗೆ ಅಟ್ಟಿಸಿಕೊಂಡು ಬಂದ ಕೆಂಪು ಸೈನ್ಯ ಪೂರ್ವ ಯುರೋಪಿನ ದೇಶಗಳನ್ನು ಹಾದು ಹೋಗುತ್ತಿದ್ದಂತೆ, ಅಲ್ಲೆಲ್ಲ ಸಂಘಟಿತವಾಗಿದ್ದ ಭೂಗತ 'ಜನತಾ ವಿಮೋಚನಾ ಸೈನ್ಯ'ದ ಜತೆ ಸೇರಿ ಅಲ್ಲಿನ ಹಿಟ್ಲರ್-ಪ್ರಭುತ್ವವನ್ನು ನಾಶ ಮಾಡಿತು. ಆ ದೇಶದ ಜನತಾ ವಿಮೋಚನಾ ರಂಗಕ್ಕೆ ಅಧಿಕಾರ ವಹಿಸಿಕೊಟ್ಟಿತು. ಇಡೀ ಪೂರ್ವಯುರೋಪಿನ ದೇಶಗಳಲ್ಲಿ ಕಮ್ಯುನಿಸ್ಟ್ - ಎಡ-ಪ್ರಗತಿಪರ ಪಕ್ಷಗಳು ಬಿಟ್ಟರೆ ಉಳಿದೆಲ್ಲಾ ಬೂರ್ಜ್ವಾ- ಆಳುವ ವರ್ಗಗಳ ಪಕ್ಷಗಳು ಹಿಟ್ಲರ್‌ನಿಗೆ ಮಾರಿ ಕೊಂಡು ಬಿಟ್ಟಿದ್ದರು. ಆದ್ದರಿಂದ ಎಲ್ಲಾ ದೇಶಗಳಲ್ಲಿ ಹಿಟ್ಲರನ ನಾಜಿವಾದ ವಿರುದ್ಧ ಯಾವುದೇ ರಾಜಿ ಇಲ್ಲದೆ ಹೋರಾಡು ತ್ತಿದ್ದ ಕಮ್ಯುನಿಸ್ಟ್ ನಾಯಕತ್ವದ ವಿಮೋಚನಾ ರಂಗ ಇದ್ದ ಏಕಮಾತ್ರ ರಾಜಕೀಯ ಶಕ್ತಿಯಾಗಿತ್ತು. ಇಂತಹ ರಂಗ ಎರಡನೇ ಮಹಾಯುದ್ಧದ ನಂತರ ಅಧಿಕಾರ ವಹಿಸಿಕೊಂಡವು. ಇಂತಹ ರಂಗಗಳಿಗೆ ನಾಜಿಪರ ಶಕ್ತಿಗಳನ್ನು ನಿರ್ಣಾಯಕವಾಗಿ ಸೋಲಿಸಿ ನಾಶಮಾಡಲು ಸೋವಿಯತ್ ಕೆಂಪು ಸೈನ್ಯ ಸಹಾಯ ಮಾಡಿತು. ಆ ದೇಶದ ಜನತೆಗೆ ಸ್ವಾತಂತ್ರ್ಯ, ಆತ್ಮಾಭಿಮಾನ, ಪ್ರಜಾಪ್ರಭುತ್ವ ಮರಳಿಸುವುದರಲ್ಲಿ ನಿರ್ಣಾಯಕ ಸಹಾಯ ಮಾಡಿತು. ಯಾವುದೇ ರೀತಿಯಲ್ಲಿ ಆ ದೇಶಗಳು, ಜನತೆಯ ಸ್ವಾತಂತ್ರ್ಯ ಹರಣ ಮಾಡಲಿಲ್ಲ. ಆ ದೇಶಗಳ ಜನರ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಸ್ವಯಮಾಡಳಿತದ ಮೇಲೆ ದಾಳಿಯಲ್ಲಿ, ಹರಣದಲ್ಲಿ ಪರೋಕ್ಷವಾಗಿಯೂ ಶಾಮೀಲಾಗಿದ್ದವರು ಆಂಗ್ಲೋ-ಅಮೆರಿಕನ್ ಸರ್ಕಾರ ಮತ್ತು ಸಾಮ್ರಾಜ್ಯಶಾಹಿ ಎಂಬುದನ್ನು ಮರೆತುಬಿಡಬಾರದ ಸಂಗತಿ. ಯುರೋಪನ್ನು ವಿಮೋಚನೆ ಮಾಡಿದ್ದು ಸೋವಿಯತ್ ಒಕ್ಕೂಟ ಜನತೆ ಮತ್ತು ಕೆಂಪು ಸೈನ್ಯದ ನಿರ್ಣಾಯಕ ನಾಯಕತ್ವದಲ್ಲಿ ಅಲ್ಲಿನ ಎಡ-ಕಮ್ಯುನಿಸ್ಟ್ - ಪ್ರಗತಿಪರ ಸ್ವಾತಂತ್ರ್ಯ ಪ್ರೇಮಿ ಜನತೆ. ಆಂಗ್ಲೋ-ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಆ ಎಲ್ಲಾ ದೇಶಗಳ ಬೂರ್ಜ್ವಾ ಆಳುವವರ್ಗ ಕಿರು ಬೆರಳೆತ್ತಲಿಲ್ಲ. ಇಡೀ ಯುರೋಪಿನ ಸ್ವಾತಂತ್ರ್ಯ ಹರಣವಾಗುತ್ತಿದ್ದಾಗ. ಬದಲಾಗಿ ಹಿಟ್ಲರನ ಜತೆ ಶಾಮೀಲಾಗಿತ್ತು - ತಮ್ಮ ಕ್ಷುಲ್ಲಕ ವರ್ಗ ಹಿತಾಸಕ್ತಿಗಾಗಿ. ಇದು ಚಾರಿತ್ರಿಕ ಸತ್ಯ.

ಸ್ಟಾಲಿನ್ ಹೆಸರೆತ್ತದವರು

ಹಲವು ಅಂತರ್ರಾಷ್ಟ್ರೀಯ ನಾಯಕರು ಫ್ಯಾಸಿಸಂ ವಿರೋಧಿ ಹೋರಾಟದಲ್ಲಿ ಸೋವಿಯತ್ ಒಕ್ಕೂಟದ ಪಾತ್ರವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರಾದರೂ, ಕಾಮ್ರೇಡ್ ಸ್ಟಾಲಿನ್‌ರವರ ಚಾರಿತ್ರಿಕ ಪಾತ್ರ, ನಾಯಕತ್ವದ ಬಗ್ಗೆ ಹೇಳಲು ಹಿಂಜರಿದರು. ಸ್ವತಃ ಅಧ್ಯಕ್ಷ ಪುಟಿನ್‌ರೇ ಭಾಷಣದಲ್ಲಿ ಸ್ಟಾಲಿನ್ ಹೆಸರನ್ನು ಎತ್ತಲಿಲ್ಲ. ಅಧಿಕೃತ ಪರೇಡ್‌ನಲ್ಲಿ ಭಾಗವಹಿಸಿದ 2600 ಕೆಂಪು ಸೈನ್ಯದ ಮಾಜಿ ಯೋಧರು ಮಾತ್ರ ಲೆನಿನ್, ಸ್ಟಾಲಿನ್‌ರ ದೊಡ್ಡ ಭಾವಚಿತ್ರಗಳನ್ನು ಹಿಡಿದಿದ್ದರು.

ಪೆಟ್ರೋಲಿಯಂ ದರ ಹೆಚ್ಚಳ ಬೇಡ
ಸಿಪಿಐ(ಎಂ) ಆಗ್ರಹ



ದೇಶದ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಪೊಲಿಟ್‌ಬ್ಯೂರೋ ಚರ್ಚಿಸಿದ ಸಿಪಿಐ(ಎಂ)ನ ಪ್ರಮುಖ ವಿಶ್ಲೇಷಣೆ ಹಾಗೂ ನಿಲುವುಗಳು

ಜನಸಾಮಾನ್ಯರ ಮೇಲೆ ಹೊರೆ ಬೀಳುವುದನ್ನು ತಪ್ಪಿಸುವುದಕ್ಕಾಗಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಬಾರದೆಂದು ಸಿಪಿಐ(ಎಂ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಮೇ 14 ಮತ್ತು 15 ರಂದು ನವದೆಹಲಿಯಲ್ಲಿ ಸಭೆ ಸೇರಿದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಕೇಂದ್ರ ಬಜೆಟ್‌ನಲ್ಲಿ ಹೇರಿದ ಅಬಕಾರಿ ಸುಂಕದಿಂದಾಗಿ ಪೆಟ್ರೋಲ್ ಲೀಟರಿಗೆ ರೂ. 1.70 ಮತ್ತು ಡೀಸೆಲ್ ರೂ. 1.15 ರಷ್ಟು ದರ ಹೆಚ್ಚಳವಾಗಿದ್ದು ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಜೆಟ್‌ನಲ್ಲಿ ಈ ತೆರಿಗೆಯನ್ನು ಹೇರುವಾಗ, ಯಾವುದೇ ದರ ಹೆಚ್ಚಳವಾಗುವುದಿಲ್ಲವೆಂದು ಹಣಕಾಸು ಸಚಿವರು ಹೇಳಿದ್ದರು. ಆದರೆ ಇದು ಹುಸಿಯಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸಿದರೆ, ಎಲ್ಲಾ ವಿಭಾಗದ ಜನರ ಮೇಲೆ ತೀವ್ರ ಹೊಡೆತ ಬೀಳಲಿದ್ದು ಔಷದಿ, ತರಕಾರಿ, ಸಾಮಾನುಗಳ ಬೆಲೆ ಹೆಚ್ಚಳವಾಗಲಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಹೆಚ್ಚಳವಾಗುತ್ತಿರುವುದು ನಿಜ. ಆದರೆ ಅದರ ಹೊರೆಯನ್ನು ಜನರ ಮೇಲೆ ವರ್ಗಾಯಿಸದೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಬೇಕು. ಪೆಟ್ರೋಲಿಯಂ ಖಾತೆಯ ಸಚಿವರಿಗೆ ನೀಡಿದ ಮನವಿಯಲ್ಲಿ 4 ಪರಿಹಾರ ಸೂತ್ರಗಳನ್ನು ಸೂಚಿಸಲಾಗಿತ್ತು.

1. ಚಿಲ್ಲರೆ ದರ ಹೆಚ್ಚಳವಾಗದಂತೆ ಅಬಕಾರಿ ಸುಂಕವನ್ನು ಹಾಕುವುದು.

2. ರಸ್ತೆ ನಿರ್ಮಾಣ ಮಾಡುವ ಹೆಸರಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ಮೇಲೆ ಹೇರಿರುವ ಲೀಟರಿಗೆ 50 ಪೈಸೆ ಸೆಸ್‌ನ್ನು ವಾಪಾಸು ತೆಗೆದುಕೊಳ್ಳುವುದು. ಈಗಾಗಲೇ ಲೀಟರಿಗೆ ರೂ. 1.50 ಸೆಸ್ ಇದೆ ಎಂಬುದನ್ನು ಗಮನಿಸಬೇಕು.

3. ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವಾಗ ವಿಧಿಸುವ 'ಆಮದು ಸಮತೋಲನ'(Import Farity) ಸೂತ್ರದಿಂದಾಗಿ ತೈಲ ಶುದ್ಧೀಕರಿಸುವ ಖಾಸಗಿ ಕಂಪನಿಗಳಿಗೆ ಅನುಕೂಲವಾಗುತ್ತದೆ. ಅದನ್ನು ತಡೆಯಬೇಕು.

4. ಜಾಗತಿಕ ಮಟ್ಟದಲ್ಲಿ ಪೆಟ್ರೋಲ್ ಬೆಲೆಯ ಏರಿಳಿತವನ್ನು ಸರಿದೂಗಿಸಲು 'ಬೆಲೆ ನಿಯಂತ್ರಣ ನಿಧಿ'ಯನ್ನು ಸ್ಥಾಪಿಸಬೇಕು. ಭಾರತದಲ್ಲೇ ಉತ್ಪಾದಿಸಿದ ಪೆಟ್ರೋಲ್ ಉತ್ಪನ್ನಗಳ ಮೇಲೆ ವಿಧಿಸಿದ ತೆರಿಗೆಯಿಂದ ವರ್ಷಕ್ಕೆ 5400 ಕೋಟಿ ರೂ. ಸಂಗ್ರಹವಾಗುತ್ತಿದ್ದು, ಇದನ್ನು ಬೆಲೆ ನಿಯಂತ್ರಣ ನಿಧಿಗೆ ವರ್ಗಾಯಿಸಬೇಕು.

ಮೇಲೆ ಹೇಳಿದ ಅಂಶಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡಿದ್ದೇ ಆದಲ್ಲಿ ಪೆಟ್ರೋಲ್, ಡೀಸೆಲ್ ಚಿಲ್ಲರೆ ಮಾರಾಟದ ಬೆಲೆಯನ್ನು ಹೆಚ್ಚಿಸುವ ಪ್ರಮೇಯವೇ ಬರುವುದಿಲ್ಲ ಎಂದು ಸಿಪಿಐ(ಎಂ) ಒತ್ತಾಯಿಸಿದೆ. ಇದೇ ಸಂದರ್ಭದಲ್ಲಿ ಇನ್ನೂ ಹಲವಾರು ಪ್ರಸಕ್ತ ಪರಿಸ್ಥಿತಿಯ ಬಗ್ಗೆ ದೇಶದ, ಜನತೆಯ ಗಮನ ಸೆಳೆದಿದೆ.

ವಿದೇಶಾಂಗ ನೀತಿ

ಚೀನಾದ ಪ್ರಧಾನಿ ವೆನ್ ಜಿಯಾಬೊ ಮತ್ತು ಪಾಕಿಸ್ತಾನಿ ಅಧ್ಯಕ್ಷ ಮುಷರಫ್ ಅವರ ಭಾರತ ಭೇಟಿಯನ್ನು ಸ್ವಾಗತಿಸಿದ್ದು, ಇದು ನೆರೆಯ ದೇಶಗಳ ನಡುವೆ ಬಾಂಧವ್ಯ ಹೆಚ್ಚಿಸಲು ಅನುಕೂಲವಾಗಲಿದೆ.

ಅಲಿಪ್ತ ನೀತಿಗೆ ತಳಹದಿಯಾಗಿದ್ದ ಬಂಡುಂಗ್ ಸಮ್ಮೇಳನದ ಐವತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಭಾಗವಹಿಸಿದ್ದು, ಆಫ್ರಿಕಾ ಮತ್ತು ಏಶ್ಯಾ ದೇಶಗಳೊಂದಿಗೆ ಸಂಬಂಧ ವೃದ್ಧಿಸುವ ಅವಕಾಶ ಒದಗಿತು. ಅದೇ ಸಂದರ್ಭದಲ್ಲಿ ಮಾಸ್ಕೊದಲ್ಲಿ ಹಿಟ್ಲರ್‌ನ ನಾಝಿ ಫ್ಯಾಸಿಸಂನ ವಿರುದ್ಧ ಜಯ ಗಳಿಸಿದ 60ನೇ ವಾರ್ಷಿಕೋತ್ಸವನ್ನು ವಿಜೃಂಭಣೆಯಿಂದ ಆಚರಿಸಿದ್ದು ಪ್ರಧಾನಿ ಮನಮೋಹನ್ ಸಿಂಗ್ ಭಾಗವಹಿಸಿದ್ದಾರೆ. ಇದು ರಶ್ಯಾದೊಂದಿಗೆ ಸ್ನೇಹ ವೃದ್ಧಿಸಲು ಸಹಕಾರಿಯಾಗಿದೆ.

ಆದರೆ ನೇಪಾಳಕ್ಕೆ ಶಸ್ತ್ರ ಮಾರಾಟ ನಿಷೇಧವನ್ನು ಹಿಂತೆಗೆದುಕೊಂಡಿರುವುದು ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಆಘಾತ ತಂದಿದೆ. ಅಮೆರಿಕವು ಯುದ್ಧ ವಿಮಾನ ಮಾರಾಟ ಮಾಡಲು ಮುಂದೆ ಬಂದಿರುವುದನ್ನು ಎಚ್ಚರಿಕೆಯಿಂದ ಭಾರತ ನೋಡಬೇಕಾಗಿದೆ. ಹಾಗೂ ಅಮೆರಿಕಾದೊಂದಿಗೆ ಜಂಟಿ ಅಣ್ವಸ್ತ್ರ ರಕ್ಷಣಾ ವ್ಯವಸ್ಥೆ(MDS)ಯಲ್ಲಿ ಭಾಗವಹಿಸುವುದನ್ನು ಸಿಪಿಐ(ಎಂ) ವಿರೋಧಿಸಿದೆ.

ಬಿಜೆಪಿ ಬಹಿಷ್ಕಾರ :

ಚುನಾವಣೆ ನಡೆದು ಒಂದು ವರ್ಷ ಸಂದರೂ ಬಿಜೆಪಿ ಸಂಸತ್ತನ್ನೇ ಬಹಿಷ್ಕರಿಸಿ ಹೊರಗುಳಿದಿದೆ. ತಾವು ಅನುಭವಿಸಿದ ಸೋಲಿನಿಂದ ಇನ್ನೂ ಚೇತರಿಸಿಕೊಳ್ಳಲಾಗದ ಬಿಜೆಪಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು ನೀಡುತ್ತಿದೆ. ಬಿಜೆಪಿ ನಡೆಸುತ್ತಿರುವ ಸಂಸತ್ ಅಧಿವೇಶನದ ಬಹಿಷ್ಕಾರದಿಂದಾಗಿ, ಗ್ರಾಮೀಣ ಉದ್ಯೋಗ ಖಾತರಿ ಮಸೂದೆಯನ್ನು ಮಂಡಿಸಲು ಸಾಧ್ಯವಾಗಿಲ್ಲ. ಬಿಜೆಪಿ ನೇತೃತ್ವದ ಮೈತ್ರಿಕೂಟದಲ್ಲಿದ್ದ ತೆಲುಗುದೇಶಂ ಬಹಿಷ್ಕಾರವನ್ನು ತ್ಯಜಿಸಿ, ಸಂಸತ್ತಿಗೆ ಹಾಜರಾಗಿದೆ. ಸಂಸತ್ತಿನ ಬಹಿಷ್ಕಾರ ನೀತಿಯನ್ನು ಭಾರತದ ಜನತೆ ಒಪ್ಪುವುದಿಲ್ಲ ಎಂಬುದನ್ನು ಬಿಜೆಪಿಯು ಇತರ ಮೈತ್ರಿ ಪಕ್ಷಗಳು ಮನಗಾಣಬೇಕಾಗಿದೆ.

ಅಧಿಕಾರವಿಲ್ಲದ ಬಿಜೆಪಿ ಗೊಂದಲದಲ್ಲಿದ್ದು ಕಾಲ ಕಳೆಯುತ್ತಿದೆ. ಉಮಾ ಭಾರತಿ ಪ್ರಕರಣದ ನಂತರ, ಇದೀಗ ಇನ್ನೂ ಕೆಲವು ಭಿನ್ನಾಭಿಪ್ರಾಯಗಳು ಮೇಲೆದ್ದು ಬರುತ್ತಿವೆ. ಬಿಜೆಪಿಯ ಹಿರಿಯ ನಾಯಕ, ಆರ್‌ಎಸ್‌ಎಸ್‌ನ ಮುಖಂಡ ಹಾಗೂ ಗುಜರಾತಿನ ರಾಜ್ಯಪಾಲರಾಗಿದ್ದ ಸುಂದರ್ ಸಿಂಗ್ ಭಂಡಾರಿ, ಗುಜರಾತ್ ಗಲಭೆಯ ಸಂದರ್ಭದಲ್ಲಿ ಮೋದಿ ಸರ್ಕಾರ ಮತ್ತು ಅಂದಿನ ಕೇಂದ್ರ ಸರ್ಕಾರ ತಳೆದ ನಿಲುವನ್ನು ಕಟುವಾಗಿ ಟೀಕಿಸಿದ್ದಾರೆ. ಗಲಭೆ ನಡೆದು 3 ವರ್ಷಗಳ ಬಳಿಕವೂ61,000 ಜನರಿಗೆ ಯಾವುದೇ ಪುನರ್ವಸತಿ ಕಲ್ಪಿಸಲಾಗಿಲ್ಲ.

ರಾಜಸ್ತಾನದ ಭಿಲ್‌ವಾರಾದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ಸಂಘ ಪರಿವಾರವು ಹಿಂಸೆ ನಡೆಸಿದ್ದು ದೇಶದ ಜನತೆ ಖಂಡಿಸುವುದು ಮಾತ್ರವಲ್ಲದೆ, ಜನರನ್ನು ಜಾಗೃತಗೊಳಿಸ ಬೇಕಾಗಿದೆ.

ಸಿ.ಎ.ಜಿ. ವರದಿ

ಕೇಂದ್ರ ಆಡಿಟರ್ ಮತ್ತು ಕಂಟ್ರೋಲರ್ ಜನರಲ್ ಅವರ ವರದಿಯು, ಮುಂಬೈನ ಸೆಂಟಾರ್ ಹೋಟೆಲಿನ ಮಾರಾಟದಲ್ಲಿ ಅವ್ಯವಹಾರ ನಡೆದಿದೆ ಎಂಬುದನ್ನು ವಿಶದವಾಗಿ ವಿವರಿಸಿದೆ. ಕೇರಳದ ಕೋವಲಂ ಬೀಚ್ ಬಳಿಯಿರುವ ಐಟಿಡಿಸಿ ಹೋಟೆಲ್ ಮಾರಾಟದಲ್ಲಿ 65 ಎಕರೆ ಭೂಮಿಕೂಡಾ ಒಳಗೊಂಡಿದ್ದು ಇದರ ಬಗ್ಗೆ ಸಹ ತನಿಖೆ ನಡೆಸಬೇಕಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ಖಾಸಗಿಕರಣಕ್ಕೆ ಒತ್ತು ಕೊಟ್ಟು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿದ್ದು ಯಾಕೆ ಎಂಬುದರ ಬಗ್ಗೆ ಒಂದೊಂದೇ ಪ್ರಕರಣಗಳು ಬೆಳಕಿಗೆ ಬರುತ್ತಿದೆ. ತನ್ನ ಬೆಂಬಲಿಗರಲ್ಲಿ ಶ್ರೀಮಂತರಾದವರಿಗೆ ಕೋಟಿಗಟ್ಟಲೆ ಲಾಭ ಗಳಿಸಲು ಅನುವು ಮಾಡಿದೆ.

ಕೇಂದ್ರ ಸರ್ಕಾರದ ನೀತಿಗಳು

ಭಾರತದ ಖಾಸಗೀ ಬ್ಯಾಂಕುಗಳ ಶೇರುದಾರರಿಗೆ ಈಗಿರುವ ಶೇ 10 ರಷ್ಟು ಮತದಾನದ ಮಿತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿದೆ. ಈಗಾಗಲೇ ವಿದೇಶಿ ಬಂಡವಾಳವನ್ನು ಆಹ್ವಾನಿಸುವ ಹೆಸರಿನಲ್ಲಿ ಖಾಸಗಿ ಬ್ಯಾಂಕುಗಳಲ್ಲಿ ಶೇ 74 ರ ವರೆಗೆ ಬಂಡವಾಳ ಹೂಡಲು ಅನುಮತಿ ನೀಡಲಾಗಿದೆ. ಇದೀಗ ಶೇ 10 ರ ಮಿತಿಯನ್ನು ತೆಗೆದು ಹಾಕಿದಲ್ಲಿ ಭಾರತದ ಖಾಸಗಿ ಬ್ಯಾಂಕುಗಳನ್ನುವಹಿಸಿಕೊಳ್ಳಲು ವಿದೇಶಿ ಬಂಡವಾಳಕ್ಕೆ ತೆರೆದಿಟ್ಟಂತಾಗುತ್ತದೆ. ಶೇ 10 ರ ಮಿತಿಯನ್ನು ತೆಗೆದುಹಾಕಲು 'ಬ್ಯಾಂಕಿಂಗ್ ರೆಗ್ಯುಲೇಷನ್' ಕಾಯಿದೆಗೆ ತಿದ್ದುಪಡಿ ತರಬೇಕಾಗಿದ್ದು ಅದನ್ನು ವಿರೋಧಿಸಲು ನಿರ್ಧರಿಸಿದೆ.

ಅದೇ ರೀತಿಯಲ್ಲಿ ಸಾವಿರಾರು ಕೋಟಿ ರೂ. ಇರುವ ಪೆನ್ಷನ್ ನಿಧಿಯನ್ನು ಖಾಸಗೀಕರಿಸುವುದನ್ನು ವಿರೋಧಿಸಬೇಕಾಗಿದೆ.

ವಿಶೇಷ ಆರ್ಥಿಕ ವಲಯ ಮಸೂದೆಯನ್ನು ಸಂಸತ್ತಿನಲ್ಲಿ ಪಾಸು ಮಾಡಲಾಗಿದ್ದು, ಎಡ ಪಕ್ಷಗಳ ಮಧ್ಯಪ್ರವೇಶದಿಂದಾಗಿ 'ಈ ವಲಯಗಳಿಗೆ ಕಾರ್ಮಿಕ ಕಾನೂನುಗಳು ಅನ್ವಯವಾಗುವುದಿಲ್ಲ' ಎಂಬ ಕಲಂನ್ನು ತೆಗೆದುಹಾಕಲು ಸಾಧ್ಯವಾಗಿದೆ. ಅಂದರೆ ವಿಶೇಷ ಆರ್ಥಿಕ ವಲಯ(EPZ) ಗಳಲ್ಲಿ ಕಾರ್ಮಿಕ ಕಾನೂನುಗಳು ಅನ್ವಯವಾಗಲಿದೆ.

ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಖಂಡನೆ

ದೇಶದಾದ್ಯಂತ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದ್ದು ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯೊಬ್ಬರ ಮೇಲಿನ ಗ್ಯಾಂಗ್ ರೇಪ್, ಮುಂಬೈನ ಪೊಲೀಸ್ ಚೌಕಿಯಲ್ಲಿ ಬಂಧನದಲ್ಲಿದ್ದ ಮಹಿಳೆಯ ಮೇಲಿನ ಬಲಾತ್ಕಾರ, ಚಿಕ್ಕ ಹೆಣ್ಣು ಮಕ್ಕಳ ಮೇಲೆ ಕೂಡಾ ಬಲಾತ್ಕಾರಗಳು ದಿನೇದಿನೇ ಹೆಚ್ಚುತ್ತಿವೆ. ಮಧ್ಯ ಪ್ರದೇಶದಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟಲು ಹೋದ ಅಂಗನವಾಡಿ ಕಾರ್ಯಕರ್ತೆಯ ಕೈಗಳನ್ನು ದುಷ್ಕರ್ಮಿಗಳು ಕತ್ತರಿಸಿದ್ದು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಕ್ಕೆ ಸಿಪಿಐ(ಎಂ) ತೀವ್ರ ಕಳವಳ ವ್ಯಕ್ತಪಡಿಸಿದೆ.

ರೈತರ ಸಮಸ್ಯೆ:

ಮೆಣಸು, ಸಾಸಿವೆ, ಟಿ ಮತ್ತಿತರ ಕೃಷಿ ಉತ್ಪನ್ನಗಳ ಬೆಲೆ ತೀವ್ರ ಕುಸಿಯುತ್ತಿರುವುದರಿಂದ ಕೇಂದ್ರವು ಮಧ್ಯ ಪ್ರವೇಶಿಸಿ, ರೈತರ ರಕ್ಷಣೆಗೆ ಗಮನ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಯುಪಿಎ ಸರ್ಕಾರದ ಒಂದು ವರುಷ.......

ಪುಟ 6 ರಿಂದ

ಪೇಟೆಂಟ್ ಮಸೂದೆಯಲ್ಲಿ ತಿದ್ದುಪಡಿಗಳನ್ನು ತರಲಾಯಿತು; ವಿಮಾ ವಲಯದಲ್ಲಿ ಎಫ್‌ಡಿಐ ಮಿತಿಯನ್ನು ಏರಿಸಲಿಲ್ಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆಯಲ್ಲಿ ಇಳಿಕೆಯಾಯಿತು.


ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರಕಾರ ರೈತಾಪಿ ಜನಗಳಿಗೆ, ಕೃಷಿ ಕೂಲಿಕಾರರಿಗೆ, ಕೈಗಾರಿಕಾ ಕಾರ್ಮಿಕರಿಗೆ, ಕುಶಲಕೆಲಸಗಾರರಿಗೆ, ನಿರುದ್ಯೋಗಿ ಯುವಜನರಿಗೆ ಹಾಗೂ ಗ್ರಾಮೀಣ ಬಡವರಿಗೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಿದ ವಚನಗಳನ್ನು ಪಾಲಿಸುವಂತೆ ಪ್ರಚೋದಿಸಲು ನಿರಂತರ ಪ್ರಯತ್ನಗಳನ್ನು ನಡೆಸಬೇಕು. ಮುಂಬರುವ ದಿನಗಳಲ್ಲಿ, ಸಿಎಂಪಿಯಲ್ಲಿನ ಜನಪರ ಕ್ರಮಗಳ ಜಾರಿಯಾಗುವಂತೆ ಜನಸಮೂಹಗಳನ್ನು ಅಣಿನೆರೆಸುವುದನ್ನು, ಆಂದೋಲನಗಳನ್ನು ಸಿಪಿಐ(ಎಂ) ತೀವ್ರಗೊಳಿಸುತ್ತದೆ ಅದು ಹಣಕಾಸು ವಲಯವೂ ಸೇರಿದಂತೆ ಆಧಿಕಾರ ಪ್ರಧಾನ ವಲಯಗಳನ್ನು ವಿದೇಶೀ ಬಂಡವಾಳಕ್ಕೆ ವಹಿಸಿಕೊಡುವ ಕ್ರಮಗಳನ್ನೆಲ್ಲಾ ದೃಢವಾಗಿ ವಿರೋಧಿಸುತ್ತದೆ.

ದುಡಿಯುವ ಜನಗಳ ಮೂಲ ಹಿತಾಸಕ್ತಿಗಳಿಗೆ ಸಂಬಂಧಪಟ್ಟಂತೆ ಸಿಪಿಐ(ಎಂ) ಎಂದೂ ರಾಜಿ ಮಾಡಿಕೊಳ್ಳುವುದಿಲ್ಲ. ರಾಷ್ಟ್ರೀಯ ಸಾರ್ವಭೌಮತೆಯನ್ನು ಕುಂಠಿತಗೊಳಿಸುವ, ಅಥವಾ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಗಳಿಗೆ ಮಣಿಯುವ ಹಾಗೂ ದುಡಿಯುವ ಜನಗಳ ಬದುಕಿನ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುವ ಎಲ್ಲಾ ಕ್ರಮಗಳನ್ನು ವಿರೋಧಿಸುವಲ್ಲಿ ಎಡಪಕ್ಷಗಳ ದನಿ ಸಂಸತ್ತಿನ ಒಳಗೂ, ಹೊರಗೂ ನಿರಂತರವಾಗಿ ಬಲಿಷ್ಠವಾಗಿಯೇ ಇರುತ್ತದೆ.

ಯುಪಿಎ ಸರಕಾರಕ್ಕೆ ಎಡಪಕ್ಷಗಳ ಬೆಂಬಲವಿದೆ. ಅದೇ ವೇಳೆಗೆ, ಸಿಪಿಐ(ಎಂ) ಒಂದು ಸ್ವತಂತ್ರ ಪಾತ್ರವನ್ನು ವಹಿಸುತ್ತದೆ, ಜನತೆಯ ಹಿತಾಸಕ್ತಿಗಳ ಕಾವಲುಗಾರನಾಗಿ ಕೆಲಸ ಮಾಡುತ್ತದೆ. ಮುಂಬರುವ ದಿನಗಳಲಿ ಸಿಎಂಪಿಯಲ್ಲಿನ ಜನಪರ ಕ್ರಮಗಳು ಜಾರಿಯಾಗುವಂತೆ ಯುಪಿಎ ಸರಕಾರ ನೋಡಿಕೊಳ್ಳಬೇಕಾದರೆ ಹಾಗೂ ಬಿಜೆಪಿ ನೇತೃತ್ವದ ಸರಕಾರಕ್ಕಿಂತ ಭಿನ್ನವಾದ ಒಂದು ಹಾದಿಯನ್ನು ಹಿಡಿಯಬೇಕಾಗಿದೆ.



ಕೊಡಗಿನ ಚರಿತ್ರೆ ಎಂದರೆ ಕೇವಲ ಕೊಡವರ ಚರಿತ್ರೆ ಎಂಬ ಮಿಥ್ಯೆಯನ್ನು ಹರಡಲಾಗಿದೆ. ಕೇರಳದವರು, ಹೊರಗಿನವರು, ಇತರರು ಕೊಡಗನ್ನು ಆಕ್ರಮಿಸಿದ್ದಾರೆ ಎಂಬ 'ಪರಕೀಯ ಆಕ್ರಮಣ' ದ ಭೂತವನ್ನು ಸೃಷ್ಟಿಸಿ ಕೊಡಗು ಪ್ರತ್ಯೇಕತೆಯ ಕೂಗೆಬ್ಬಿಸಲಾಗಿದೆ. ಆದರೆ ಕೊಡವ, ಗೌಡ, ಮುಂತಾದ ಬಲಾಢ್ಯ ಜಾತಿಗಳನ್ನು ಹಾಗೂ ಈ ಭೂಮಾಲಿಕರನ್ನು ಬಿಟ್ಟು ಉಳಿದ ದಲಿತ ಕೆಳ ಜಾತಿಯ ಜನ, ಗಿರಿಜನ ಬುಡಕಟ್ಟುಗಳ ಜನರು ತಬ್ಬಲಿಗಳಾಗಿದ್ದಾರೆ. ಅವರಿಗೆ ಗುಡಿಸಲುಗಳಿಗೂ ಗತಿಯಿಲ್ಲವೆಂಬ ಅಡಗಿಸಿಟ್ಟ ಚರಿತ್ರೆಯನ್ನು ಡಾ. ವಿಜಯ್ ಪೂಣಚ್ಚ ತಂಬಂಡ ತಮ್ಮ ಪುಸ್ತಕದಲ್ಲಿ ಬಯಲು ಮಾಡಿದ್ದಾರೆ.



ಕೊಡಗು ಪ್ರತ್ಯೇಕತಾ ಚಳುವಳಿ ಅರ್ಥಹೀನ

ಚಿಂತಕರ ಅಭಿಮತ

'ಕನ್ನಡ ವಿಶ್ವವಿದ್ಯಾಲಯ, ಹಂಪಿ'ಯ ಪ್ರಸಾರಾಂಗವು ಪ್ರಕಟಿಸಿರುವ, ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ವಿಜಯ್ ಪೂಣಚ್ಚ ತಂಬಂಡ ಅವರ 'CONFLICTING IDENTITIES IN KARNATAKA ; SEPARATE SATE AND ANTI SEPARATE MOVEMENTS IN COORG' ಎಂಬ ಪುಸ್ತಕದ ಬಿಡುಗಡೆ ಕಾರ್ಯಕ್ರಮವು ಇದೇ 19 ಮೇ 2005 ರಂದು ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. 'ಅಧ್ಯಯನ' (ಬೆಂಗಳೂರು) ಸಂಸ್ಥೆಯು ಈ ಪುಸ್ತಕ ಬಿಡುಗಡೆ ಸಮಾರಂಭವನ್ನು ಏರ್ಪಡಿಸಿತ್ತು.

ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಡಾ. ಬಿ.ಎ.ವಿವೇಕರೈರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾದ ಎನ್.ಧರ್ಮಸಿಂಗ್‌ರವರು ಪುಸ್ತಕವನ್ನು ಬಿಡುಗಡೆ ಮಾಡಿದರು. ವಿರೋಧ ಪಕ್ಷದ ಮಾಜಿ ಮುಖಂಡರಾದ ಎ.ಕೆ.ಸುಬ್ಬಯ್ಯನವರು ಪುಸ್ತಕದ ಕುರಿತು ಮಾತನಾಡಿದರು.

ಕೊಡಗಿನ ಚರಿತ್ರೆ ಎಂದರೆ ಕೇವಲ ಕೊಡವರ ಚರಿತ್ರೆಯಲ್ಲ

ಕೊಡಗಿನ ಚರಿತ್ರೆ ಎಂದರೆ ಕೇವಲ ಕೊಡವರ ಚರಿತ್ರೆ ಎಂಬ ಮಿಥ್ಯೆಯನ್ನು ಹರಡಲಾಗಿದೆ. ಕೇರಳದವರು, ಹೊರಗಿನವರು, ಇತರರು ಕೊಡಗನ್ನು ಆಕ್ರಮಿಸಿದ್ದಾರೆ ಎಂಬ 'ಪರಕೀಯ ಆಕ್ರಮಣ' ದ ಭೂತವನ್ನು ಸೃಷ್ಟಿಸಿ ಕೊಡಗು ಪ್ರತ್ಯೇಕತೆಯ ಕೂಗೆಬ್ಬಿಸಲಾಗಿದೆ. ಆದರೆ ಕೊಡವ, ಗೌಡ, ಮುಂತಾದ ಬಲಾಢ್ಯ ಜಾತಿಗಳನ್ನು ಹಾಗೂ ಈ ಭೂಮಾಲಿಕರನ್ನು ಬಿಟ್ಟು ಉಳಿದ ದಲಿತ ಕೆಳ ಜಾತಿಯ ಜನ, ಗಿರಿಜನ ಬುಡಕಟ್ಟುಗಳ ಜನರು ತಬ್ಬಲಿಗಳಾಗಿದ್ದಾರೆ. ಅವರಿಗೆ ಗುಡಿಸಲುಗಳಿಗೂ ಗತಿಯಿಲ್ಲವೆಂಬ ಅಡಗಿಸಿಟ್ಟ ಚರಿತ್ರೆಯನ್ನು ಡಾ. ವಿಜಯ್ ಪೂಣಚ್ಚ ತಂಬಂಡ ತಮ್ಮ ಪುಸ್ತಕದಲ್ಲಿ ಬಯಲು ಮಾಡಿದ್ದಾರೆ.

ಕೊಡಗಿನ ಗಿರಿಜನರು, ಕುರುಬರು, ಕೆಳಜಾತಿಯ ಜನಗಳ ಹೆಸರುಗಳು ಮತದಾರರ ಪಟ್ಟಿಯಲ್ಲಿಯೇ ಇಲ್ಲ. ಅಂತಹ ಸ್ಥಿತಿಯಲ್ಲಿದ್ದಾರೆ ಅವರು. ಇಂತಹ ಅಡಗಿಸಿಟ್ಟ ಚರಿತ್ರೆಯ ಭಾಗವನ್ನು ಪೂಣಚ್ಚರವರು ದಿಟ್ಟತನದಿಂದ ತೆರೆದಿಟ್ಟಿದ್ದಾರೆ. ವಿಕೃತಗೊಂಡ ಚರಿತ್ರೆ ಎದುರು ಸತ್ಯಾಂಶವನ್ನಿಟ್ಟು ಚರಿತ್ರೆಯ ಅಧ್ಯಯನದಲ್ಲಿ ಒಂದು ಹೊಸ ಪ್ರಚೋದನೆ ನೀಡಿದ್ದಾರೆ ಎಂದು ಎ.ಕೆ.ಸುಬ್ಬಯ್ಯರವರು ಕೃತಿ ಹಾಗೂ ಲೇಖಕರ ಕುರಿತು ಹಾಗೂ ಕೊಡಗಿನ ಸಮಾಜದ ಕುರಿತು ತಮ್ಮ ವಿಶ್ಲೇಷಣೆ - ಅಭಿಪ್ರಾಯ ಮಂಡಿಸಿದರು. ಕೊಡವ ಜನಾಂಗ ಅತ್ಯಂತ ದಯನೀಯ ಸ್ಥಿತಿಯಲ್ಲಿದೆ ಎಂಬ ಸುಳ್ಳು ಪ್ರಚಾರದ ಮೂಲಕ ಅನುಕಂಪಗಳಿಸಿಕೊಳ್ಳುವ ವ್ಯವಸ್ಥಿತ ಪ್ರಯತ್ನವೂ ನಡೆದಿದೆ ಎಂದೂ, ಈ ಬಗ್ಗೆ ಎ.ಕೆ.ಸುಬ್ಬಯ್ಯನವರು ತೀವ್ರ ಆಕ್ಷೇಪವೆತ್ತಿದರು.

ಎಲ್ಲ ಸವಲತ್ತು ತಿಂದು ತೇಗಿದವರೇ ಇನ್ನೂ ಬೇಕು ಎನ್ನುತ್ತಿದ್ದಾರೆ-ಪ್ರತ್ಯೇಕತೆಯ ಬೊಬ್ಬೆ ಹಾಕುತ್ತಿದ್ದಾರೆ

ಅಸಮಾನತೆ-ಶೋಷಣೆ ಕರ್ನಾಟಕದ ಎಲ್ಲಾ ಭಾಗದಲ್ಲಿಯೂ ಇದೆ. ಭಾರತದಲ್ಲಿಯೂ ಇದೆ. ಯಾರು ಈ ಪ್ರಶ್ನೆಯನ್ನು ಎತ್ತಬೇಕು ಎಂಬುದು ಪ್ರಮುಖ ಪ್ರಶ್ನೆ. ಸಂವಿಧಾನದ ಎಲ್ಲ ಸೌಕರ್ಯಗಳು, ಸರಕಾರದ ಎಲ್ಲ ಸವಲತ್ತುಗಳನ್ನು ಕಬಳಿಸಿಕೊಂಡು ತಿಂದು ತೇಗಿದವರೇ ಮತ್ತೂ ಬೇಕು ಬೇಕು ಎನ್ನುತ್ತಿದ್ದಾರೆ.

ಫೀಲ್ಡ್ ಮಾರ್ಷಲ್‌ಗಳು, ಮೇಜರ್ ಜನರಲ್‌ಗಳು, IAS, IPSಗಳು ಹೀಗೆ ಸಮಾಜದಲ್ಲಿ ಅತ್ಯುನ್ನತ ಸ್ಥಾನಗಳ ಸೌಲಭ್ಯವನ್ನು ಪಡೆದ ಬಲಾಢ್ಯರೆಲ್ಲಾ ಈಗ ತಮ್ಮನ್ನು ಪರಿಶಿಷ್ಟ ಪಂಗಡ(ST) ಗುಂಪಿಗೆ ಸೇರಿಸಿ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಕೊಡಗಿನ ಶೇ 75-80 ರಷ್ಟು ಜನರಿಗೆ ಒಂದು ಹೊತ್ತಿನ ಊಟಕ್ಕೂ ಗತಿ ಇಲ್ಲ. ಓಟು ಹಾಕುವ ಶೇ 60-70 ರಷ್ಟು ದಲಿತ, ಹಿಂದುಳಿದ ಜಾತಿಯ ಜನಗಳಿಗೆ, ಗಿರಿಜನರಿಗೆ ಏನು ಸಿಕ್ಕಿದೆ ಎಂಬುದು ಬಹಳ ಗಂಭೀರವಾದ ಪ್ರಶ್ನೆ ಎಂದು ಪುಸ್ತಕದ ಕರ್ತೃ ಡಾ. ವಿಜಯ್ ಪೂಣಚ್ಚ ತಂಬಂಡರವರು ತಮ್ಮ ಪುಸ್ತಕದ ಆಶಯದ ಕುರಿತು ಮಾತನಾಡಿದರು.

ಪ್ರತ್ಯೇಕ ರಾಜ್ಯದ ಬೇಡಿಕೆ ಒಪ್ಪಲಾಗದು

ಸ್ವಾತಂತ್ರ್ಯಾನಂತರದಲ್ಲಿ 'ಆಂಧ್ರ' ಪ್ರತ್ಯೇಕ ರಾಜ್ಯಕ್ಕಾಗಿ ಆಂದೋಲನ ನಡೆಯಿತು. ಶ್ರೀರಾಮುಲು ಅಂತಹ ಹೋರಾಟಗಾರರು ಸತ್ಯಾಗ್ರಹ ಮಾಡಿದರು. ಈ ಚಳುವಳಿಯಲ್ಲಿ ಕಮ್ಯುನಿಸ್ಟರು ಪ್ರಧಾನ ಪಾತ್ರವಹಿಸಿದರು. ಜನ ಸಾಮಾನ್ಯರ ಹಿತಾಸಕ್ತಿ ಹಾಗೂ ಆಶಯಗಳ ಪರಿಣಾಮವಾಗಿ ಪ್ರತ್ಯೇಕ ರಾಜ್ಯದ ಕೂಗು ಆಗಾಗ ಕೇಳಿಬರುತ್ತಿರುತ್ತದೆ. ಆದರೆ ಕೊಡಗಿನ ಪ್ರಶ್ನೆ ಹಾಗಲ್ಲ. ವಿಶಾಲ ಕರ್ನಾಟಕದಲ್ಲಿ ಕೊಡಗು ಮುಂದುವರಿಯಬೇಕು ಎಂದು ಮುಖ್ಯಮಂತ್ರಿ ಎನ್.ಧರ್ಮಸಿಂಗ್ ರವರು ತಿಳಿಸಿದರು.

- **ಮುಖ್ಯಮಂತ್ರಿ ಧರಂಸಿಂಗ್‌ರಿಂದ ಪುಸ್ತಕ ಬಿಡುಗಡೆ**
- **ಕೃತಿಯ ಮೇಲೆ ಬೆಳಕು ಚೆಲ್ಲಿದ ಖ್ಯಾತ ವಕೀಲ ಎ.ಕೆ.ಸುಬ್ಬಯ್ಯ ಉಪಕುಲಪತಿ ಡಾ. ವಿವೇಕ ರೈ**
- **ವಿಶೇಷ ಉಪನ್ಯಾಸ ಮಂಡಿಸಿದ ಹಿರಿಯ ಪತ್ರಕರ್ತರಾದ ಕೆ.ಎನ್.ಹರಿಕುಮಾರ್**

ವಿಶ್ವ ವಿದ್ಯಾಲಯಗಳು ಎಡ ಪಂಥೀಯ ಚಿಂತಕರಿಂದ ತುಂಬಿ ಹೋಗಿವೆಯೆಂಬ ಆರೋಪಗಳಿವೆ. ಹೀಗೆ ಆರೋಪ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಏಕೆಂದರೆ ವಿಶ್ವ ವಿದ್ಯಾಲಯಗಳಿರುವುದು ಇಂತಹ ಉನ್ನತ ರಾಜಕೀಯ ಚಿಂತನೆಗಳನ್ನು ನಡೆಸಲಿಕ್ಕಾಗಿಯೇ ಎಂದ ಮುಖ್ಯಮಂತ್ರಿಗಳು, ನಕ್ಸಲೀಯರ ಪ್ರಶ್ನೆ ಭಿನ್ನ, ಸಾಮಾಜಿಕ - ಆರ್ಥಿಕ ಕಾರಣಗಳಿಗಾಗಿ ನಕ್ಸಲ್‌ವಾದ ಹುಟ್ಟಿಕೊಂಡಿದ್ದರೂ, ಬುಲೆಟ್‌ನಿಂದ ಜನರ ಸಮಸ್ಯೆಗೆ ಪರಿಹಾರ ಸಿಗದು. ನಕ್ಸಲೀಯರು ಹಿಂಸಾಚಾರದ ಹಾದಿ ಹಿಡಿದರೆ ಸರ್ಕಾರ ಸೂಕ್ತವಾಗಿ ಪ್ರತಿಕ್ರಿಯಿಸಬೇಕಾಗುತ್ತದೆಂದರು.

ಕೊಡಗು ಎಂದರೆ ಕೇವಲ ಕೊಡವರಲ್ಲ, ಎಳವರು, ಕುಡಿಯರು, ಹೊಲೆಯರು, ಕುರುಬರು, ಹೆಬ್ಬಟ್ಟಿಯವರು ಎಲ್ಲರೂ ಇದ್ದಾರೆ.


ಪುಸ್ತಕ ಬಿಡುಗಡೆ: ಡಾ. ಪ್ರಕಾಶ್ ಸಿ.ರಾವ್, ಡಾ. ಟಿ.ಎ. ವಿವೇಕ ರೈ, ಎ.ಕೆ.ಸುಬ್ಬಯ್ಯ, ಮುಖ್ಯಮಂತ್ರಿ ಧರಂಸಿಂಗ್, ಎನ್.ಹರಿಕುಮಾರ್, ಲೇಖಕರಾದ ಡಾ. ವಿಜಯ ಪೂಣಚ್ಚ ತಂಬಂಡ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಬಿ.ಎ.ವಿವೇಕ ರೈರವರು ಮಾತನಾಡಿ ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲೆ ಹಲವು ತಪ್ಪುಗಳಾಗಿವೆ. ಕೇರಳದಲ್ಲಿ ಅಯ್ಯಪ್ಪ, ಪಶ್ಚಿಮ ಬಂಗಾಳದಲ್ಲಿ ದುರ್ಗೆ ಪ್ರಶ್ನೆಯನ್ನು ಒಂದು ಸಾಂಸ್ಕೃತಿಕ ಪ್ರಶ್ನೆಯನ್ನಾಗಿ ನೋಡುವುದರಿಂದಲೇ ಅಲ್ಲಿ ಎಡ ಪಂಥೀಯ ಚಳುವಳಿ ಬಲವಾಗಿವೆ. ಸಾಂಸ್ಕೃತಿಕ ಪ್ರಶ್ನೆ ಒಂದು ಮುದ್ದೆಯಲ್ಲ. ಎಡ ಪಂಥೀಯತೆಗೆ ಕೇರಳ ಬಂಗಾಳದಂತೆ ಎಲ್ಲೆಡೆ ಈ ಬಗ್ಗೆ ವಿಭಿನ್ನ ಧೋರಣೆ ಬೇಕು. ಅಭಿವೃದ್ಧಿಯ ಪರಿಕಲ್ಪನೆಯೂ ಬದಲಾಗಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಿ ನೋಡಿದರೂ ಒಂದು ಪ್ರಾಣಿಯೂ ಕಂಡು ಬರುವುದಿಲ್ಲ. ಬಳ್ಳಾರಿಯಲ್ಲಿ ಎಲ್ಲೆಲ್ಲಿಯೂ ಪ್ರಾಣಿಗಳು ಕಂಡು ಬರುತ್ತವೆ. ಅದೂ ಒಂದು ಶ್ರೀಮಂತಿಕೆ. ಬಳ್ಳಾರಿ ಜಿಲ್ಲೆ ರಾಜ್ಯಕ್ಕೆ ಅತಿ ಹೆಚ್ಚು ತೆರಿಗೆ ಕೊಡುತ್ತದೆ. ಆಣೆಕಟ್ಟು- ಅಣುಸ್ಥಾವರ ಮಾತ್ರವೇ ಅಭಿವೃದ್ಧಿಯಲ್ಲ. ಹೈದ್ರಾಬಾದ್ ಕರ್ನಾಟಕದಲ್ಲಿ ಎಲ್ಲೆಡೆ ಚಿತ್ರಕಲೆ ವ್ಯಾಪಕವಾಗಿ ಹರಡಿದೆ ಅದೂ ಒಂದು ಬಗೆಯ ಅಭಿವೃದ್ಧಿಯೇ ಹೌದು.

ಕೊಡಗು ಎಂದರೆ ಕೇವಲ ಕೊಡವರಲ್ಲ, ಎಳವರು, ಕುಡಿಯರು, ಹೊಲೆಯರು, ಕುರುಬರು, ಹೆಬ್ಬಟ್ಟಿಯವರು ಹೀಗೆ ಎಲ್ಲರೂ ಇದ್ದಾರೆ.

ಪ್ರತ್ಯೇಕ ರಾಜ್ಯದ ಘೋಷಣೆಗಳನ್ನು ತಮಗೆ ರಾಜಕೀಯ ನೆಲೆಯನ್ನು ಕಂಡು ಕೊಳ್ಳುವ ಸಲುವಾಗಿ ರಾಜಕೀಯ ಪಕ್ಷಗಳು ಹಿಡಿದುಕೊಳ್ಳುತ್ತವೆ. ಭಾಷೆ ಎನ್ನುವುದು ಮಾಹಿತಿ ಜಾಲದ ಕೊಂಡಿ ಎಂದು ವಿವೇಕ ರೈ ರವರು ಕೊಡಗು ಸೇರಿದಂತೆ ಪ್ರತ್ಯೇಕವಾದಿ ಘೋಷಣೆಗಳನ್ನು ವಿಶ್ಲೇಷಿಸಿದರು ಮತ್ತು ಬಲ ಪಂಥೀಯ ಅತಿರೇಕ, ಮತ್ತೊಂದೆಡೆ ಎಡ ಪಂಥೀಯ ಅತಿ ರೇಕವು ಪ್ರತ್ಯೇಕತೆಗೆ ಹೇಗೆ ಬೆಂಬಲ ನೀಡಿದೆ ಎಂಬುದನ್ನು ಸಂಘ ಪರಿವಾರ ಹಾಗೂ ಸಿಪಿಐ(ಎಂ-ಎಲ್) - ನಕ್ಸಲ್ ಹಿನ್ನೆಲೆಯ ಸಂಘಟನೆಗಳು ಕೊಡಗು ಪ್ರತ್ಯೇಕತಾ ಚಳುವಳಿಗೆ ಬೆಂಬಲ ನೀಡಿರುವ ಹಿನ್ನೆಲೆಯಲ್ಲಿ ಅವರು ವಿಶ್ಲೇಷಿಸಿದರು.

ಭಾಷಾ ಸೌಹಾರ್ದತೆ - ಅನನ್ಯತೆಯ ಗುರುತಿಸುವಿಕೆ ಇಂದಿನ ಅಗತ್ಯ

ಇದೇ ಪುಸ್ತಕ ಬಿಡುಗಡೆ ಸಮಾರಂಭದ ಸಂದರ್ಭದಲ್ಲಿ "ಕರ್ನಾಟಕದಲ್ಲಿ ಭಾಷಿಕ ಅನನ್ಯತೆ" ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸವನ್ನು ಸಹ ಸಂಘಟಿಸಲಾಗಿತ್ತು. ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಸಮೂಹದ ಪ್ರಧಾನ ಸಂಪಾದಕರಾಗಿದ್ದ, ಈಗ ಕಾವೇರಿ ಕಮ್ಯುನಿಕೇಶನ್‌ನ ವ್ಯವಸ್ಥಾಪಕ ನಿರ್ದೇಶಕರಾಗಿರುವ ಕೆ.ಎನ್. ಹರಿಕುಮಾರ್‌ರವರು ಉಪನ್ಯಾಸ ನೀಡಿದರು. ಅವರು ಒಂದು ಪ್ರದೇಶದ ಪ್ರಧಾನ ಭಾಷೆಯ ಜೊತೆಗೆ ಜನ ಸಮುದಾಯಗಳ ವಿವಿಧ ಭಾಷೆಗಳ ನಡುವೆ ಸೌಹಾರ್ದ ಸಂಬಂಧ ಏರ್ಪಡಿಸಿಕೊಳ್ಳುವ ಮೂಲಕ ಪ್ರಧಾನ ಹಾಗೂ ಉಪ ಸಂಸ್ಕೃತಿ ಅನನ್ಯತೆಯನ್ನು ಗುರುತಿಸುವುದು ಇಂದಿನ ಸಂದರ್ಭದಲ್ಲಿ ರಾಜ್ಯದ, ದೇಶದ ಹಾಗೂ ಜಗತ್ತಿನ ಅಗತ್ಯವಾಗಿದೆ. ಕರ್ನಾಟಕದಲ್ಲಿ ರೂಪುಗೊಂಡ ಸಂಗೀತ ಶೈಲಿಯಾದ ಕರ್ನಾಟಕ ಸಂಗೀತವನ್ನು ತೆಲುಗು-ತಮಿಳು ಭಾಷೆಗಳು ನಿರಾಕರಿಸಿಲ್ಲ, ಒಪ್ಪಿಕೊಂಡಿವೆ. ಇಂತಹ ಸೌಹಾರ್ದತೆ ರಾಜ್ಯದ, ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಅಗತ್ಯವಾದದ್ದು. ಸುಮಾರು 20 ಭಾಷೆಗಳನ್ನೊಳಗೊಂಡ 'ಯುರೋಪಿಯನ್ ಒಕ್ಕೂಟ' ಇಂತಹ ಸೌಹಾರ್ದತೆಯ ಇತ್ತೀಚಿನ ಸಂಕೇತ ಎಂದು ಹರಿಕುಮಾರ್ ತಮ್ಮ ಉಪನ್ಯಾಸದಲ್ಲಿ ವಿವರಿಸಿದರು.

ವರದಿ : **ಆರ್.ರಾಮಕೃಷ್ಣ**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್

ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,

ಮುದ್ರಣ: ಹಣು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH